ಶ್ರೀ ಜೆ.ಸಿ.ಮಾಧುಸ್ವಾಮಿ : ಇದರಲ್ಲಿ ತಿದ್ದುಪಡಿ ಮಾಡಬೇಕು, ಎರಡೂವರೆ ಮಂತ್ರಿಗಳು ಇರುವಂಥಾದ್ದು, ಮೂರು ಜನ ಮಂತ್ರಿಗಳು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಇರಲಿ, ಮೂರು ಜನ ಮಂತ್ರಿಗಳು ಇರುವುದು. ಮಾನ್ಯ ಅಧ್ಯಕ್ಷರೆ, ತಾವು ಹೇಳಬೇಕು. ಈ ಶಾಸನ ಸಭೆ ನಡೆಯುತ್ತಿರುವಂಥಾದ್ದು ಮೊದಲನೆಯ ದಿವಸವಾಗಿದೆ. ಅದರಲ್ಲೂ ಆಯವ್ಯಯದ ಬಹಳ ಪರಮ ಪವಿತ್ರವಾದಂತಹ ಆರಂಭದ ದಿವಸವಾಗಿದೆ. ಇಲ್ಲಿ 13 ಜನ ಅಂದರೆ, ತಾವು ಅಧ್ಯಕ್ಷರು, ಈ ಬಗ್ಗೆ ಹೇಳಬೇಕು.

ಶ್ರೀ ಬಿ.ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಚರ್ಚೆಯನ್ನು ಮುಂದುವರೆಸಲಿ, ಅದನ್ನು ನಾನು ನೋಟ್ ಮಾಡಿಕೊಂಡು ಮಾನ್ಯ ಗೃಹಮಂತ್ರಿಯವರಿಗೆ ಹೇಳುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ವಿಷಯಗಳನ್ನು ನೋಟ್ ಮಾಡಿಕೊಳ್ಳುವುದಕ್ಕೆ ಇಷ್ಟು ಜನರು ಇದ್ದಾರೆ. ಇಲ್ಲಿ ಎಸ್ಟಾಬ್ಲಿಶ್‌ಮೆಂಟ್ ಎಲ್ಲಾ ನೋಟ್ ಮಾಡಿಕೊಳ್ಳುವಂಥಾದ್ದಕ್ಕೆ ಇರುವುದು. ಇವರು ಮಾತು ಮಾತಿಗೂ ನೋಟ್ ಮಾಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಇಲ್ಲಿ ಅದು ನೋಟ್ ಆಗುವುದಿಲ್ಲವೇ?

ಅಧ್ಯಕ್ಷರು : ಆಯಿತು ಬಿಡಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಇವರು ಇಷ್ಟು ಸಣ್ಣದಾಗಿ ಯೋಚನೆ ಮಾಡುತ್ತಾರೆಂದು ನಾವು ತಿಳಿದುಕೊಂಡಿರಲಿಲ್ಲ. ಇಲ್ಲಿ ನೀವು ಬೇರೆ, ನಾವು ಬೇರೆಯೆಂಬ ಭಾವನೆಯೇ ಇಲ್ಲ ನನಗೆ, ನಾವೆಲ್ಲರೂ ಒಂದೇ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಏನಾಯಿತೆಂದರೆ, ತೀರಾ "ವ್ರತ ಕೆಟ್ಟರೂ ಸುಖ ಇರಬೇಕು" ಆ ಸುಖ ಇಲ್ಲ. ಜಾತಿ ಕೆಟ್ಟು ಅಲ್ಲಿ ಕುಳಿತುಕೊಂಡು, ಮತ್ತೆ ನಮ್ಮನ್ನೂ ಜಾತಿ ಕೆಡಿಸುವುದಕ್ಕೆ ಹೋಗಿದ್ದಾರೆ. ಅವರು ಆ ಕಡೆಗೆ ಹೋಗಬಾರದಿತ್ತು, ಹೋಗಿದ್ದಾರೆ. ಆದರೆ ಅವರಿಗೆ ಸುಖವೇ ಇಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ್ದು ಸತ್ಯ. ಅವರಿಗೆ ಆ ಭಾವನೆಯೇ ಇಲ್ಲ. ಇಲ್ಲಿ ಆಳುವ ಪಕ್ಷ ಬೇರೆ ವಿರೋಧ ಪಕ್ಷ ಬೇರೆ ಎಂದು ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ವಾಟಾಳ್ ನಾಗರಾಜ್‌ರವರೆ, ಅವರು ಹೇಳಿದ್ದು, ಅವರು ನಿಮ್ಮ ಜೊತೆಗೆ ಇದ್ದಾರೆಂದು ಹೇಳಿದ್ದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರು ಒಬ್ಬರೇ ಅಲ್ಲ, ನೀವು ನಮ್ಮ ಜೊತೆಗೆ ಇದ್ದೀರಿ.

Sri Basavaraja Rayareddy : I am with you guy.

ನಾನು ನಿಮ್ಮ ಜೊತೆಗೆ ಇದ್ದೇನೆ.

5. ನಿಯಮ 69ರ ಮೇರೆಗೆ ಚರ್ಚೆಮುಂದುವರೆದಿದೆ

ವಿಷಯ : ರಾಜ್ಯದಲ್ಲಿ ನಕ್ಸಲೀಯರ ಚಟುವಟಿಕೆ ಹೆಚ್ಚಾಗಿರುವ ಬಗ್ಗೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ತಾವು ಬಹಳ ಮುಖ್ಯವಾದಂತಹ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ನಾವು ನಿಮಗೆ ನಿಜವಾಗಿಯೂ ಧನ್ಯವಾದಗಳನ್ನು ಅರ್ಪಿಸಬೇಕು, ಏಕೆಂದರೆ ಇವತ್ತು ಇಡೀ ದೇಶದಲ್ಲಿ, ಅದರಲ್ಲೂ ವಿಶೇಷವಾಗಿ ನಮ್ಮ ರಾಜ್ಯದಲ್ಲಿ, ಬಹಳ ಗಂಭೀರವಾಗಿ ಚರ್ಚೆಯಾಗುತ್ತಿರುವಂತಹದ್ದು. ಈ ನಕ್ಸಲೀಯರ ಚಟುವಟಿಕೆಗಳ ಬಗ್ಗೆ ಚರ್ಚೆಯಾಗುತ್ತಿದೆ. ಇದು ತಾತ್ವಿಕವಾದಂತಹ ವಿಚಾರ, ಇದನ್ನು ನಾನು ರಾಜಕೀಯ ವಿಚಾರವೆಂದು ಭಾವಿಸುವುದಿಲ್ಲ. ಇದು ಬಹಳ ಮೂಲಭೂತವಾಗಿ ತಾತ್ವಿಕವಾದ ವಿಚಾರವಾಗಿದೆ. ಆದರೆ ಈ ತಾತ್ವಿಕವಾದಂತಹ ವಿಚಾರವನ್ನು ತಿರುಚಿ, ಅದನ್ನು ತಪ್ಪು ದಾರಿಗೆ ಎಳೆದುಕೊಂಡು ಹೋಗುವಂತಹ, ಪ್ರಜ್ಞಾಪೂರ್ವಕವಾದಂತಹ ಪ್ರಯತ್ನವನ್ನು ಕೆಲವು ಶಕ್ತಿಗಳು ಮಾಡುತ್ತಿರುವಂಥಾದ್ದನ್ನು, ನಾವು ಈ ರಾಜ್ಯದಲ್ಲಿ ಪ್ರತ್ಯೇಕವಾಗಿ ನೋಡುತ್ತಿದ್ದೇವೆ. ನಾನು ಮಹಾತ್ಮ ಗಾಂಧೀಜಿಯವರನ್ನು ಕೊಲೆ ಮಾಡಿದಂತಹ ಸಂದರ್ಭದಲ್ಲಿ, ಈ ದೇಶದಲ್ಲಿ ಹುಟ್ಟಿರಲಿಲ್ಲ. ಅವತ್ತಿನ ಮಾಧ್ಯಮಗಳ ಪರಿಸ್ಥಿತಿ ಹೇಗೆ ಇತ್ತೆಂಬುದು ನನಗೆ ಗೊತ್ತಿಲ್ಲ. ಆದರೆ ಮೊನ್ನೆ ಸಾಕೇತ್‌ರಾಜ್‌ನನ್ನು ಕೊಲೆ ಮಾಡಿದಂತಹ ಸಂದರ್ಭದಲ್ಲಿ, ಇಡೀ ದೇಶದ ಮಾಧ್ಯಮಗಳು ವರ್ತಿಸಿದಂತಹ ವಿಧಾನ, ಕೊಟ್ಟಂತಹ ಪ್ರಚಾರವನ್ನು ನೋಡಿದರೆ, ಮಹಾತ್ಮ ಗಾಂಧೀಜಿಯವರನ್ನು ಕೊಲೆ ಮಾಡಿದಂತಹ ಸಂದರ್ಭದಲ್ಲಿ ಇಷ್ಟು ಪ್ರಚಾರವನ್ನು ಕೊಟ್ಟಿದ್ದರಾ ಎನ್ನುವಂತಹ ಅನುಮಾನ ನನಗೆ ಬರುತ್ತದೆ. ಇವತ್ತು ನಮ್ಮ ಸ್ಥಿತಿ ಎಲ್ಲಿಗೆ ತಲುಪಿದೆ ಎಂದರೆ . . . .

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಗೃಹ ಕಾರ್ಯದರ್ಶಿಯವರಾದರೂ ಇರಬೇಕಲ್ಲಾ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರ ಆಫೀಸರ್ಸ್ ಇದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಗೃಹ ಕಾರ್ಯದರ್ಶಿಯವರಾದರೂ ಇರಬೇಕಲ್ಲಾ . .

ಮಾನ್ಯ ಸದಸ್ಯರು : ಶ್ರೀ ಬಿಪಿನ್ ಗೋಪಾಲಕೃಷ್ಣ ಇದ್ದಾರೆ, ಪೊಲೀಸ್ ಕಮೀಷನರ್ ಇದ್ದಾರೆ, ಸಾಕು ಬಿಡಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಗೃಹ ಕಾರ್ಯದರ್ಶಿಯವರನ್ನು ಕರೆಸಿದರೆ ಉತ್ತಮ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಭೆಯಲ್ಲಿ ಗೃಹ ಮಂತ್ರಿಯವರು ಇರಬೇಕಾಗಿತ್ತು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿ) : ನಾನು ಇದ್ದೇನಲ್ಲಾ . .

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಆಯಿತು, ಮಾನ್ಯ ಸಿದ್ದರಾಮಯ್ಯನವರು ಸಭೆಯಲ್ಲಿ ಇದ್ದರೆ, ನಮಗೆ ಎಲ್ಲಾ ಇದ್ದ ಹಾಗೆ . .

ಅಧ್ಯಕ್ಷರು : ಅವರು ಬರುತ್ತಾರೆ, ನಾನು ಹೇಳಿಕಳುಹಿಸಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾವು ಯಾವ ಸ್ಥಿತಿಗೆ ತಲುಪಿದ್ದೇವೆಂದರೆ, ಯಾವುದನ್ನು ಎಷ್ಟು ವೈಭವೀಕರಣ ಮಾಡುವುದಕ್ಕೆ ಅವಶ್ಯಕತೆ ಇಲ್ಲವೋ ಅಷ್ಟನ್ನು ವೈಭವೀಕರಣ ಮಾಡಿದ್ದು, ಮತ್ತು ವಾಸ್ತವಾಂಶಗಳನ್ನು ತಿರುಚಿದ್ದು, ಕೆಲವು ಪತ್ರಿಕೆಗಳು ಬರೆದಿತ್ತು. ಸಾಕೇತ್

ರಾಜನ್‌ರವರನ್ನು ಕೊಲೆ ಮಾಡಿದಂತಹ ಸಂದರ್ಭದಲ್ಲಿ ಫಿಡಲ್ ಕ್ಯಾಸ್ಟ್ರೊ, ಶೇಕ್‌ಅವೇರಾ, ಕ್ರಿಸ್ಟಫರ್ ಕಾರ್ಡ್‌ವೆಲ್, ಭಗತ್‌ಸಿಂಗ್‌ಗೆ ಹೋಲಿಕೆ ಮಾಡಿದರು. ನಾನು ಪ್ರಾಮಾಣಿಕವಾಗಿ ಬರೆದಂತಹ ವ್ಯಕ್ತಿಯನ್ನು ಕೇಳುತ್ತೇನೆ. ಕ್ರಿಸ್ಟ್‌ಫರ್ ಕಾರ್ಡ್‌ವೆಲ್ ಎಲ್ಲಿದ್ದ, ಏನು ಮಾಡಿದರು ಎಂಬ ಬಗ್ಗೆ ಅವರಿಗೆ ಗೊತ್ತಿದೆಯಾ ಎಂದು. ಈ ಕ್ರಿಸ್ಟ್‌ಫರ್ ಕಾರ್ಡ್‌ವೆಲ್ ಜಗತ್ತಿನ ಒಬ್ಬ ಸುಪ್ರಸಿದ್ಧ ತತ್ವಶಾಸ್ತ್ರಜ್ಞರ ಸಾಲಿಗೆ ಸೇರತಕ್ಕಂಥ ವ್ಯಕ್ತಿ, ಇವರು ಅತಿ ಸಣ್ಣ ವಯಸ್ಸಿನಲ್ಲಿಯೇ, ಸ್ಪ್ಯಾನಿಷ್ ಅಂತರ್ ಯುದ್ಧದಲ್ಲಿ ಮಾರ್ಕೊಸ್ ಸೈನ್ಯಕ್ಕೆ ಬಲಿಯಾದಂತಹ ಒಬ್ಬ ಮಹಾನ್ ತತ್ವಜ್ಞಾನಿ, ಹಾಗೂ ಕ್ರಾಂತಿಕಾರಿ ಆತ. ಆತನ ವಿಚಾರವೇ ಗೊತ್ತಿಲ್ಲದೆ ಇರುವವರು ಸಾಕೇತ್‌ರಾಜನ್ ಅನ್ನು ಕ್ರಿಸ್ಟಫರ್ ಕಾರ್ಡ್‌ವೆಲ್‌ಗೆ ಹೊಲಿಸಿರುವಂಥಾದ್ದು. ಈ ಕ್ರಿಸ್ಟಫರ್ ಕಾರ್ಡ್‌ವೆಲ್ ಎಂತಹ ತತ್ವಜ್ಞಾನಿ ಎಂದರೆ ಹೆಗೆಲ್, ಮಾರ್ಕ್ಸ್ ನಂತರದ ಸುಪ್ರಸಿದ್ಧ ತತ್ವಶಾಸ್ತ್ರಜ್ಞರ ಮೊದಲನೆಯ ಸಾಲಿಗೆ ಸೇರತಕ್ಕಂಥವರು. ಇವರ ಸಾಹಿತ್ಯವನ್ನು ಓದಿದರೆ ಗೊತ್ತಾಗುತ್ತದೆ, ಇವರು ಎಂತಹ ಮಹಾನ್ ತತ್ವಶಾಸ್ತ್ರಜ್ಞ ಎಂದು. ಇಂಥವರನ್ನು ಸಾಕೇತ್‌ರಾಜನ್‌ಗೆ ಹೊಲಿಸಿದ್ದಾರೆ. ಇನ್ನು ಶೇಕ್‌ಅವೇರಾ, ಇಡೀ ಲ್ಯಾಟಿನ್ ಅಮೇರಿಕಾದ ತುಳಿತಕ್ಕೆ ಒಳಗಾದಂತಹ ಜನರನ್ನು ಸಂಘಟನೆ ಮಾಡಿ, ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಿರುದ್ಧ ನೇರವಾಗಿ ಘರ್ಷಣೆಯನ್ನು ನಡೆಸಿದಂತಹ ಒಬ್ಬ ಮಹಾನ್ ಕ್ರಾಂತಿಕಾರಿಯನ್ನು ಹೋಲಿಸಿದ್ದು. ಫಿಡಲ್‌ಕ್ಯಾಸ್ಟ್ರೊ, ಈಗಲೂ ಜೀವಂತವಾಗಿ, ದಂತ ಕತೆಯಾಗಿ, ಕ್ಯೂಬಾದಲ್ಲಿ ಉಳಿದಿದ್ದಾರೆ. ಅಮೇರಿಕನ್ ದೈತ್ಯಶಕ್ತಿಯ ವಿರುದ್ಧ ಹೋರಾಟವನ್ನು ನಡೆಸುತ್ತಾನೆ. ಇವರು ಕ್ಯೂಬ ರಾಷ್ಟ್ರವನ್ನು ರಕ್ಷಣೆ ಮಾಡಿಕೊಂಡು ಬರುತ್ತಿರುವಂತಹ ಒಬ್ಬ ಮಹಾನ್ ನಾಯಕರಾಗಿದ್ದಾರೆ. ಆತನಿಗೆ ಇವನನ್ನು ಹೋಲಿಸುವಂಥಾದ್ದು. ಇಡೀ ಭಾರತ ದೇಶ ಹೆಮ್ಮೆ ಪಡುವಂತಹ ಒಬ್ಬ ಪುತ್ರನನ್ನು ಪಡೆದಿದ್ದೇವೆ, ಅವರು ಭಗತ್‌ಸಿಂಗ್, ಇಡೀ ಭಾರತ ದೇಶ ಹೆಮ್ಮೆ ಪಡುವಂತಹ ವ್ಯಕ್ತಿಯಾಗಿದ್ದಾರೆ. ಆತನಿಗೆ ಹೋಲಿಸುವಂಥಾದ್ದು, ನಾವು ಎಲ್ಲಿಗೆ ತಲುಪಿದ್ದೇವೆ? ನಾಳೆ ದಿವಸ ಗಾಂಧೀಜಿಯವರನ್ನು ಕೂಡ ಇನ್ನು ಯಾರಿಗಾದರೂ ಹೋಲಿಸಿ ಬಿಡುತ್ತಾರೆನೋ, ಎಂಬ ಭಯ ಬಂದು ಬಿಟ್ಟಿದೆ. ಶೇಕ್ ಎವೇರಾರವರ ಇತಿಹಾಸ ಗೊತ್ತಿಲ್ಲ. ಫಿಡಲ್ ಕ್ಯಾಸ್ಟ್ರೊ ಇತಿಹಾಸ ಗೊತ್ತಿಲ್ಲ. ಕ್ರಿಸ್ಟಫರ್ ಕಾರ್ಡ್‌ವೆಲ್‌ರವರ ಇತಿಹಾಸ ಗೊತ್ತಿಲ್ಲ. ಇಲ್ಲಿ ಯಾರು ಯಾರಿಗೊ ಹೋಲಿಸಿ ಬಿಡುವರು. ಇಲ್ಲಿ ಭಗತ್ ಸಿಂಗ್‌ನ ಇಡೀ ಜೀವನವನ್ನು ಅಭ್ಯಾಸ ಮಾಡಿದರೆ ಗೊತ್ತಾಗುತ್ತದೆ. ಈ ವ್ಯಕ್ತಿ ಹಿಂಸೆಯನ್ನಾಗಲೀ ಕೊಲೆಗಳನ್ನು ಯಾವತ್ತೂ ಅವನು ಸಮರ್ಥನೆಯನ್ನು ಮಾಡಿದವನಲ್ಲಾ ಇವನು ಸೆಂಟ್ರಲ್ ಹಾಲ್‌ನಲ್ಲಿ ಬಾಂಬ್ ಹಾಕಿ, ಯಾರಿಗೂ ಗಾಯ ಆಗದ ಹಾಗೆ, ಪೊಲೀಸರಿಗೆ ತಾನೇ ಸಿಕ್ಕಿ, ಅವನು ನಾನು ಬಾಂಬನ್ನು ಹಾಕಿ, ಓಡಿ ಹೋಗುವವನಲ್ಲ. ಇಲ್ಲಿ ಕಿವುಡನೊಬ್ಬನಿಗೆ ಕೇಳಬೇಕಾದರೆ ಗಟ್ಟಿಯಾಗಿ ಕೂಗಬೇಕು, ಅದಕ್ಕೋಸ್ಕರ ನಾನು ಬಾಂಬನ್ನು ಹಾಕಿದ್ದು, ನನಗೆ ಯಾರನ್ನು ಸಾಯಿಸಬೇಕೆಂಬ ಉದ್ದೇಶವಿಲ್ಲವೆಂಬ ಮಾತನ್ನು ನೇರವಾಗಿ ಪೊಲೀಸರಿಗೆ ಭಗತ್‌ಸಿಂಗ್ ಹೇಳಿದರು. ಇವರನ್ನು ಮಾರ್ಚ್ 23 ರಂದು ಕೊನೆ ಗಳಿಗೆಯಲ್ಲಿ ಲಾಹೋರ್ ಜೈಲಿನಲ್ಲಿ, ನೇಣುಗಂಬಕ್ಕೆ ಹಾಕುವ ಸಂದರ್ಭದಲ್ಲಿ, 22ನೇ ದಿವಸದಂದು ಬೆಳಿಗ್ಗೆ ಅವರ ತಂದೆ ಜೈಲಿಗೆ ಬರುತ್ತಾರೆ. ಅವರು ಮಗನನ್ನು ಭೇಟಿ ಮಾಡಬೇಕೆಂದು ಬರುತ್ತಾರೆ. ಅಧಿಕಾರಿಗಳು ಬಂದು ಭಗತ್‌ಸಿಂಗ್‌ಗೆ ನಿಮ್ಮ ತಂದೆ ನಿಮ್ಮನ್ನು ಭೇಟಿ ಮಾಡಲು ಬಂದಿದ್ದಾರೆ, ಭೇಟಿ ಮಾಡುತ್ತೀಯಾ ಎಂದು ಕೇಳುತ್ತಾರೆ. ಅದಕ್ಕೆ ಭಗತ್‌ಸಿಂಗ್ ಭೇಟಿ ಯಾಗುವುದಿಲ್ಲವೆಂದು ಹೇಳುತ್ತಾರೆ. He refused to meet his father. ಇದರಿಂದ ಅಧಿಕಾರಿಗಳಿಗೆ ಆಶ್ಚರ್ಯವಾಗುತ್ತದೆ. ಇವನು ನಾಳೆ ಸಾಯುತ್ತಿದ್ದಾನೆ, ಇವನು ತಂದೆ ಬಂದರೆ ಏಕೆ ಮಾತನಾಡುವುದಿಲ್ಲವೆಂದು ಹೇಳುತ್ತಾನೆಂದರೆ, ಇದಕ್ಕೆ ಭಗತ್‌ಸಿಂಗ್

ಕೊಟ್ಟಂತಹ ಉತ್ತರ, ನಮ್ಮ ದೇಶದ ಯಾವ ಒಬ್ಬ ಮನುಷ್ಯನಿಗೂ, ಆತನ ಬಗ್ಗೆ ಎಂತಹ ಹೆಮ್ಮೆ ಉಂಟಾಗುತ್ತದೆಂದರೆ, ಯಾವ ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನು ಈ ದೇಶದಿಂದ ಓಡಿಸಬೇಕೆಂದು, ನನ್ನ ಇಡೀ ಜೀವನದ ಯೌವನ ಜೀವನವನ್ನು ಮುಡುಪಾಗಿ ಇಟ್ಟೆನೋ, ಅಂತಹ ನಮ್ಮ ದೇಶದ ಶತ್ರುಗಳ ಹತ್ತಿರ ಹೋಗಿ, ನನ್ನ ಮಗನ ಪ್ರಾಣವನ್ನು ಉಳಿಸಿ ಎಂದು ಅರ್ಜಿಯನ್ನು ನನ್ನ ತಂದೆ ಕೊಟ್ಟಿರುವಂಥವರು, ಅದಕ್ಕೋಸ್ಕರ ಆತನ ಮುಖವನ್ನು ನಾನು ನೋಡುವುದಿಲ್ಲವೆಂದು ನಿರಾಕರಣೆಯನ್ನು ಮಾಡಿದಂಥವರು. ಇಂತಹ ಮಹಾನ್ ವ್ಯಕ್ತಿ ಈ ಭಗತ್‌ಸಿಂಗ್ ಆಗಿದ್ದಾರೆ. ಆತನಿಗೆ ಇವನನ್ನು ಹೋಲಿಸಿರುವಂಥಾದ್ದು. ಅಂದರೆ ವಾಸ್ತವಗಳನ್ನು ಹೇಗೆ ವಿಕೃತ ಮಾಡುತ್ತೇವೆಂಬುದು ನೋಡಬೇಕು. ಇವತ್ತು ವಾಸ್ತವವಾಗಿ ವೆಂಕಟಮ್ಮನಹಳ್ಳಿಯಲ್ಲಿ ನಡೆದಂತಹ ಘಟನೆಗೂ ಚಿಕ್ಕಮಗಳೂರಿನಲ್ಲಿ ನಡೆದಂತಹ ಘಟನೆಗೂ ಇದು ಇವತ್ತಿಗೂ ಕ್ರಾಂತಿಗೂ, ಮಾರ್ಕ್ಸ್ ವಾದಕ್ಕೂ ಮಾವೋವಾದಕ್ಕೂ ಯಾವುದೇ ಸಂಬಂಧವಿಲ್ಲ. ಅವರು ಮಾವೋವಾದಿಗಳು ಅಲ್ಲ, ಮಾರ್ಕ್ಸ್‌ವಾದಿಗಳು ಅಲ್ಲ, ಲೆನಿನ್‌ವಾದಿಗಳು ಅಲ್ಲ, ಕ್ರಾಂತಿಕಾರಿಗಳೂ ಅಲ್ಲ. ಅವರನ್ನು ವೈಭವೀಕರಿಸಿಬಿಟ್ಟು, ಇಡೀ ನಮ್ಮ ದೇಶದಲ್ಲಿ ಇರುವಂತಹ ಒಂದು ವಿಭಾಗದ ಜನರಿಗೆ, ಅವರ ಬಗ್ಗೆ ಸಹಾನುಭೂತಿ ಬರುವಂತಹ ರೀತಿಯಲ್ಲಿ ವರ್ತನೆಯನ್ನು ಮಾಡಿದಂತಹ ಜನರು ಇದ್ದಾರಲ್ಲಾ, ಆ ವಾತಾವರಣವನ್ನು ಸೃಷ್ಟಿಮಾಡಿದಂತಹ ವ್ಯಕ್ತಿಗಳು ನಿಜವಾದಂತಹ ಭಯೋತ್ಪಾದಕರು ಇವರಾಗಿದ್ದಾರೆ. ಇವರು ದಾರಿ ತಪ್ಪಿಸತಕ್ಕಂಥವರು. ಇನ್ನು "ಕರ್ನಾಟಕ ವಿಮೋಚನಾ ರಂಗ" ಎಂಬ ಹೆಸರನ್ನು ಕೇಳಿರಬಹುದು. ಇದು 5–6 ವರ್ಷಗಳ ಹಿಂದೆ ಕರ್ನಾಟಕ ರಾಜ್ಯದಲ್ಲಿ ಹುಟ್ಟಿ ಹಾಕಿದಂತಹ ಸಂಘಟನೆಯಾಗಿದೆ. ಇದನ್ನು ಯಾರು ಹುಟ್ಟು ಹಾಕಿದ್ದಾರೆಂದರೆ, ಯಾರು ನಕ್ಸಲೈಟ್‌ಗಳು, ಪೀಪಲ್ಸ್ ವಾರ್ ಗ್ರೂಪ್ ಎಂದು ಹೆಸರುಗಳನ್ನು ಇಟ್ಟುಕೊಂಡಿದ್ದಾರೊ, ಅಥವಾ "ಪೀಪಲ್ಸ್ ವಾರ್ ಗ್ರೂಪ್" ಎಂದು ಹೆಸರನ್ನು ಬದಲಾವಣೆ ಮಾಡಿ, ಮಾವೋವಾದಿಗಳು ಎಂದು ಯಾರು ಹೆಸರನ್ನು ಇಟ್ಟುಕೊಂಡಿದ್ದಾರೊ ಅವರು ಹುಟ್ಟು ಹಾಕಿದಂತಹ ಸಂಘಟನೆಯ ಮುಖವಾಣಿ ಇದು. ಕರ್ನಾಟಕ ರಾಜ್ಯದ ಹಲವಾರು ಬುದ್ಧಿಜೀವಿಗಳು, ಪತ್ರಕರ್ತರು, ಅವರ ಜೊತೆಗೆ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ. ಸಾಹಿತಿಗಳು ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ. ನಾನು ಅವರನ್ನು ಬಹಳ ನಮ್ರತೆಯಿಂದ ಕೇಳುತ್ತಿದ್ದೇನೆ. ಕರ್ನಾಟಕವನ್ನು ಎಲ್ಲಿಂದ ನೀವು ವಿಮೋಚನೆ ಮಾಡಬೇಕೆಂದು ಇದ್ದೀರಿ. ಈ "ಕರ್ನಾಟಕ ವಿಮೋಚನಾ ರಂಗ" ಎಂದರೆ ಏನು? ಕರ್ನಾಟಕವನ್ನು ವಿಮೋಚನೆ ಮಾಡುವಂಥಾದ್ದು, ಇದನ್ನು ಎಲ್ಲಿಂದ ವಿಮೋಚನೆ ಮಾಡುವುದಕ್ಕೆ ಹೊರಟಿದ್ದೀರಿ? ಅಂದರೆ ಭಾರತ ದೇಶದಿಂದ ಕರ್ನಾಟಕವನ್ನು ವಿಮೋಚನೆ ಮಾಡುವಂಥಾದ್ದು ಅಂದರೆ, ಪ್ರತ್ಯೇಕ ಮಾಡುವಂಥಾದ್ದು, ಎಂದು ಅದರ ಅರ್ಥ. ಯಾವುದೋ ಒಂದು ಥಿಯರಿ ಇದೆ. ಅದೇನೆಂದರೆ, ಭಾರತ ದೇಶ 'It is a prison of different nationalities,' ಎನ್ನತಕ್ಕಂಥ ಅವರದ್ದು ಒಂದು ಥಿಯರಿ ಇದೆ. India is a prison of different nationalities, ವಿಭಿನ್ನ ರಾಷ್ಟ್ರೀಯತೆಗಳ ಬಂಧೀಖಾನೆ ಎಂದು ಹೇಳುವಂಥ ವಾದ ಅವರದಾಗಿದೆ. ಈ ಬಂಧೀಖಾನೆಯಿಂದ ಕರ್ನಾಟಕವನ್ನು ವಿಮೋಚನೆ ಮಾಡತಕ್ಕಂಥದ್ದು ನಮ್ಮ ಗುರಿ ಎಂದು ಹೇಳುವಂಥ ಒಂದು ಕರ್ನಾಟಕ ವಿಮೋಚನಾ ರಂಗವಾಗಿದೆ. ಅದಕ್ಕೆ ಬೆಂಬಲ ಕೊಟ್ಟವರು ಯಾರು? ಅದರ ಜೊತೆ ಸಂಪರ್ಕ ಇಟ್ಟುಕೊಂಡವರು ಯಾರು? ಇವತ್ತು ಅದರ ಹೆಸರಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಒಂದು ಪೇಪರ್

ಬರುತ್ತಿದೆ. ಈ ಬಗ್ಗೆ ನಿಮ್ಮ Intelligence ರವರನ್ನು ಕೇಳಿ. ಕರ್ನಾಟಕದ ವಿಮೋಚನೆ ಎನ್ನುವ ಒಂದು ಪೇಪರನ್ನು ಅವರು ತರುತ್ತಿದ್ದಾರೆ. ಇದು ಎಲ್ಲಿಂದ ವಾದ ಹುಟ್ಟಿದುದು ಎಂದರೆ, ಈ ಭಾರತ ದೇಶ prison of different nationalities ಎನ್ನುವ theory ಹುಟ್ಟಿರತಕ್ಕಂಥದ್ದು it is the brain child of American C.I.A. ಅವರು ಯಾವಾಗ ಇದನ್ನು ಪ್ರಾರಂಭ ಮಾಡಿದರು ಎನ್ನುವುದು ಗೊತ್ತೆ? 1975ನೇ ಇಸವಿಯಲ್ಲಿ ಭಾರತ ದೇಶದಲ್ಲಿ ತುರ್ತು ಪರಿಸ್ಥಿತಿ ಇದ್ದಂಥ ಸಂದರ್ಭದಲ್ಲಿ American CIA ರವರು ಒಂದು report ಅನ್ನು ತಯಾರು ಮಾಡಿದರು. ಆ ರಿಪೋರ್ಟ್ `Project Brahmaputra' ಎಂದು CIA ರವರು ತಯಾರು ಮಾಡಿದಂಥ ರಿಪೋರ್ಟ್ ಆಗಿರುತ್ತದೆ. ಆ Project Brahma putraದಲ್ಲಿ ಇಡೀ ಈಶಾನ್ಯ ಭಾರತವನ್ನು ಪ್ರತ್ಯೇಕ ಮಾಡಬೇಕೆನ್ನುವಂಥ ವಾದ ಅದರಲ್ಲಿದೆ. ಅದಕ್ಕೆ ಯಾರು ಕಾರಣವೆನ್ನುವುದರ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇಡೀ ಈಶಾನ್ಯ ಭಾರತವನ್ನು ಭಾರತ ದೇಶದಿಂದ ಪ್ರತ್ಯೇಕ ಮಾಡಬೇಕೆಂದು ಅವರು ಏಕೆ ವಾದವನ್ನು ಹುಟ್ಟುಹಾಕಿದರೆಂದರೆ, ಈಶಾನ್ಯ ಭಾರತದ ನಾಗರೀಕತೆ, ಸಂಸ್ಕೃತಿ, ಜನಜೀವನ ಭಾರತದ ಸಂಸ್ಕೃತಿಯ ನಾಗರೀಕತೆಗೆ ವಿಭಿನ್ನವಾಗಿದೆ, ಅದು ಭಾರತ ದೇಶದ ಅವಿಭಾಜ್ಯ ಅಂಗವಲ್ಲ, ಭಾರತ ದೇಶ ಅದನ್ನು ಆಕ್ರಮಿಸಿಕೊಂಡಿದೆ, ಆದ್ದರಿಂದ ಈಶಾನ್ಯ ಭಾರತ ಪ್ರತ್ಯೇಕವಾಗಬೇಕೆಂಬ ವಾದವನ್ನು ಹುಟ್ಟು ಹಾಕಿದಂಥ `Project Brahmaputra' ಆ ವರದಿಯ ಆಧಾರದ ಮೇಲೆ All Assam Students' Union ಸ್ಥಾಪನೆಯಾಗಿ ಕಡೆಗೆ ಅದು AGP ಯಾಗಿ ಪರಿವರ್ತನೆ ಹೊಂದಿ ಇಡೀ ಈಶಾನ್ಯ ಭಾರತವನ್ನು ಪ್ರತ್ಯೇಕ ಮಾಡತಕ್ಕಂಥ ಚಳುವಳಿಯನ್ನು ಅದು ಹುಟ್ಟುಹಾಕಿತು. All Tripura Tribals' Organisation, Naga Vimochana Ranga, All Assam Students' Union, ULFA, ಇವೆಲ್ಲವೂ ಕೂಡ ಆ CIA ಯ brain child ಅದರ ಭಾಗವೇ ಕರ್ನಾಟಕ ವಿಮೋಚನಾ ರಂಗವಾಗಿರುತ್ತದೆ. It is a brain child of American CIA. ಅಮೇರಿಕಾದ ಸಿಐಎ ಭಾರತ ದೇಶವನ್ನು ಛಿದ್ರ ಮಾಡಬೇಕೆನ್ನುವ ಒಂದು ಪಿತೂರಿ. ಅದಕ್ಕೋಸ್ಕರವೇ ಅದರ ಭಾಗವಾಗಿ ಅವರು ಕರ್ನಾಟಕ ವಿಮೋಚನಾ ರಂಗ ಎಂದು ಇಟ್ಟುಕೊಂಡಿದ್ದಾಗಿರುತ್ತದೆ. ಇದರ ಜೊತೆಗೆ ಆ ನಕ್ಸಲೈಟ್ಸ್ ಚಳುವಳಿ ಎಂದು ಏನು ಹೇಳಿದ್ದಾರೆ, ಅದನ್ನು ಸಂಪೂರ್ಣವಾಗಿ ತಪ್ಪುದಾರಿಗೆ ಎಳೆದುಕೊಂಡು ಹೋಗಿದ್ದಾರೆ. ನಾನು ಆಗಲೇ ಹೇಳಿದ ಹಾಗೆ ಅದು ಮಾರ್ಕ್ಸ್‌ವಾದವೂ ಅಲ್ಲ, ಲೆನಿನ್ ವಾದವೂ ಅಲ್ಲ, ಮಾವೋವಾದವೂ ಅಲ್ಲ. ಇವತ್ತು ಏನು ಮಾವೋವಾದಿಗಳು ಎಂದು ಹೇಳಿಕೊಳ್ಳುತ್ತಿದ್ದಾರೆ . . .

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಈಗ ತರಮಲ ನಾಗರೆಡ್ಡಿಯವರು ಇದ್ದರು. ಅವರು, ಚಾರು ಮಜುಂದಾರ್‌ರವರು, Kanu Sanyal, ನಾಗಭೂಷಣ್ ಪಟ್ನಾಯಕ್ ಅವರು ಏನು ಮೂವ್‌ಮೆಂಟ್ಸ್ ಹುಟ್ಟುಹಾಕಿದರು, ಅದಕ್ಕೂ ಇದಕ್ಕೂ ಏನಾದರೂ ಸಂಬಂಧ ಇದೆಯೇ ಅಥವಾ ಇದು ಮಾನ್ಯ ಸದಸ್ಯರು ಹೇಳಿದಂತೆ 1975ರಿಂದ ಆಚೆಗೆ CIA ಯ brain child ಆಗಿ ಬಂದಿದ್ದಾ ಅಥವಾ ಅವರೂ ಕೂಡ CIA Agents?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, Kanu Sanyal, ಚಾರು ಮಜುಂದಾರ್, ತರಮಲ ನಾಗಿರೆಡ್ಡಿ ಹುಟ್ಟು ಹಾಕಿದಂಥ ನಕ್ಸಲ್‌ಬಾರಿ ಚಳುವಳಿಗಳು ಮತ್ತು ಈಗಿರುವಂಥ ನಕ್ಸಲ್‌ಬಾರಿ ಚಳುವಳಿಗೂ ಯಾವುದೇ ಸಂಬಂಧವಿಲ್ಲ. ಇವರು individual annihilation ಎನ್ನುವ

ಹೆಸರಿನಲ್ಲಿ ಕೆಲವು ವ್ಯಕ್ತಿಗಳನ್ನು ಕೊಲೆ ಮಾಡಿದರೆ ವ್ಯವಸ್ಥೆ ನಾಶವಾಗುತ್ತದೆ ಎನ್ನುವ ತಪ್ಪು ಸಿದ್ಧಾಂತವನ್ನು ಹೇಳತಕ್ಕಂಥವರು. ಯಾವನೋ ಒಬ್ಬ ಜಮೀನ್ದಾರನನ್ನು ಕೊಲೆ ಮಾಡಿಬಿಟ್ಟರೆ ಈ ದೇಶದಲ್ಲಿ ಜಮೀನ್ದಾರಿ ವ್ಯವಸ್ಥೆ ಹೋಗುವುದಿಲ್ಲ. ಆದರೆ ಜಮೀನ್ದಾರಿಗಳನ್ನು ಕೊಲೆ ಮಾಡಬೇಕೆಂದು ಇವರ ವಾದವಾಗಿರುತ್ತದೆ. ಆದರೆ ನಕ್ಸಲ್‌ಬಾರಿಯಲ್ಲಿ ಪ್ರಾರಂಭವಾದಂಥ ಚಳುವಳಿ ....

ಶ್ರೀ ಕೆ.ಆರ್.ರಮೇಶ್‌ಕುಮಾರ್ : 1960ರ ಚಳುವಳಿಯಲ್ಲಿ ನಿಮ್ಮ ಪಾರ್ಟಿ ಲೈನ್‌ನಿಂದ differ ಆಗಿ ಚಾರು ಮಜುಂದಾರ್‌ರವರು ಹೊರಗೆ ಹೋದಾಗ ಸಿಲಿಗುರಿ ಏರಿಯಾದಲ್ಲಿ ಈ movement ಅನ್ನು ಪ್ರಾರಂಭ ಮಾಡಿದಾಗ individual annihilation of the class enemy is the programme. No democracy, No freedom through ballet, only by bullet ಎಂದು ಅವರು ಹೋದದ್ದು. They also advocated annihilation of the class enemy.

Sri G.V. Srirama Reddy : Theory annihilation of class enemy is different from annihilation of the individuals. Annihilation of the class enemy is totally different from that of the annihilation of the individual. Now position is the theory of individual annihilation. ಚಾರು ಮಜುಂದಾರ್, ನಾಗಿರೆಡ್ಡಿ, Kanu Sanyal advocated for the annihilation of the class enemy. That also is not correct. I am not going to out part of the aspect. But, present day's aspect is that it is a theory of individual annihilation. ಅವರು ಸಶಸ್ತ್ರ ಕ್ರಾಂತಿ, armed struggle ಎಂದು ಏನು ವಾದ ಮಾಡುತ್ತಿದ್ದಾರೆ, ಯಾವುದು Adventism ಎಂದು ಕರೆಯುತ್ತಿದ್ದಾರೆ, 1950ರಲ್ಲಿ 'Left wing communism is an infantile disorder,' ಎಂದು ಲೆನಿನ್‌ರವರು ಹೇಳಿದರು. ಏಕೆಂದರೆ ಆವತ್ತು Adventism, Left Wing ನಲ್ಲಿಯೇ ಇತ್ತು. That is a part of it. I am not going to all those details. But, problem to-day is ಏಕೆ ಈ ಪರಿಸ್ಥಿತಿ ನಿರ್ಮಾಣವಾಗಿದೆ? ಏಕೆಂದರೆ ಮೂಲತಃ ನಮ್ಮ ಪಕ್ಷದ ವತಿಯಿಂದ ನಾವು ಚಿಕ್ಕಮಗಳೂರು ಜಿಲ್ಲೆಗೆ ಹೋಗಿ ಅಭ್ಯಾಸ ಮಾಡಿದ್ದೇವೆ. ಅಲ್ಲಿ tribal population ಬಹಳ ಕಡಿಮೆಯಲ್ಲಿದೆ. ಅವರನ್ನೆಲ್ಲಾ ಇವತ್ತು ಸಂಪೂರ್ಣವಾಗಿ ಅವರು convince ಮಾಡಿದ್ದಾರೆ. ಇವರು ಯಾರು ಬೇಕಾದರೂ ಏನಾದರೂ ಹೇಳಲಿ. ತಪ್ಪು ಸಿದ್ದಾಂತವೋ ಸರಿಯಾದ ಸಿದ್ಧಾಂತವೋ ಒಟ್ಟಿನಲ್ಲಿ ಅವರನ್ನು convince ಮಾಡಿದ್ದಾರೆ. Convince ಮಾಡಲಿಕ್ಕೆ ಕಾರಣವೇನೆಂದರೆ, ಅಲ್ಲಿರತಕ್ಕಂಥ ಬಡತನ, ಅಲ್ಲಿರತಕ್ಕಂಥ ಅನಕ್ಷರತೆ, ಅಲ್ಲಿರುವ ಶೋಷಣೆ, ಅಲ್ಲಿರತಕ್ಕಂಥ ದಬ್ಬಾಳಿಕೆ ಅದಕ್ಕೆ ಒಳಗಾಗಿರತಕ್ಕಂಥ ಆ ಗುಡ್ಡಗಾಡು ಜನಾಂಗವನ್ನು ಸಂಪೂರ್ಣವಾಗಿ ಅವರು convince ಮಾಡಿದ್ದಾರೆ. ಅಂದರೆ ಅದರ ಅರ್ಥವೇನು? ಆ ಚಟುವಟಿಕೆಗಳಿಗೆ ಮೂಲ ಕಾರಣ ಅದು ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳೇ ಹೊರತು ಅದು law and order problem ಅಲ್ಲ. ಇಂಥ ಮೂಲಭೂತವಾದಂಥ ಸಮಸ್ಯೆಗಳ ಪರಿಹಾರ ಮಾಡಲಿಕ್ಕೆ ಸಾಧ್ಯವಿಲ್ಲದಿರತಕ್ಕಂಥ ಸರ್ಕಾರಗಳು ಕೇವಲ ಪೊಲೀಸ್‌ರವರನ್ನು ಛೂಬಿಟ್ಟು ಅವರನ್ನು ಕೊಲೆ ಮಾಡುವುದರಿಂದ, ಅವರನ್ನು

ಅರೆಸ್ಟ್ ಮಾಡುವುದರಿಂದ, ಅವರನ್ನು ಜೈಲಿಗೆ ಹಾಕುವುದರಿಂದ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆಂದು ಸರ್ಕಾರವೇನಾದರೂ ತಿಳಿದುಕೊಂಡಿದ್ದರೆ ಅದು ಮೂರ್ಖತನದ ಪರಮಾವಧಿಯಾಗಿರುತ್ತದೆ. ಅದು ಸಾಧ್ಯವೇ ಇಲ್ಲ. ಆ basis ಇರತಕ್ಕಂಥದ್ದೇ root cause is socio-economic problem. ಆ socio-economic problem ಗೆ ನಾವು ಗಮನಕೊಡದೆ ಹೋದರೆ ಬಹಳ ಕಷ್ಟವಾಗುತ್ತದೆ. ಉದಾಹರಣೆಗೆ ಮೊನ್ನೆ ಒಂದು ಪ್ಯಾಕೇಜ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ಅನೌನ್ಸ್ ಮಾಡಿದರು. ಆ ಪ್ಯಾಕೇಜ್‌ನಲ್ಲಿ ಎಲ್ಲವೂ ಇದೆ, ಆದರೆ ಈ ಒಂದು ಮೂಲಭೂತವಾದಂಥ ಅಂಶ ಇಲ್ಲ. ಅದೇನೆಂದರೆ, land to the tiller ಇಲ್ಲ. ಅವರನ್ನು ಅಲ್ಲಿಂದ ಒಕ್ಕಲೆಬ್ಬಿಸಬಾರದು ಎನ್ನುವುದಕ್ಕೆ ಪ್ಯಾಕೇಜ್‌ನಲ್ಲಿ ಯಾವುದೇ ಅಂಶ ಇಲ್ಲ. ರಸ್ತೆ ಮಾಡಿಸುತ್ತೇವೆ, ನೀರು ಕೊಡಿಸುತ್ತೇವೆ, ಈ ಸರ್ಕಾರ ಅವರಿಗೆಂದು ಪ್ಯಾಕೇಜ್ ಅನ್ನು ಹೊರಡಿಸಿದ್ದಾರೆ. ರಸ್ತೆ ಮಾಡಿಸುತ್ತೇವೆಂದು ಆ ಹೆಸರಿನಲ್ಲಿ ಕಡೆಗೆ ultimate ಆಗಿ ದುಡ್ಡು ತಿನ್ನುವವರು ಯಾರೆಂಬುದು ನಮಗೆ ಗೊತ್ತಿದೆ. ರಸ್ತೆ ಮಾಡಿಸುತ್ತೇವೆಂದು ಅದರ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಅಲ್ಲಿಗೆ ಕೊಟ್ಟರೆ ಕಡೆಗೆ ಆ ಹಣ ಯಾರಿಗೆ ಹೋಗುತ್ತದೆ ಎನ್ನುವುದು ನಮಗೆ ಗೊತ್ತಿದೆ. ಬೇರೆ ಬೇರೆ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತೇವೆಂದು ಅದರ ಹೆಸರಿನಲ್ಲಿ ಲಕ್ಷಾಂತರ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ಅದು ಎಲ್ಲಿಗೆ ತಲುಪುತ್ತದೆಂಬುದು ನಮಗೆ ಗೊತ್ತಿದೆ. ಆದರೆ ಆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೂಲ ಸಮಸ್ಯೆ ಏನಿದೆ, ಅಲ್ಲಿಯ ಗುಡ್ಡಗಾಡು ಪ್ರದೇಶದ ಜನ ಏನಿದ್ದಾರೆ, ಅವರು ನೂರಾರು ವರ್ಷಗಳಿಂದ ವಾಸ ಮಾಡುತ್ತಿರುವ ಭೂಮಿಯಿಂದ ಅವರನ್ನು ಒಕ್ಕಲೆಬ್ಬಿಸುವ ಕೆಲಸವನ್ನು ಪ್ರಾರಂಭ ಮಾಡಿದರು. ಅದನ್ನು ತಪ್ಪಿಸುವುದಕ್ಕೆ ಪ್ಯಾಕೇಜ್‌ನಲ್ಲಿ ಹೇಳಿಲ್ಲ. ಅವರು ಆ ಭೂಮಿಯಲ್ಲಿ ಏನು ಉಳುಮೆ ಮಾಡಿಕೊಳ್ಳುತ್ತಿದ್ದಾರೆ, ಆ ಭೂಮಿಯನ್ನು ಅವರಿಗೆ ಕೊಡಬೇಕೆನ್ನುವುದರ ಬಗ್ಗೆ ಪ್ಯಾಕೇಜ್‌ನಲ್ಲಿ ಹೇಳಿಲ್ಲ. ಈ ಮೂಲ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಗಮನ ಹರಿಸದೆ .ಯಾವುದೋ ಒಂದು ಪ್ಯಾಕೇಜ್ ಅನ್ನು ಕೊಟ್ಟು ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆಂದರೆ ಖಂಡಿತವಾಗಿ ಸಾಧ್ಯವಿಲ್ಲ. ಅದಕ್ಕೆ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ, ಪ್ರಾಮಾಣಿಕವಾಗಿ ನೀವು ಆ ಸಮಸ್ಯೆಯನ್ನು ಪರಿಹಾರ ಮಾಡುವುದಾದರೆ, ಮೊದಲು ಅವರಿಗೆ ಭೂಮಿ ಕೊಡಿ. ಅವರನ್ನು ಒಕ್ಕಲೆಬ್ಬಿಸುವುದಿಲ್ಲವೆಂದು ಕಾನೂನು ತನ್ನಿ. ಅವರಿಗೆ ಇವತ್ತಿಗೂ ಕೂಡ minimum wage ಜಾರಿಯಾಗುತ್ತಿಲ್ಲ.. ಕನಿಷ್ಠ ವೇತನ ಕೊಡಬೇಕೆಂದು ಈ ದೇಶದಲ್ಲಿ ಕಳೆದ 50 ವರ್ಷಗಳಿಂದ ಕಾನೂನು ಆಗಿದ್ದರೂ ಕೂಡ ಅದನ್ನು ಇವತ್ತು ಇಲ್ಲಿ ಜಾರಿಗೆ ತರುತ್ತಿಲ್ಲ. ಹಾಗಾಗಿ ಇವತ್ತು ಅವರ ತಪ್ಪು ಸಿದ್ಧಾಂತಗಳಿಗೆ ಸಹಜವಾಗಿ ಆ ಗುಡ್ಡಗಾಡು ಜನರು ಮನಸೋತಿದ್ದಾರೆ. ನಾವು ಅಲ್ಲಿಗೆ ಹೋಗಿ ಆ ಜನರ ಜೊತೆ ಮಾತನಾಡಿದ್ದೇವೆ. ಅಲ್ಲಿ 2ನೇ ಕ್ಲಾಸ್ 3ನೇ ಕ್ಲಾಸ್ ಓದಿರತಕ್ಕಂಥ ಯುವಕರು ದೇಶದ ರಾಜಕಾರಣವನ್ನು ಅಂತರರಾಷ್ಟ್ರೀಯ ರಾಜಕಾರಣವನ್ನು ಮಾತನಾಡುವ ಮಟ್ಟಿಗೆ ಅವರು ರಾಜಕೀಯವಾಗಿ ಪ್ರಬುದ್ಧರಾಗುವಂತೆ ಅವರು ಬೆಳೆಸಿದ್ದಾರೆ. ಹಾಗಾಗಿ ಇವತ್ತು ಆ ಮೂಲ ಸಮಸ್ಯೆಯನ್ನು ನಾವು ಅರ್ಥ ಮಾಡಿಕೊಳ್ಳದೇ ಹೋದರೆ ಸಮಸ್ಯೆ ಪರಿಹಾರ ಮಾಡಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಸಿದ್ದರಾಮಯ್ಯನವರು ದಯಮಾಡಿ ನಾನು ಹೇಳುವುದನ್ನು ಕೇಳಿಸಿಕೊಳ್ಳಬೇಕು. ಏನೆಂದರೆ, ವೆಂಕಟಮ್ಮನಹಳ್ಳಿಯಲ್ಲಿ 7 ಜನ ಪೊಲೀಸರನ್ನು ಹತ್ಯೆ ಮಾಡಿದರು. ಅದಕ್ಕೆ ಎರಡು ದಿವಸಗಳ ಮೊದಲು ಮಾನ್ಯ ಮುಖ್ಯಮಂತ್ರಿಗಳ ಮನೆ ಮುಂದೆ ಬಂದು ಗದ್ದರ್ ಮತ್ತು ವರವರರಾವ್ 'We will answer through

the bullets only,' ಎಂದು ಅವರು ಸವಾಲು ಹಾಕಿದ್ದರು. ನೀವು ಏನು ಮಾಡಿದಿರಿ? ಮಾನ್ಯ ಮಾಧುಸ್ವಾಮಿಯವರು ಹೇಳಿದ್ದು ಬಹಳ ಕರೆಕ್ಟ್ ಇದೆ. ಸರ್ಕಾರದ ಫೇಲ್ಯೂರ್ ಬಗ್ಗೆ ಬಹಳಷ್ಟು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಮೊನ್ನೆ ಯಡಿಯೂರಿನಲ್ಲಿ ಗಲಾಟೆ ಆಗಿದೆ ಅರ್ಜೆಂಟ್ ಹೋಗಿ ಎಂದು ಹೋಂ ಕಮೀಷನರ್ ಹೇಳಿದರೆ, ಎಲ್ಲಿ ಸಾರ್ ಆ ಹಳ್ಳಿ ಇರುವುದು ಎಂದು ಡಿಜಿಪಿ ಕೇಳುತ್ತಾರೆ. ಅಂದರೆ, ಆ ಗಲಾಟೆಯಾಗಿರುವ ಹಳ್ಳಿ ಎಲ್ಲಿದೆ ಎಂಬುದು ಗೊತ್ತಿಲ್ಲ. ಆ ಹಳ್ಳಿ ಯಡಿಯೂರು ಹತ್ತಿರವಿದೆ. ಅಂದರೆ, ಈ ಸ್ಥಿತಿಯಲ್ಲಿ ನಿಮ್ಮ ಪೊಲೀಸ್ ಇಲಾಖೆ, ಇಂಟೆಲಿಜೆನ್ಸ್ ಇದೆ. ಬೆಂಗಳೂರಿನಲ್ಲಿ ದಿನಕ್ಕೆ 5 ಮಕ್ಕಳನ್ನು ಅಪಹರಿಸಿಕೊಂಡು ಹೋಗುತ್ತಾರೆ. ಇದು ಪೊಲೀಸ್‌ನವರಿಗೆ ಗೊತ್ತಾಗುವುದಿಲ್ಲ. 14 ವರ್ಷದ ಒಂದು ಹೆಣ್ಣು ಮಗುವನ್ನು ಇತ್ತೀಚೆಗೆ ಕೊಲೆ ಮಾಡಿದರು. ಇಂಥ ಘಟನೆಗಳು ಬೆಂಗಳೂರಿನಲ್ಲಿ ನೂರಾರು ನಡೆಯುತ್ತಿವೆ. ಅಂದರೆ, ಪೊಲೀಸ್ ಫೇಲ್ಯೂರ್ ಆಗಿದೆ. ಗೃಹ ಮಂತ್ರಿಗಳ ಮನೆ ಮುಂದೆ ಬಂದು, "We will answer through bullet," ಎಂದು ನೇರವಾಗಿ ಹೇಳಿದರೂ ಕೂಡ ನಾವು ಸುಮ್ಮನಿದ್ದೇವೆ. ಏಕೆ ಸುಮ್ಮನಿದ್ದೀರಿ ನೀವು? ಉಳಿದ ವಿಚಾರವನ್ನು ಮಾನ್ಯ ವಾಟಾಳ್ ನಾಗರಾಜ್ ಮತ್ತು ಇತರ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಅದನ್ನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಬಹಳ ಮುಖ್ಯವಾಗಿ ಇವತ್ತು ನಕ್ಸಲೀಯ ಚಟುವಟಿಕೆ ವಿರುದ್ಧ ಹೋರಾಟ ಮಾಡಬೇಕು, ಅವರನ್ನು ಸದೆಬಡಿಯಬೇಕೆಂಬ ಹೆಸರಿನಲ್ಲಿ, ಅವರು ಮಾಡುವ ತಪ್ಪು ಧೋರಣೆಗಳನ್ನು ಸದೆ ಬಡಿಯಬೇಕೆಂಬ ಹೆಸರಿನಲ್ಲಿ ಜನ ಸಾಮಾನ್ಯರ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವ ಸ್ಥಿತಿಗೆ ಸರ್ಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ ಒಂದು ಕಡೆ. ಇನ್ನೊಂದು ಕಡೆ ಕೋಮುವಾದಿಗಳೇನು ಮಾಡುತ್ತಿದ್ದಾರೆ? ಕೋಮುವಾದವನ್ನು ವಿರೋಧ ಮಾಡಿದರೆಂದು ನಕ್ಸಲೈಟ್ ಎಂದು ಬ್ರಾಂಡ್ ಮಾಡುತ್ತಿದ್ದಾರೆ. ಅವರನ್ನು ಹಿಡಿದುಕೊಂಡು ಬನ್ನಿ ಎಂದು ಹೇಳುವುದು ಆಗಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜಾತಂತ್ರ ರೀತಿಯಲ್ಲಿ ಚಳುವಳಿ ಮಾಡುವವರನ್ನು ಅರೆಸ್ಟ್ ಮಾಡಿದರು. ಮೊನ್ನೆ ವಿಮಾ ನೌಕರರು ಜಾತಾ ತೆಗೆದಿದ್ದರು. ಅದು ಮಾನ್ಯ ಪ್ರಕಾಶ್‌ರವರಿಗೆ ಗೊತ್ತಿರಬಹುದು. All-India Conference ಅವರು ಶೃಂಗೇರಿಗೆ ಬಂದರೆ, ಪೊಲೀಸರು ಅವರನ್ನು ಹಿಡಿದುಕೊಂಡು ಹೋಗಿ ಒಳಗೆ ಹಾಕಿದರು. ಅವರು ಹಾಡು ಹೇಳುತ್ತಾರೆ, ಆ ಹಾಡು ಉದ್ವೇಗ ಹುಟ್ಟಿಸುವ ಹಾಡು ಎಂದು ಹೇಳಿ ಜೈಲಿಗೆ ಹಾಕಿದರು. ಅವರು ಪ್ರಚೋದನೆ ಮಾಡುತ್ತಾರೆಂದು ಹೇಳಿ ಹಾಗೆ ಮಾಡಿದರು. ನಾನು ಡಿವೈಎಸ್‌ಪಿಯವರಿಗೆ ಫೋನ್ ಮಾಡಿದ್ದೆ, ಆಗ ಅವರು ಇರಲಿಲ್ಲ. ಆಗ ನಾನು ಶೃಂಗೇರಿ ಶಾಸಕರಿಗೆ ಫೋನ್ ಮಾಡಿದೆ. ಅವರು ಅಲ್ಲಿನ ಪೊಲೀಸ್ ಸ್ಟೇಷನ್‌ಗೆ ಹೋಗಿ ಮಾತನಾಡಿ ಅವರನ್ನು ಬಿಡಿಸಿ ಕಳುಹಿಸಿದರು. ಪೊಲೀಸರು ಯಾವ್ಯಾವುದನ್ನೋ ನೋಡಿ, ಯಾರ್‍ಯಾರನ್ನೋ ಜೈಲಿಗೆ ಹಾಕುತ್ತಾರೆ. ಯಾವ್ಯಾವುದನ್ನೋ ನೋಡಿ, ಯಾವ್ಯಾವುದೋ ರೀತಿಯಲ್ಲಿ ಜೈಲಿಗೆ ಹಾಕುವುದು. ಅಂದರೆ ಪ್ರಜಾಪ್ರಭುತ್ವ ಚಳವಳಿಗಳನ್ನು ದಮನ ಮಾಡಲಿಕ್ಕೆ ಪೊಲೀಸರು ಇಂಥದ್ದನ್ನು ಯಾವ ರೀತಿಯಲ್ಲಿ ಅವಕಾಶ ಮಾಡಿಕೊಳ್ಳುತ್ತಾರೆ. . . .

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಮ್ಮ ಮುಂದೆ ತೀವ್ರ ಭಿನ್ನಾಭಿಪ್ರಾಯಗಳಿಗಿರುವಾಗ ಒಬ್ಬರ ವಾದದ ಬಗ್ಗೆ ಇನ್ನೊಬ್ಬರು ಬೇರೆ ಬೇರೆ ಅರ್ಥ ಕೊಡುವಾಗ, ಪೊಲೀಸ್ ಅಧಿಕಾರಿಗಳಿಂದ ಹೇಗೆ ಎಕ್ಸ್‌ಪೆಕ್ಟ್ ಮಾಡುತ್ತೀರಿ? ಒಬ್ಬ ಇನ್ಸ್‌ಪೆಕ್ಟರ್‌ಗೆ ಅಕಾಡೆಮಿಕ್ ಕ್ವಾಲಿಫಿಕೇಷನ್ ಏನಿರುತ್ತದೆ?

Degree, Double Degree, physical fitness. There is no competence to differentiate violence, non-violence, leftist movement, rightist movement, fanatics, communalists, rational people. Have we trained him? Is it fair to expect it from him? ಯಾರು ಎಂದು ಹೇಗೆ ಗೊತ್ತಾಗಬೇಕು? ಉದ್ವೇಗದಿಂದ ಹಾಡು ಹೇಳುತ್ತಿದ್ದವರನ್ನು ನಕ್ಸಲೈಟರು ಎಂಬ ತೀರ್ಮಾನಕ್ಕೆ ಬಂದರು.

Sri G.V. Srirama Reddy : I am not blaming the police. I am only blaming the authorities, the system. I am not blaming any police constable or the Sub-Inspector, because they are helpless in the system. ಬೆಳಿಗ್ಗೆ ಅದರ ಬಗ್ಗೆ ಮಾತನಾಡಿದ್ದಾರೆ. ಸಬ್-ಇನ್ಸ್‌ಪೆಕ್ಟರ್ ಒಬ್ಬ ನನಗೆ ಇಷ್ಟವಿಲ್ಲದವನು ನನ್ನ ಕ್ಷೇತ್ರಕ್ಕೆ ಹಾಕಿಸಿಕೊಂಡು ಬಂದರೆ ಒಂದು ದಿವಸ ಇರಲಿಕ್ಕಾಗುವುದಿಲ್ಲ. ನಾವೆಲ್ಲಾ ಮಾಡುವ ಕೆಲಸವದು. ನನ್ನ ಕ್ಷೇತ್ರಕ್ಕೆ ಬಂದರೆ, ಒಂದು ದಿವಸ ಇಟ್ಟುಕೊಳ್ಳಲು ಸಾಧ್ಯವಿಲ್ಲ. ನನಗೆ ಗೊತ್ತಿಲ್ಲದೆ, ಒಬ್ಬ ಸಬ್-ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್‌ರನ್ನು ಹಾಕಿದರೆ, 2 ದಿವಸ ಇರಲಿಕ್ಕೆ ಸಾಧ್ಯವಿಲ್ಲ. ಅದಕ್ಕೆಲ್ಲಾ ನಾವು ಹೊಣೆಗಾರರು ಇದ್ದೇವೆ. ಅದಕ್ಕೆ ನಮ್ಮನ್ನು ನಾವೇ ಬ್ಲೇಮ್ ಮಾಡಿಕೊಳ್ಳಬೇಕು. ಈ ಬಗ್ಗೆ ಮಾನ್ಯ ವಾಟಾಳ್‌ರವರು, ಮಾಧುಸ್ವಾಮಿಯವರು ಹೇಳಿದ್ದಾರೆ. ಮತ್ತೆ ನಾನು ರಿಪೀಟ್ ಮಾಡಲು ಹೋಗುವುದಿಲ್ಲ. ನಾನು ಪೊಲೀಸರನ್ನು ಬಯ್ಯುವುದಿಲ್ಲ. It is an authority. ನಾವ್ಯಾರು ನೇತಾರರಿದ್ದೇವೆ, ನಮಗೆ ಗೊತ್ತಾಗಬೇಕಲ್ಲವೇ? ಯಾರು ಕ್ರಿಮಿನಲ್ಸ್? ಯಾರು ರೆವಲ್ಯೂಷನಿಸ್ಟ್? ಯಾರು ಡಕಾಯಿತರು ಎಂದು ಹೇಳುವುದು ನಮಗೆ ಗೊತ್ತಿರಬೇಕಲ್ಲವೇ? ಇವತ್ತು ಮಾನ್ಯ ಮಾಧುಸ್ವಾಮಿಯವರು ಬಹಳ ಚೆನ್ನಾಗಿ ಹೇಳಿದರು. ನಕ್ಸಲೈಟ್ ಹೆಸರಿನಲ್ಲಿ ದರೋಡೆಕೋರರು ಶುರುವಾಗಿದ್ದಾರೆ. ಬೆದರಿಕೆ ಹಾಕಿ ಹಣ ವಸೂಲಿ ಮಾಡುವುದು ನಡೆಯುತ್ತಿದೆ. ಬಾಗೇಪಲ್ಲಿ ತಾಲ್ಲೂಕಿನಲ್ಲಿ ನಕ್ಸಲೈಟ್‌ರ ಗಲಾಟೆ ಇದೆ ಎಂದು ಹೇಳಿ ರಿಪೋರ್ಟ್ ಇದೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಶ್ರೀರಾಮರೆಡ್ಡಿಯವರ ಹತ್ತಿರ ನಕ್ಸಲೈಟರ ವಿಷಯದಲ್ಲಿ ನಮಗಿಂತಲೂ ಹೆಚ್ಚಿನ ಮಾಹಿತಿ ಇದೆ. ಪೆರಿಟಾಲ್ ರವಿ ಅವರ ಪಕ್ಕದ ಕ್ಷೇತ್ರದವರು. ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ವಿಷದವಾಗಿ ಹೇಳಿದರೆ, ಈ ಮನೆಗೆ ವಿಷಯಗಳು ಗೊತ್ತಾಗುತ್ತದೆಂದು ನಾನು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನನ್ನ ಕ್ಷೇತ್ರದ ಪಕ್ಕದಲ್ಲಿದ್ದಾರೆ ಎನ್ನುವುದಕ್ಕೋಸ್ಕರ ಅವರ ಬಗ್ಗೆ ಮಾಹಿತಿ ಇಟ್ಟಿರುವವನಲ್ಲ ನಾನು. ಮಾನ್ಯ ಶ್ರೀನಿವಾಸಗೌಡರು ದಾರಿ ತಪ್ಪಿಸುವುದರಲ್ಲಿ ಭಾರೀ ನಿಪುಣರು. ವೈಯಕ್ತಿಕವಾಗಿ ವಿಶ್ವಾಸ, ಸ್ನೇಹಕ್ಕೂ, ತತ್ವಕ್ಕೂ ವ್ಯತ್ಯಾಸವಿದೆ. 2 ತಿಂಗಳ ಹಿಂದೆ ನಾನು ನಾಗಿರೆಡ್ಡಿಯವರ ಪ್ರತಿಮೆ ಅನಾವರಣಕ್ಕೆ ಹೋಗಿದ್ದೆ although I am basically opposing their philosophy. ನಾಗಿರೆಡ್ಡಿಯವರು ಸಾಯುವುದಕ್ಕೆ 15 ದಿವಸ ಮುಂಚೆ ಅವರು ನನ್ನ ಮನೆಯಲ್ಲಿದ್ದರು. ಅದು ಬೇರೆ ವಿಷಯ.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ಅವರು ಸತ್ತ ಮೇಲೆ ಅವರ ಡೆಡ್‌ಬಾಡಿಯನ್ನು ಅವರ ಸಿಸ್ಟರ್ ಮನೆಯಲ್ಲಿಟ್ಟಿದ್ದರು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಹೌದು. ಮೊದಲು ಅವರು ನಮ್ಮ ಮನೆಯಲ್ಲಿದ್ದರು. ನಂತರ, ಆಸ್ಪತ್ರೆಗೆ ಹೋದರು. ಅವರು ಸತ್ತಂಥ ದಿನ ಭಾರೀ ದುರಂತ. ಅವರು ಹೇಗೆ ಸತ್ತರೆಂದು ತಿಳಿಯಲು ಆಸ್ಪತ್ರೆಗೆ ಕರೆದುಕೊಂಡು ಹೋದರೆ, ಡಾಕ್ಟರೇ ಅವರ ಗುರುತು ಹಿಡಿಯಲಿಲ್ಲ. ಅವರು ಆ ಸ್ಥಿತಿಗೆ ಬಂದಿದ್ದರು. ಅದು ಬಿಡಿ. ಹಾಗಾಗಿ, ಮಾನ್ಯ ಶ್ರೀನಿವಾಸಗೌಡರು ಕಾಂಗ್ರೆಸ್ ಅಲ್ಲ. ಯಾವುದೋ ಕಾರಣಕ್ಕಾಗಿ ಅಲ್ಲಿ ಹೋಗಿ ಸೇರಿಕೊಂಡುಬಿಟ್ಟಿದ್ದಾರಷ್ಟೇ. ಅವರ ಜೀವಮಾನದಲ್ಲಿ ಅವರು ಕಾಂಗ್ರೆಸ್ ತತ್ವವನ್ನು ಒಪ್ಪಿದವರಲ್ಲ. ಇರಲಿ, ಅದು ಬೇರೆ ಪ್ರಶ್ನೆ. ಈಗ ಮುಖ್ಯವಾಗಿ ಗೃಹ ಮಂತ್ರಿಗಳು ಬಂದಿದ್ದಾರೆ. ದಯವಿಟ್ಟು ಗಮನಿಸಬೇಕು. ಅವರ ಗಮನಕ್ಕೆ ನಮ್ಮ ಪಕ್ಷ . . . .

ಶ್ರೀ ಕೆ. ಶ್ರೀನಿವಾಸಗೌಡ : ಜೀವಮಾನದಲ್ಲಿ ಕಾಂಗ್ರೆಸ್ ತತ್ವ ಒಪ್ಪಿದವರಲ್ಲ ಎಂದಿರಿ. ಈಗ ಒಪ್ಪಿ ನಾನು ಇಲ್ಲೇ ಇದ್ದೇನೆ. ದಯವಿಟ್ಟು ತಪ್ಪು ಗ್ರಹಿಕೆ ಹೇಳುವುದು ಬೇಡ. ಕಾಂಗ್ರೆಸ್ ತತ್ವವನ್ನು ಒಪ್ಪಿ ನಾನು ಈ ಕಡೆ ನಿಂತಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅನಿವಾರ್ಯವಾಗಿ ಹೋಗಿದ್ದೇನೆ ಎಂದು ಹೇಳಿದವರು ನೀವು. ಈಗ ಅವರು ತತ್ವ, ಅದು ಒಪ್ಪಿ ಹೋಗಿದ್ದೇನೆಂದು ಹೇಳುತ್ತಿದ್ದಾರೆ. ಅನಿವಾರ್ಯವಾಗಿ ಹೋಗಿದ್ದೇನೆಂದು ಹೇಳಿದವರು ನೀವು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕಟ್ಟಾ ಕಾಂಗ್ರೆಸ್ ವಾದಿಗಳೆಂದು ಹೇಳಿದರೆ ನಮಗೇನೂ ನಷ್ಟವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಯಾರು ಯಾವ್ಯಾವ ಪಕ್ಷಕ್ಕೆ ಹೋಗ ತಕ್ಕಂಥವರು, ಪಕ್ಷ, ಸಿದ್ಧಾಂತ, ಇವರ ಆಧಾರದ ಮೇಲೆ ಪ್ರಾಮಾಣಿಕವಾಗಿ ಹೋಗುತ್ತಿಲ್ಲ. ಅವಕಾಶವಾದಿಗಳು. ಹೋದ ವರ್ಷ ಒಂದು; ಈ ವರ್ಷ ಒಂದು, ಮುಂದಿನ ವರ್ಷ ಒಂದು. ನಾವು ದಿನಾ ನೋಡುತ್ತಿದ್ದೇವೆ. ಅದು ಅರ್ಥ ಇಲ್ಲ. ಪಕ್ಷಾಂತರ ಮಾಡಿ, ಪಕ್ಷಾಂತರ ಒಂದು ಪಿಡುಗಾಗಿದೆ. ಅವಕಾಶವಾದಿಗಳು. ಬೇರೆ ಮಾತಿಲ್ಲ. ನೀವು ಪ್ರಾಮಾಣಿಕವಾಗಿ ತತ್ವದ ಆಧಾರದ ಮೇಲೆ ಕಾಂಗ್ರೆಸ್‌ಗೆ ಹೋದವರಲ್ಲ. ಮತ್ತು ಮಾನ್ಯ ಪ್ರಕಾಶ್‌ರವರು ತತ್ವದ ಆಧಾರದ ಮೇಲೆ ಆ ಕಡೆ ಹೋದವರಲ್ಲ. ಪ್ರಾಮಾಣಿಕವಾಗಿ ಒಪ್ಪಿಕೊಳ್ಳೋಣ. ಸುಮ್ಮನೆ ಇದೆಲ್ಲಾ ಬೇಡ. ಅವಕಾಶ ಸಿಗಬೇಕು, ಅಧಿಕಾರಕ್ಕೆ ಬರಬೇಕು. ಈಗ ನಡೆಯುತ್ತಿಲ್ಲವೇ? ನಾಳೆ ಬೆಳಗ್ಗೆ ಜನತಾ, ನಾಳೆ ಬೆಳಿಗ್ಗೆ ಬಿಜೆಪಿ, ನಾಳೆ ಬೆಳಗ್ಗೆ ಕಾಂಗ್ರೆಸ್. ನಾವು ಮಾಡಿದ್ದೇ ಸರಿ. ಪತ್ರಿಕೆಗಳು ಅದಕ್ಕೆ ವೈಭವೀಕರಣ ಮಾಡುತ್ತವೆ. ಪಕ್ಷಾಂತರಕ್ಕೆ ಪತ್ರಿಕೆಗಳು ಕೊಡುವ ಪ್ರಚಾರವನ್ನು ನಾನು ಹಿಂದೆಂದೂ ನೋಡಿಲ್ಲ. ಎಷ್ಟು ಪ್ರಚಾರ ಕೊಡುತ್ತಿದ್ದೀರಿ. ನಿಮಗೆ ನಮೋ ನಮಃ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷದ ವತಿಯಿಂದ ನಾವು ಮುಖ್ಯಮಂತ್ರಿಗಳ ಹತ್ತಿರ ಹೋಗಿ ಒಂದು ವಿಚಾರವನ್ನು ಭಾರೀ ಸ್ಪಷ್ಟ ಮಾಡಿದ್ದೇವೆ. ನಾನು ಆಗಲೇ ಹೇಳಿದ ಹಾಗೆ, ಅವರು ಇರಲಿಲ್ಲ. ಭೂಮಿ ಹಂಚುವ ಕೆಲಸವನ್ನು ಮೊದಲು ಚಿಕ್ಕಮಗಳೂರು ಡಿಸ್ಟ್ರಿಕ್ಟ್‌ನಲ್ಲಿ ಮಾಡಬೇಕು. ಒಕ್ಕಲೆಬ್ಬಿಸಬಾರದು. ಸನ್ಮಾನ್ಯ ಸಿದ್ದರಾಮಯ್ಯನವರೆ, ಅದಕ್ಕಿಂತ ಬಹಳ ಮುಖ್ಯವಾಗಿ ನಾನು ಮುಖ್ಯಮಂತ್ರಿಗಳ ಗಮನಕ್ಕೆ ಮತ್ತು ಈ ಸದನದ ಗಮನಕ್ಕೆ ತರಲು ಇಚ್ಛೆಪಡುತ್ತಿದ್ದೇನೆ. ನಾವು ಒಂದನ್ನು ಆಲೋಚನೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳೆ, ಸಿದ್ದರಾಮಯ್ಯನವರೆ, ಒಂದು ವಿಚಾರವನ್ನು ಸದನ ಮತ್ತು ಮುಖ್ಯಮಂತ್ರಿಗಳ ಗಮನಕ್ಕೆ ತರಲು ಇಷ್ಟಪಡುವುದೇನೆಂದರೆ, ಚಿಕ್ಕಮಗಳೂರು ಮತ್ತು ಪಶ್ಚಿಮ ಘಟ್ಟಗಳಲ್ಲಿ ಏಕೆ ಅವರು ನೆಲೆ

ಮಾಡಿಕೊಂಡಿದ್ದಾರೆನ್ನುವುದನ್ನು ನಿಮ್ಮ ಇಂಟೆಲಿಜೆನ್ಸ್‌ನವರು ಇವತ್ತಿಗಾದರೂ ಏನಾದರೂ ಫೈಂಡ್-ಔಟ್ ಮಾಡಿದ್ದಾರೆಯೇ? ಕೇಳಿ. ನಾನು ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ, ವೆಸ್ಟರ್ನ್ ಘಾಟ್ಸ್ ಅನ್ನು ಏಕೆ ಅವರು ಆಯ್ಕೆ ಮಾಡಿಕೊಂಡಿದ್ದಾರೆ ಎನ್ನುವುದು ನಾನು ಇವತ್ತು ಕೂಡ ಸವಾಲು ಹಾಕಿ ಕೇಳುತ್ತೇನೆ, ನಮ್ಮ ಪೊಲೀಸ್ ಇಂಟೆಲಿಜೆನ್ಸ್‌ಗೆ ಗೊತ್ತಿಲ್ಲ. ಏಕೆ ಅವರು ವೆಷ್ಟರ್ನ್ ಘಾಟ್ಸ್ ಅನ್ನು ಆಯ್ಕೆ ಮಾಡಿಕೊಂಡಿರುವುದು? ಈ ಕಡೆ ಆಂಧ್ರಪ್ರದೇಶದ ಮಾವೋವಾದಿಗಳು, ಆ ಕಡೆ ಛತ್ತೀಸ್‌ಘಡದ ಮಾವೋವಾದಿಗಳು, ನೇಪಾಳದ ಮಾವೋವಾದಿಗಳು. ಇವರಿಗೆ ದಕ್ಷಿಣ ಭಾರತದಲ್ಲಿ ಅಡಗುತಾಣಗಳು ಬೇಕಾಗಿದೆ. ದಕ್ಷಿಣ ಭಾರತದಲ್ಲಿ ಏಕೆ ಅಡಗುದಾಣಗಳು ಬೇಕಾಗಿವೆ ಎಂದರೆ ಆಂಧ್ರದಲ್ಲಿ ನಡೆಯುತ್ತಿರುವ ಪೊಲೀಸ್ ಕಾರ್ಯಾಚರಣೆ, ಛತ್ತೀಸ್‌ಘಡ, ಉತ್ತರಾಂಚಲದಲ್ಲಿ ನಡೆಯುತ್ತಿರುವ ಪೊಲೀಸ್ ಕಾರ್ಯಾಚರಣೆ, ನೇಪಾಳದಲ್ಲಿ ಆದಂಥ ಕಾರ್ಯಾಚರಣೆಗಳನ್ನು ತಪ್ಪಿಸಿಕೊಂಡು ಬಂದು ನೆಲೆಸುವುದಕ್ಕೆ ಅವರಿಗೆ ಅಡಗುದಾಣಗಳು ಬೇಕು. ಅವರಿಗೆ ಅಡಗುದಾಣ ದಕ್ಷಿಣ ಭಾರತದ safest place is western ghats. ಇದು western ghats ಅನ್ನು ಆಯ್ಕೆ ಮಾಡಿಕೊಂಡಿರುವುದಕ್ಕೆ ಮೊದಲನೇ ಕಾರಣವಾಗಿದೆ. ಇನ್ನು ವೆಂಕಟಮ್ಮನಹಳ್ಳಿಯಲ್ಲಿ ಆ ಘಟನೆ ಏಕೆ ನಡೆಯಿತು, ಪಾವಗಡ ತಾಲ್ಲೂಕನ್ನೇ ಅವರು ಏಕೆ ಆಯ್ಕೆ ಮಾಡಿಕೊಂಡಿದ್ದಾರೆಂದರೆ, ಅದಕ್ಕೆ ಇನ್ನೊಂದು ಪ್ರಮುಖವಾದ ಕಾರಣವಿದೆ. ತೆಲಗು ಮತ್ತು ಕನ್ನಡ ಹೀಗೆ ಎರಡೂ ಭಾಷೆಗಳನ್ನು ಬಲ್ಲಂಥ ಜನ ಅವರಿಗೆ ಬೇಕಾಗಿದೆ. ಪಾವಗಡ, ಬಾಗೇಪಲ್ಲಿಯಂಥ ತಾಲ್ಲೂಕುಗಳಲ್ಲಿ ತೆಲಗು ಮತ್ತು ಕನ್ನಡ ಭಾಷೆ ಮಾತನಾಡುವುದಕ್ಕೆ ಬರತಕ್ಕಂಥ ಜನ ಇದ್ದಾರೆ. ಅವರನ್ನು ಉಪಯೋಗಿಸಿ ಭಾಷೆಯ ಸಮಸ್ಯೆಯನ್ನು ಪರಿಹಾರ ಮಾಡಿಕೊಂಡು western ghats ಅನ್ನು ಅಡಗುದಾಣಗಳನ್ನಾಗಿ ಮಾಡಿ, ನಾಳೆಯ ದಿವಸ ಛತ್ತೀಸ್‌ಗಡದ ಮಾವೋವಾದಿಗಳು, ಜಾರ್ಖಂಡ್‌ನಿಂದ ಶಸ್ತ್ರಾಸ್ತ್ರಗಳು ಬೆಂಗಳೂರಿಗೆ ಬಂದಿದೆ ಎಂದು ಪತ್ರಿಕೆಯಲ್ಲಿ ಬಂದಿರುವುದು ಈಗಾಗಲೇ ಎಲ್ಲರಿಗೆ ಗೊತ್ತಿದೆ. ಜಾರ್ಖಂಡ್, ಛತ್ತೀಸ್‌ಗಡ, ನೇಪಾಳದ ಮಾವೋವಾದಿಗಳು, ಬಿಹಾರದ ಮಾವೋವಾದಿಗಳು ಹೀಗೆ ಇವರೆಲ್ಲಾ ಪಲಾಯನ ಮಾಡಿದಾಗ ನಮ್ಮ ರಾಜ್ಯದ western ghats ಬಹಳ safest ತಂಗುದಾಣಗಳು ಅವರಿಗೆ ಆಗುತ್ತದೆ. ಅದಕ್ಕೋಸ್ಕರ ಅವರು western ghats ಅನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎನ್ನತಕ್ಕಂಥ ವಿಚಾರವು ಇಲ್ಲಿಯ intelligence police ನವರಿಗೆ ಗೊತ್ತಿದೆಯೇ? ಆ ಸ್ಥಳವನ್ನು ಏಕೆ ಆಯ್ಕೆ ಮಾಡಿಕೊಂಡರು ಎಂಬುದನ್ನು ನೀವು ಕೇಳಿ ನೋಡಿ. ಆದ್ದರಿಂದ ಇದನ್ನು ಕೇವಲ ಕಾನೂನಿನ ದೃಷ್ಟಿಯಿಂದ ನೋಡಬಾರದು. ಇದರಲ್ಲಿ ರಾಜಕೀಯ ಪ್ರಶ್ನೆ ಅಡಗಿದೆ, ಭೂಮಿ ಪ್ರಶ್ನೆ ಅಡಗಿದೆ, ಕೂಲಿ ಪ್ರಶ್ನೆ ಅಡಗಿದೆ, ಅಂದರೆ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪ್ರಶ್ನೆ ಇಲ್ಲಿ ಮೂಲಭೂತವಾಗಿದೆ ಹೊರತು ಇದು ಕಾನೂನಿನ ಪ್ರಶ್ನೆಯಲ್ಲ. ಕಾನೂನು ಮುಖಾಂತರವೇ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆಂದರೆ ಅದು ಸಂಪೂರ್ಣವಾಗಿ ಸರ್ಕಾರದ ದಡ್ಡತನವಾಗುತ್ತದೆ. ಅದರಿಂದ ಪರಿಹಾರವಾಗುವುದಿಲ್ಲ. ಮೂಲಭೂತ ಸಮಸ್ಯೆಗೆ ಪರಿಹಾರ ಹುಡುಕಬೇಕಾಗಿದೆ ಎಂದು ನಾನು ಸ್ಪಷ್ಟವಾಗಿ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಕಡೆಯದಾಗಿ ಒಂದು ವಿಚಾರವನ್ನು ಹೇಳುವುದೇನೆಂದರೆ, ಕುವೆಂಪು ಯೂನಿವರ್ಸಿಟಿಯಲ್ಲಿ ನಕ್ಸಲೈಟ್ ಪರವಾಗಿರುವಂಥ ಪ್ರೊಫೆಸರುಗಳಿದ್ದಾರೆ, ಲೆಕ್ಚರರುಗಳಿದ್ದಾರೆ ಎಂದು ಒಂದು ಗುಲ್ಲೆಬ್ಬಿಸಿದ್ದಾರೆ. ಇದು ಖಂಡಿತವಾಗಿಯೂ ತಪ್ಪು ಅಭಿಪ್ರಾಯ. ಈಗ ಯಾರೋ ಪ್ರೊಫೆಸರ್ ಆಗಬಹುದು, ಒಬ್ಬ

ಇತಿಹಾಸ ತಜ್ಞ ಆಗಬಹುದು, ಒಬ್ಬ ಅರ್ಥಶಾಸ್ತ್ರಜ್ಞ ಆಗಬಹುದು, ಆತನದೇ ಆದಂಥ ಕೆಲವು ಸಿದ್ಧಾಂತಗಳು ಆತನಲ್ಲಿ ಇರುತ್ತವೆ. ಅದರ ಅರ್ಥ ಇವರಿಗೆಲ್ಲಾ ಬೆಂಬಲ ಕೊಟ್ಟಿದ್ದಾರೆಂದು ಹೇಳುವಂಥ ಅರ್ಥವಲ್ಲವಿದು. JNU University, Hyderabad Central University, JNU is a international reputed University. ಅದರಲ್ಲಿ ಇವತ್ತು ಎಲ್ಲಾ ಸಿದ್ಧಾಂತಗಳನ್ನು ಬಹಿರಂಗವಾಗಿ ಪ್ರತಿಪಾದನೆ ಮಾಡತಕ್ಕಂಥ ಪ್ರೊಫೆಸರುಗಳಿದ್ದಾರೆ. ಇದೇ ತರಹ ಹೈದರಾಬಾದ್ ಸೆಂಟ್ರಲ್ ಯೂನಿವರ್ಸಿಟಿಯಲ್ಲಿದ್ದಾರೆ. IIT Kharagpur ದಲ್ಲಿದ್ದಾರೆ. ಹೀಗೆ ಎಲ್ಲಾ ಕಡೆ ಇದ್ದಾರೆ. ಆದರೆ ಯಾರೋ ಒಬ್ಬರು ಗುಲ್ಲೆಬ್ಬಿಸಿದರೆಂದು ಸಾರಾಸಗಟಾಗಿ ಎಲ್ಲಾ ಪ್ರೊಫೆಸರುಗಳು, ಎಲ್ಲಾ ಲೆಕ್ಚರರುಗಳು ನಕ್ಸಲೀಯರ ಪರವಾಗಿದ್ದಾರೆಂದು ಇವತ್ತು ನಿಮ್ಮ ಪೋಲೀಸ್‌ನವರು ಅವರಿಗೆ ಹಿಂಸೆ ಕೊಡುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಗಮನಹರಿಸಿ ಇದನ್ನು ಮೊದಲು ತಪ್ಪಿಸಬೇಕು.

ಶ್ರೀ ಡಿ.ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಈ ಚಟುವಟಿಕೆ ನಡೆಯುತ್ತಿದೆಯೆಂದು ಹೇಳುತ್ತಿರುವುದು ನಮಗೆ ಗೊತ್ತಾದ ಮೇಲೆ ನಾನು ಅಲ್ಲಿಯ ರಿಜಿಸ್ಟ್ರಾರ್ ಮತ್ತು ವೈಸ್‌ಚಾನ್ಸಲರನ್ನು ಹಾಗೂ ಕೆಲವು ಪ್ರೊಫೆಸರುಗಳನ್ನು ಕರೆಸಿ ಚರ್ಚೆ ಮಾಡಿದ್ದೇನೆ. ಅಲ್ಲಿ ಅಂಥ ಚಟುವಟಿಕೆಗಳು ಯಾವುದೂ ನಡೆಯುತ್ತಿಲ್ಲವೆಂದು, ಅಲ್ಲಿ ಅಂಥವರು ಯಾರೂ ಇಲ್ಲವೆಂದು ಅವರು ಬಹಳ ಸ್ಪಷ್ಟವಾಗಿ ಹೇಳಿದರು. ಅದನ್ನು ನಾನು ಪತ್ರಿಕೆಯಲ್ಲಿ ಸಹ ಹೇಳಿದ್ದೇನೆ. ಅದರಂತೆ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಮಾತ್ರ ಯಾವುದೇ ಈ ತರಹದ ನಕ್ಸಲೈಟ್ ಚಟುವಟಿಕೆ ನಡೆಯುತ್ತಿಲ್ಲವೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ತಮಗೆ ತಿಳಿಸಬಯಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನೀವು ಹೇಳಿದ್ದೀರಿ. ಈಗ ನಾನು ನಿಮ್ಮ ಬಗ್ಗೆ ಹೇಳಲಿಲ್ಲ. ಪೋಲೀಸ್‌ನವರು interrogate ಮಾಡತಕ್ಕಂಥ ಹೆಸರಿನಲ್ಲಿ ಹಲವಾರು ಪ್ರೊಫೆಸರ್ಸ್ ಮತ್ತು ಲೆಕ್ಚರರ್ಸ್ ಅನ್ನು ಹಿಡಿದುಕೊಂಡು ಬಂದು Interrogate ಮಾಡುತ್ತಿದ್ದಾರೆ. ಮೊನ್ನೆ ವಿರಾಜಪೇಟೆಯಲ್ಲಿ ಒಬ್ಬರು ಪ್ರೊಫೆಸರನ್ನು ಹಿಡಿದು interrogate ಮಾಡಿದ್ದಾರೆ. ಇದನ್ನೇ ನಾನು ಇಲ್ಲಿ ಹೇಳುತ್ತಿರುವಂಥದ್ದು. ನೀವು ಸ್ಪಷ್ಟವಾಗಿ ಹೇಳಿದ್ದೀರಿ. ನಮಗೆ ಗೊತ್ತಿದೆ. ನಿಮ್ಮ ಹೇಳಿಕೆಯನ್ನು ನಾನು ನೋಡಿದ್ದೇನೆ. ಆದರೆ ಪೋಲೀಸ್‌ನವರು ಇವತ್ತು ಆ ಕೆಲಸವನ್ನು ಮಾಡುತ್ತಿದ್ದಾರೆ. ಈ ರೀತಿ ಮಾಡುತ್ತಿರುವುದನ್ನು ತಕ್ಷಣ ಕೈಬಿಡಬೇಕು. ಇದು ಸರಿಯಾದದ್ದು ಅಲ್ಲ. ಸಾಹಿತಿಗಳು ಇದ್ದಾರೆ, ಮೇಧಾವಿಗಳಿದ್ದಾರೆ, ಅವರು ಸಹಾನುಭೂತಿಯನ್ನು ವ್ಯಕ್ತಪಡಿಸಿದ ಕಾರಣಕ್ಕೋಸ್ಕರವಾಗಿ ಅವರು ನಕ್ಸಲೈಟ್ ಸಿದ್ಧಾಂತವನ್ನು ಒಪ್ಪಿದ್ದಾರೆಂದಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ವಿಚಾರವನ್ನು ಹೇಳತಕ್ಕಂಥವರು ವಿಚಾರವಾದಿಗಳು ಅಂಥವರು ಇದ್ದರೆ ಅವರನ್ನು ನಕ್ಸಲಿಸ್ಟ್ ಎಂದು ಹೇಳಿಬಿಡುವುದು! ಅವರ ಮೇಲೆ ಪೋಲೀಸ್‌ರಿಂದ ವಿಚಾರಣೆ ನಡೆಸುವುದು ಇದು ಒಳ್ಳೆಯ ಸೂಚನೆ ಅಲ್ಲ. ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಎಲ್ಲೆಲ್ಲಿ ವಿಚಾರವಾದಿಗಳು ಯಾರ್‍ಯಾರು ಇದ್ದಾರೆ ಇವರೆಲ್ಲರೂ ಸಂಪೂರ್ಣವಾಗಿ ನಕ್ಸಲೈಟ್ಸ್ ಎನ್ನುವ ಭಾವನೆ ಬರುವ ರೀತಿಯಲ್ಲಿ ಇವತ್ತು ಗುಲ್ಲೆಬ್ಬಿಸುತ್ತಿದ್ದಾರೆ ಇದು ಒಳ್ಳೆಯದಲ್ಲ. ಆದ್ದರಿಂದ ಈ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ಅವರ ಉತ್ತರದಲ್ಲಿ ಹೇಳಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ವಿಚಾರವಾದಿಗಳನ್ನೆಲ್ಲಾ ನೀವು ನಕ್ಸಲೈಟ್‌ರ ಜೊತೆ ಕೈಜೋಡಿಸಿದ್ದೀರಿ ಎಂದು ಹೇಳಿದರೆ ಅದು ಅಕ್ಷಮ್ಯ ಅಪರಾಧವಾಗುತ್ತದೆ. ಆದರೆ ನಿಮ್ಮ intelligence department ಇದೆ. ವರದಿಗಳು ಇವೆ. ಯಾರು ಈ ಟ್ರೈನಿಂಗ್ ಕೊಡುತ್ತಿದ್ದಾರೆ, ಯಾರು ಅವರ ಜೊತೆ ನೇರವಾಗಿ ಸಂಪರ್ಕ ಇಟ್ಟುಕೊಂಡಿದ್ದಾರೆ ಅವರು ಅಪರಾಧಿಗಳು ಅಲ್ಲವೇ? ಅಂಥವರಿಗೆ ರಕ್ಷಣೆ ಕೊಡಬೇಡಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇವೆ. ಈಗ ಏನಾಗಿದೆ ಎಂದರೆ ಸಾರಾಸಗಟಾಗಿ ಎಲ್ಲರನ್ನೂ ಒಂದೇ ಸಾಲಿನಲ್ಲಿ ನಿಲ್ಲಿಸುವುದಕ್ಕಾಗುವುದಿಲ್ಲ. ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದಂತೆ ಯಾರು ಇದಕ್ಕೆ ಚಿತಾವಣೆ ಮಾಡಿದ್ದಾರೆ ಮತ್ತು ಅದಕ್ಕೆ ಏನು ಸಾಕ್ಷ್ಯಾಧಾರಗಳಿವೆ, ಇದನ್ನು ತನಿಖೆ ಮಾಡುವುದರ ಕಡೆಗೆ ಈ ಸರ್ಕಾರ ಗಮನ ಕೊಡುತ್ತಿಲ್ಲ. ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಿ ಎನ್ನುವುದು ಎಲ್ಲರ ಅಭಿಪ್ರಾಯವಾಗಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಆದರೆ ನಾನು ಹೇಳುತ್ತಿರುವುದೇನೆಂದರೆ, ಆ ಹೆಸರಿನಲ್ಲಿ ಎಲ್ಲರನ್ನೂ ಸಾರಾಸಗಟಾಗಿ ಈಗ ಪತ್ರಕರ್ತರು ಸಾಹಿತಿಗಳು ಬುದ್ಧಿಜೀವಿಗಳು, ಪ್ರೊಫೆಸರ್ಸ್ ಇವರುಗಳು ಅವರ ಬಗ್ಗೆ ಏನೋ ಎರಡು ಮಾತು ಬರೆದರೆ ಅವರು ನಕ್ಸಲೈಟ್ ಪರ ಎಂದು ತೀರ್ಮಾನ ಮಾಡುವುದು ಸರಿಯೇ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ವಿಚಾರ ಪರವಾದಂಥ ಭಾಷಣ ಮಾಡುವುದು, ವಿಚಾರಪರವಾದಂಥ ಲೇಖನಗಳನ್ನು ಬರೆಯುವುದು, ವಿಚಾರಪರವಾದಂಥ ಚಿಂತನೆ ಮಾಡುವವರು ಹೀಗೆ ಇವರೆಲ್ಲರೂ ನಕ್ಸಲೈಟ್ಸ್ ಎನ್ನುವ ತೀರ್ಮಾನಕ್ಕೆ ಬರುವುದಾದರೆ ಇದರಿಂದ ಕಷ್ಟವಾಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ತಪ್ಪು ಗ್ರಹಿಕೆಯಿಂದ ಕೆಲವರಿಗೆ ಆ ಅಭಿಪ್ರಾಯ ಸಹಾನುಭೂತಿ ಬಂಧಿರುವುದಕ್ಕೆ ಸಾಧ್ಯವಿದೆ. ಉದಾಹರಣೆಗೆ ಹೇಳುವುದಾದರೆ, 1983ರಲ್ಲಿ ಆವತ್ತಿನ ಆಂಧ್ರದ ಮಹಾನಾಯಕ, ಮುಖ್ಯಮಂತ್ರಿಯಾಗಿದ್ದ ದಿವಂಗತ ಎನ್. ಟಿ. ರಾಮರಾವ್‌ರವರು ಒಂದು ದಿವಸ ಒಂದು ಹೇಳಿಕೆಯನ್ನು ಮುಖ್ಯಮಂತ್ರಿಯಾಗುವುದಕ್ಕೆ ಮೊದಲು ಕೊಟ್ಟಿದ್ದರು. "ಈ ದೇಶದ ಮಹಾನ್ ದೇಶಭಕ್ತರು ಯಾರೆಂದರೆ ನಕ್ಸಲೈಟ್ಸ್ ಎಂದು" ಅವರೇ ಹೇಳಿದ್ದರು. ದಿವಂಗತ ಎನ್.ಟಿ. ರಾಮರಾವ್‌ರವರು ಹೇಳಿದ ಆ ವಿಚಾರ ಬಹುಶಃ ಮಾನ್ಯ ರಮೇಶ್‌ಕುಮಾರ್‌ರವರಿಗೆ ಗೊತ್ತಿರಬಹುದು. ಆದರೆ ಅದೇ ಎನ್.ಟಿ. ರಾಮರಾವ್ ಮುಖ್ಯಮಂತ್ರಿಯಾದ ಮೇಲೆ ಅವರ ಪೋಲೀಸ್‌ನವರೇ ನೂರಾರು ನಕ್ಸಲೈಟ್ಸ್‌ರನ್ನು ಕೊಲೆ ಮಾಡಿದರು. ಕೆಲವು ತಪ್ಪು ಗ್ರಹಿಕೆಗಳಿಂದ ಆ ರೀತಿಯ ಅಭಿಪ್ರಾಯ ಕೆಲವರಿಗೆ ಬಂದಿರಬಹುದು. ಆದ್ದರಿಂದ ಸಾರಾಸಗಟಾಗಿ ಅವರನ್ನು interrogate ಮಾಡತಕ್ಕಂಥದ್ದು ಸರಿಯಲ್ಲ ಮತ್ತು ಪಶ್ಚಿಮಘಟ್ಟಗಳನ್ನು ಅಡಗುದಾಣಗಳಾಗಿ ಏನು ಮಾಡಬೇಕೆಂದಿದ್ದಾರೆ ಅದರ ಬಗ್ಗೆ ಪೋಲೀಸ್‌ನವರು ಎಚ್ಚರಿಕೆಯಿಂದರಬೇಕೆಂದು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇನ್ನು ಅವರು ಮಾವೋವಾದಿಗಳಲ್ಲ. ಅವರು ಮಾವೋವಾದಕ್ಕೆ ಸಂಪೂರ್ಣವಾದಂಥ ವಿರೋಧಿಗಳು. ಅವರು ಲಿಂಗ್‌ಪಿಯೋವಾದಿಗಳು.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರ ಮಾತಿಗೆ ಪೂರಕವಾಗಿ ಹೇಳುತ್ತಿದ್ದೇನೆ. ಆಯಾ ಸಂದರ್ಭಗಳಿಗೆ ಸಂಬಂಧಪಟ್ಟಂತೆ ಹಿಂಸೆ ಅಹಿಂಸೆ ಈ ವಿಚಾರದಲ್ಲಿ ಇತಿಹಾಸದಲ್ಲಿ ಬೇಕಾದಷ್ಟು ಚರ್ಚೆಗಳು ಆಗಿವೆ. ಭಗತ್‌ಸಿಂಗ್‌ರವರು ಮತ್ತು ಆಜಾದ್‌ರವರೆಲ್ಲಾ ತೆಗೆದುಕೊಂಡಂಥ ಹಿಂಸೆಯನ್ನು ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರು ಅದನ್ನು ಖಂಡಿಸಿರುತ್ತಾರೆ. ಆದರೆ ಭಗತ್‌ಸಿಂಗ್‌ರಂಥ ದೇಶಪ್ರೇಮಿ ಮತ್ತೊಬ್ಬರು ಹುಟ್ಟಲಾರ ಎಂದು ತಮ್ಮ ಪತ್ರಿಕೆಯಲ್ಲಿ ಕೂಡ ಬರೆಯುತ್ತಾರೆ. ಅದೇ ರೀತಿಯಾಗಿ ಅರವಿಂದರ ಬಗ್ಗೆ ಅವರು ಮುಂದೆ ಪರಿವರ್ತನೆ ಆದಂಥ ಸಂದರ್ಭದಲ್ಲಿ ಯಾವ ಸದುದ್ದೇಶದಿಂದ ಯಾವ ಮಾರ್ಗದಲ್ಲಿ ಹೋಗುತ್ತಾರೆ ಎನ್ನುವುದರ ಬಗ್ಗೆ ಮತ್ತು ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡಿರತಕ್ಕಂಥ ಸುಭಾಷ್‌ಚಂದ್ರ ಭೋಸ್‌ರ ಬಗ್ಗೆ ನೆಹರೂರವರು ವಕಾಲತ್ತು ಮಾಡುವುದನ್ನು ಬಿಟ್ಟು 30 ವರ್ಷಗಳ ನಂತರ ಪ್ರಥಮಬಾರಿಗೆ ಅವರ ಪರವಾಗಿ ವಕಾಲತ್ತು ಮಾಡಿರುವಂಥದ್ದನ್ನು ಕಾಣುತ್ತೇವೆ. ಇದು ಬುದ್ಧಿಜೀವಿಗಳಾದಂಥವರು ಪ್ರಗತಿಪರರಾಗಿರತಕ್ಕಂಥವರು ಆಯಾ ಸಂದರ್ಭ ಘಟನೆ ಇವುಗಳನ್ನು ನೋಡಿ ವಿಶ್ಲೇಷಿಸುತ್ತಾರೆ. ಆದ್ದರಿಂದ ಯಾರೋ ಒಬ್ಬ ರಾಜೇಂದ್ರ ಚನ್ನಿ ಎನ್ನುವಂಥವರು ಪ್ರಗತಿಪರವಾಗಿ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಯಾವಾಗಲೂ ಮಾತನಾಡುತ್ತಾರೆ. ರಾಜಾರಾಂ ಹೆಗಡೆಯಂಥವರು ಲೇಖನಗಳನ್ನು ಬರೆಯುತ್ತಾರೆಂದು ಅನಾವಶ್ಯಕವಾಗಿ ಅವರ ಬಗ್ಗೆ ಸಂಶಯವನ್ನು ಸರ್ಕಾರ ಪಡುತ್ತಿಲ್ಲ. ಅಕಸ್ಮಾತ್ ಯಾರಾದರೂ ಆ ರೀತಿ ಪಡತಕ್ಕಂಥವರು ಇದ್ದರೆ ಅದು ತಪ್ಪು ಗ್ರಹಿಕೆಯಿಂದ ಆಗಿರತಕ್ಕಂಥದ್ದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಇದಕ್ಕೆ ಪೂರಕವಾಗಿ ಮಾನ್ಯ ಪ್ರಕಾಶ್‌ರವರು ಬಹಳ ಒಳ್ಳೆಯ ಮಾತನ್ನು ಹೇಳಿದರು. ಪಂಡಿತ್ ಜವಾಹರಲಾಲ್‌ರವರು Meerut conspiracy case ನಲ್ಲಿ ಅಪರಾಧಿಗಳಾಗಿದ್ದಂಥ ದಾಂಗೆ, ಬಿ.ಟಿ.ರಣದೇವ್, ಮುಜಾಫರ್ ಅಹಮದ್‌ರವರ ಪರವಾಗಿ ಕಾನೂನು ರಕ್ಷಣೆ ಮಾಡಲಿಕ್ಕೆ ಒಂದು ವೇದಿಕೆಯನ್ನು ರಚನೆ ಮಾಡಿ ಅವರೇ ವಾದ ಮಾಡಿದರು. Meerut conspiracy case ಇದು ಜಗತ್‌ಪ್ರಸಿದ್ಧ ಕೇಸ್ ಆಗಿತ್ತು. ವೆಂಕಟಮ್ಮನಹಳ್ಳಿಯಲ್ಲಿ ಪೋಲೀಸರನ್ನು ಕೊಲೆ ಮಾಡಿರುವುದನ್ನು ಆ ರೀತಿ ಮಾಡಿರುವುದು ಸರಿಯಲ್ಲವೆಂದು ಪ್ರಗತಿಪರರು ಸಾಹಿತಿಗಳು ಕೆಲವರು ಖಂಡನೆ ಮಾಡಿದರು.

ಶ್ರೀ ಕೆ.ಎಂ.ತಿಮ್ಮರಾಯಪ್ಪ : ಮಾನ್ಯ ಅಧ್ಯಕ್ಷರೆ, ವೆಂಕಟಮ್ಮನಹಳ್ಳಿಗೆ ಮಾವೋವಾದಿಗಳು ಬಂದಿಲ್ಲ ಅವರು ಮಾವೋವಾದಿ ಅಲ್ಲ ಎನ್ನುವ ಮಾತನ್ನು ಹೇಳಿದರು. ಆದರೆ ವೆಂಕಟಮ್ಮನ ಹಳ್ಳಿಯ ವಿಚಾರವಾಗಿ ನಾನು ಹೇಳುವುದಾದರೆ ಆವತ್ತು ನಡೆದ ಘಟನೆಯಲ್ಲಿ ನಾವೂ ಸಹ ಸ್ವಲ್ಪ ತಡವಾಗಿಯಾದರೂ ಆ ಗ್ರಾಮಕ್ಕೆ ಭೇಟಿ ನೀಡಿದ್ದೆವು. ಅದು ನನ್ನ ಕ್ಷೇತ್ರಕ್ಕೆ ಬರತಕ್ಕಂಥ ಒಂದು ಹಳ್ಳಿ. ಅದು ಆಂಧ್ರಪ್ರದೇಶದಿಂದ ಸುತ್ತುವರೆದಿರತಕ್ಕಂಥ ಒಂದು ಪ್ರದೇಶವಾಗಿರುತ್ತದೆ. ಅಲ್ಲಿ ಆವತ್ತು ರಾತ್ರಿ ನಡೆದಿರತಕ್ಕಂಥ ಘಟನೆಯನ್ನು ನಾನು . . .

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಿ ಮುಗಿಸಿದ ಮೇಲೆ ಬೇಕಾದರೆ ಅವರಿಗೆ ಅವಕಾಶ ಕೊಡಿ. ಅವರು ಆ ಕ್ಷೇತ್ರದ ಶಾಸಕರಾಗಿರುವುದರಿಂದ ಮಾತನಾಡಬಹುದು. ಆ ಮೇಲೆ ಅವರು ಮಾತನಾಡಲಿ. ನಾನು ಮೊದಲು ಮಾತನಾಡಿ ಮುಗಿಸಿಬಿಡುತ್ತೇನೆ. ನಂತರ ಅವರು ಮಾತನಾಡಲಿ. ಆದ್ದರಿಂದ ಇವರನ್ನು ಮಾವೋವಾದಿಗಳೆಂದು

ಕರೆಯುವುದಾಗಲಿ, ವೈಭವೀಕರಣ ಮಾಡತಕ್ಕಂಥದ್ದಾಗಲಿ, ಸರ್ಕಾರದವರು ಆ ಹೆಸರಿನಲ್ಲಿ ಕಾನೂನುಬಾಹಿರವಾದಂಥ ಚಟುವಟಿಕೆಗಳನ್ನು ಮಾಡುವುದಾಗಲಿ, ಯಾರೋ ಕೆಲವರು ಅವರು ಕೋಮುವಾದಿಗಳ ವಿರೋಧಿ ಎಂದ ತಕ್ಷಣವೇ ಅವರೆಲ್ಲರು ನಕ್ಸಲೈಟ್ಸ್ ಎಂದು ಹೇಳತಕ್ಕಂಥ ವಾದವಾಗಲಿ, ಅವೆಲ್ಲವೂ ಸರಿಯಲ್ಲ. ಇದನ್ನು ಸಮಗ್ರವಾಗಿ ಸರ್ಕಾರ ಪರಿಶೀಲನೆ ಮಾಡಿ ಇದಕ್ಕೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿ ಎಂದು ಇದಕ್ಕೆ ಪರಿಹಾರವನ್ನು ಹುಡುಕಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬಹ್ರಾವರ) : ಮಾನ್ಯ ಅಧ್ಯಕ್ಷರೆ, ಈ ಒಂದು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಾ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ಮಾನ್ಯ ಅರಣ್ಯ ಸಚಿವರು ಇಲ್ಲಿ ಇದ್ದಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನನ್ನ ಅಭಿಪ್ರಾಯ, ಏಕೆಂದರೆ ಈ ನಕ್ಸಲೈಟ್ ಚಟುವಟಿಕೆಗಳ ಬಗ್ಗೆ ಚರ್ಚೆಯಾಗುತ್ತಿದೆ. ಅವರದ್ದು ಇಲ್ಲಿ ಬಹಳ ಅಗತ್ಯವಿತ್ತು. ಮಾನ್ಯ ಮುಖ್ಯಮಂತ್ರಿಗಳು ಚಿಕ್ಕಮಗಳೂರು ಜಿಲ್ಲೆಗೆ ಒಂದು ಪ್ಯಾಕೇಜನ್ನು ಅನೌನ್ಸ್ ಮಾಡಿದ್ದಾರೆ. ಈ ಚಟುವಟಿಕೆಗಳು ಚಿಕ್ಕಮಗಳೂರು ಭಾಗದಲ್ಲಿ ಮಾತ್ರ ಇಲ್ಲ. ಪಶ್ಚಿಮಘಟ್ಟದಲ್ಲಿ ಇದೆ ಎಂದು ನಮ್ಮ ಮಾನ್ಯ ರೆಡ್ಡಿಯವರು ಹೇಳಿದರು. ಉಡುಪಿ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಸಹ ವ್ಯಾಪಕವಾಗಿ ಹಬ್ಬುತ್ತಿದೆ. ಆ ಎಲ್ಲಾ ಘಾಟ್ ಸೆಕ್ಷನ್‌ನಲ್ಲಿ ಇದ್ದಾರೆ. ಇದರ ಸಮಸ್ಯೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಕೇವಲ ಪರಿಹಾರವನ್ನು ನಾವು ಕಂಡು ಹಿಡಿಯಲಿಕ್ಕೆ ಸಾಧ್ಯವಾಗುವುದಿಲ್ಲ. ಪರಿಹಾರ ಕಂಡು ಹಿಡಿಯಬೇಕಾದರೆ ಇದರ ಸಮಸ್ಯೆ ಏನೆಂದು ಅರ್ಥ ಮಾಡಿಕೊಳ್ಳಲಿಲ್ಲವೆಂದರೆ ಪರಿಹಾರ ಕಂಡು ಹಿಡಿಯುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಈ ಎನ್‌ಕ್ರೋಚ್‌ಮೆಂಟ್ ಸಮಿತಿಯ ಅಧ್ಯಕ್ಷನಾಗಿದ್ದೇನೆ. ನಮ್ಮ ಭಾಗದಲ್ಲಿ ಅರಣ್ಯವೆಂಬುದು ಸ್ವಲ್ಪ ಸೂಕ್ಷ್ಮವಾಗಿ ನೋಡುವುದಾದರೆ ಅಲ್ಲಿ ಮರಗಳೇ ಇಲ್ಲ. 10–50 ವರ್ಷಗಳಿಂದ ಆ ಭಾಗದಲ್ಲಿ ರೈತರು ಕುಳಿತು ತೋಟವನ್ನು ಮಾಡಿ, ಮನೆಯನ್ನು ಕಟ್ಟಿ, ಬಾವಿಯಲ್ಲಾ ತೋಡಿ, ಅಲ್ಲಿ ಇದೆಲ್ಲಾ ಮಾಡಿ ಅವರು ಅದನ್ನು ಅನುಭವಿಸುತ್ತಾ ಬರುವಾಗ, ಸರ್ವೋಚ್ಚ ನ್ಯಾಯಾಲಯದ ಆದೇಶ ಇದೆ ಎಂದು ಮನೆಯನ್ನು ಒಡೆಯಲಿಕ್ಕೆ ಬಂದರೆ, ಈ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೇ ಅರಣ್ಯ ಇಲಾಖೆಯವರು ಈ ರೀತಿ ಮಾಡಿದರೆ ಹೇಗೆ? ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಜಾರಿಗೆ ತರದಿದ್ದರೆ ಅರಣ್ಯ ಇಲಾಖೆಯವರ ಕೆಲಸ ಹೋಗುತ್ತದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಆ ಆದೇಶವನ್ನು ಜಾರಿಗೆ ತಂದರೆ ಅಲ್ಲಿರುವವನು ಮನೆ–ಮಠ ಕಳೆದುಕೊಳ್ಳುತ್ತಾನೆ. ಆಗ ಅವನು ಏನು ಮಾಡುತ್ತಾನೆ? ಸರ್ವೋಚ್ಚ ನ್ಯಾಯಾಲಯಕ್ಕೆ ಇದನ್ನು ತಿಳಿ ಹೇಳುವಂಥ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ? ಅಲ್ಲಿ ಅಕ್ರಮ–ಸಕ್ರಮದಲ್ಲಿ ನಾವು ಅನೇಕ ಭೂಮಿಗಳನ್ನು ಗ್ರಾಂಟ್ ಮಾಡಿದ್ದೇವೆ. ಅಲ್ಲಿ ಅದರ ಆರ್‌ಟಿಸಿ ಯಲ್ಲಿ ಏನು ಇದೆ ಎಂದರೆ ಸರ್ಕಾರಿ ಎಂದು ಇದೆ. ಸರ್ಕಾರಿ ಎಂದು ಇರುವುದು ಈಗ ಅರಣ್ಯಕ್ಕೆ ಕೊಟ್ಟಿರುವುದು ಎಂದು ಈಗ ಹೇಳುವಂಥದ್ದು ಆದರೆ ಈ ಮೊದಲೇ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಇದರ ಬಗ್ಗೆ ಗೊತ್ತಿರಲಿಲ್ಲವೆ? ಅದರ ಎಂಟ್ರಿಯನ್ನು ಚೇಂಜ್ ಮಾಡಿಸಬೇಕು, ಕಮಿಟಿಯ ಮುಂದೆ ಬರುವುದಕ್ಕೆ ಮುಂಚೆ ಇದನ್ನು ಸರಿಪಡಿಸಬೇಕು ಎಂಬುದು ಅಧಿಕಾರಿಗಳಿಗೆ ಗೊತ್ತಿರಲಿಲ್ಲವೆ? ನಾವು ಅದನ್ನು ಸರ್ಕಾರಿ ಭೂಮಿ ಎಂದು ಸಮಿತಿಯವರಿಗೆ ಆದೇಶಿಸಿದ್ದೇವೆ. ಇದಕ್ಕೇನು ಕಾರಣ ಎಂದರೆ, ನಾವು ಅದನ್ನೆಲ್ಲಾ ನೋಡಿ, ಇವರು ಇಲ್ಲಿಯೇ ಕುಳಿತು ಅಭಿವೃದ್ಧಿ

ಮಾಡಿದ್ದಾರೆ, ಇದನ್ನೆಲ್ಲಾ ನೋಡಿಯೇ ನಾವು ಮಾಡಿರುವುದು. ಹೀಗಿರುವಾಗ ಅದನ್ನು ಒಡೆಯಲಿಕ್ಕೆ ಬಂದರೆ, ನಾವು ಬಿಡುವುದಿಲ್ಲ. ನಕ್ಸಲೈಟ್ ಅವರು ಬೇರೆ ಅವರ ಚಟುವಟಿಕೆ ಬೇರೆ. ನಾವು ಅಲ್ಲಿ ಜನಪ್ರತಿನಿಧಿಗಳಾಗಿ ನಾವೇ ಅವರಿಗೆ ಆ ಮನೆಗಳನ್ನು ಒಡೆಯಲಿಕ್ಕೆ ಬಿಡಲಿಲ್ಲ ಅವರನ್ನು ಒಕ್ಕಲೆಬ್ಬಿಸಲಿಕ್ಕೂ ಬಿಡಲಿಲ್ಲ. ಇದು ನಾವು ತೆಗೆದುಕೊಂಡ ನಿಲುವು. ಅದಕ್ಕೆ ಉಡುಪಿಯಲ್ಲಿ ಈ ಚಟುವಟಿಕೆಗಳ ಬಗ್ಗೆ ಚರ್ಚೆ ಮಾಡಲು ಒಂದು ಸಭೆಯಲ್ಲಿ ನನ್ನನ್ನು ಕರೆದಿದ್ದರು, ನಾನು ಹೋಗಿ ಒಂದು ಮಾತು ಹೇಳಿದೆ. ನಮ್ಮದು ಚಿಂತನೆ ಒಂದೇ ನಮ್ಮ ದಾರಿ ಬೇರೆ ಬೇರೆ, ನಿಮ್ಮದು ಬುಲೆಟ್ ನಮ್ಮದು ಬ್ಯಾಲೆಟ್ ಎಂದು ಹೇಳಿದೆ. ಅರಣ್ಯದಲ್ಲಿ ಅವಿತುಕೊಂಡು, ಶಸ್ತ್ರಾಸ್ತ್ರವನ್ನು ಹಿಡಿದುಕೊಂಡು ಹೋರಾಟ ಮಾಡುವುದನ್ನು ನಾನು ಒಪ್ಪುವುದಿಲ್ಲ ಹಾಗೂ ಇದಕ್ಕೆ ಬೆಂಬಲಿಸುವುದಿಲ್ಲ. ಅವರೂ ಸಹ ಮುಖ್ಯವಾಹಿನಿಗೆ ಬಂದು ಜನರ ಮಧ್ಯದಲ್ಲಿ ಹೋರಾಟ ಮಾಡಬೇಕು ಎನ್ನುವಂಥವನು ನಾನು. ಏಕೆಂದರೆ, ಒಂದು ಕಡೆ ಶಸ್ತ್ರವನ್ನು ಹಿಡಿದುಕೊಂಡು ಹೋರಾಟ ಮಾಡಿದರೆ ಪರಿಹಾರ ಸಿಗುತ್ತದೆ ಎನ್ನುವುದರಲ್ಲಿ ನನಗೆ ನಂಬಿಕೆಯಿಲ್ಲ. ಇದರಲ್ಲಿ ಕೂಡ ನಂಬಿಕೆಯಿಲ್ಲ ಎನ್ನುವ ಪರಿಸ್ಥಿತಿಯಲ್ಲಿ ಅವರು ಬಂದಿದ್ದಾರೆ. ಎಲ್ಲೋ ಒಂದು ಕಡೆ ಎರಡು ಕಡೆಯವರು ಕುಳಿತು ಚರ್ಚೆ ಮಾಡಿದಾಗ, ಪರಿಹಾರವನ್ನು ಕಂಡು ಹಿಡಿಯಲಿಕ್ಕೆ ಸಾಧ್ಯವಾಗಬಹುದು ಎನ್ನುವ ಭಾವನೆ ನನ್ನದು. ಅದಕ್ಕೋಸ್ಕರ ಸರ್ಕಾರದವರು ಎರಡು ಕಡೆಯವರನ್ನು ಕರೆದು ಒಂದು ಕಡೆ ಕುಳಿತು ಚರ್ಚೆಯನ್ನು ಮಾಡಬೇಕು ಮತ್ತು ಒಕ್ಕಲೆಬ್ಬಿಸುವ ಕೆಲಸವನ್ನು ಅದು ಚಿಕ್ಕಮಗಳೂರು ಜಿಲ್ಲೆಯಾಗಲೀ ದಕ್ಷಿಣ ಕನ್ನಡ ಜಿಲ್ಲೆಯಾಗಲೀ ಉಡುಪಿ ಜಿಲ್ಲೆಯಾಗಲೀ ಅಥವಾ ಅದು ಯಾವುದೇ ಭಾಗದಲ್ಲಾಗಲೀ ಒಕ್ಕಲೆಬ್ಬಿಸುವ ಕಾರ್ಯವನ್ನು ನಿಲ್ಲಿಸುವಂಥ ತೀರ್ಮಾನವನ್ನು ತಕ್ಷಣ ಸರ್ಕಾರದವರು ತೆಗೆದುಕೊಳ್ಳಬೇಕು. ಮಾನ್ಯ ಪ್ರಕಾಶ್‌ರವರು ಕಂದಾಯ ಸಚಿವರು, ಪ್ರತಿಯೊಂದು ದಾಖಲೆಗಳನ್ನು ತರಿಸಿ–ನೋಡಿ ಸಚಿವರೇ ಅದರಲ್ಲಿ ಸರ್ಕಾರಿ ಎಂದು ಇದೆ, ಎಲ್ಲಿಯೂ ಅರಣ್ಯ ಎಂದು ಇಲ್ಲ. ಹಾಗಾದರೆ ಇವರು ಒಕ್ಕಲೆಬ್ಬಿಸಲಿಕ್ಕೆ ಏನು ಕಾರಣ ಇದೆ? ಅರಣ್ಯ ಎಂದು ಬದಲಾವಣೆಯಾದ ಮೇಲೆ ಅವರಿಗೆ ಅಧಿಕಾರ ಬರುತ್ತದೆ. ಅರಣ್ಯ ಎಂದು ಬದಲಾವಣೆಯಾಗುವವರೆವಿಗೂ ಅವರಿಗೆ ಅಧಿಕಾರ ಬರುವುದಿಲ್ಲ ಎನ್ನುವ ಅಭಿಪ್ರಾಯವನ್ನು ನಾನು ತಮಗೆ ತಿಳಿಸಲಿಕ್ಕೆ ಬಯಸುತ್ತೇನೆ. ದಯವಿಟ್ಟು ತಾವು ಕಂದಾಯ ಇಲಾಖೆಯವರಿಗೂ ಇದನ್ನು ತಿಳಿಸಬೇಕು, ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಜಿಲ್ಲಾಧಿಕಾರಿಗಳು, ಜಿಲ್ಲೆಯ ಅರಣ್ಯಾಧಿಕಾರಿಗಳು, ಇಬ್ಬರು ಕುಳಿತು ಒಂದು ಮೀಟಿಂಗ್‌ನ್ನು ಮಾಡಿ ಒಂದು ವೇಳೆ ಅವರು ಈಗಾಗಲೇ ಅಲ್ಲಿ ಅಭಿವೃದ್ಧಿಯನ್ನು ಮಾಡಿದ್ದರೆ ಅದಕ್ಕೆ ಪರ್ಯಾಯವಾದ ಜಾಗವನ್ನು ಅರಣ್ಯ ಇಲಾಖೆಗೆ ಅಭಿವೃದ್ಧಿ ಮಾಡಲಿಕ್ಕೆ ಕೊಡಿ. ಇವರನ್ನು ಒಕ್ಕಲೆಬ್ಬಿಸಲಿಕ್ಕೆ ಹೋಗಬೇಡಿ. ಇದು ಮುಂದಿನ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗುತ್ತದೆ ಎಂದು ನಾನು ಹೇಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ತಮಗೆಲ್ಲರಿಗೂ ಗೊತ್ತಿರುವಂತೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಸಮಸ್ಯೆ ಬಹಳ ಉಲ್ಬಣಗೊಂಡಿದ್ದು, ತತ್ಪಲ ಅರಣ್ಯ ಪ್ರದೇಶದಲ್ಲಿ ಒಕ್ಕಲೆಬ್ಬಿಸಿರುವುದು ಇದು ಸುಪ್ರೀಂಕೋರ್ಟಿನ ಆದೇಶದ ಮೇಲೆ ಆಗಿರುವಂಥದ್ದು. ಮಾನ್ಯ ಚಿಕ್ಕಮಗಳೂರು ಶಾಸಕರಾದ ಮಾನ್ಯ ರವಿಯವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ ಒಂದು ವಾರದೊಳಗೆ ನಾವು ಒಂದು ಸಭೆಯನ್ನು ಮಾಡಿದ್ದೇವೆ. ಇದಾದನಂತರ ಸುಮಾರು 3–4 ಸಭೆಗಳನ್ನು, ಜಿಲ್ಲಾಧಿಕಾರಿಗಳು,

ಅರಣ್ಯಾಧಿಕಾರಿಗಳು, ಮತ್ತು ಸಂಬಂಧಿಸಿದಂಥ ಎಲ್ಲರನ್ನು ಕರೆಸಿ, ಇದರ ಬಗ್ಗೆ ಚರ್ಚಿಸಿ, 1978ರ ಆಚೆ ಯಾರ್ಯಾರು ಸಾಗುವಳಿ ಚೀಟಿಯನ್ನು ಪಡೆದುಕೊಂಡಿರುತ್ತಾರೆ ಸಾಗುವಳಿ ಚೀಟಿ ಪಡೆದುಕೊಳ್ಳದೇ ಇದ್ದಾಗಲೂ ಕೂಡ ಅವರು ಫೆನಾಲ್ಟಿ ಮೊದಲಾಗಿ ಕಟ್ಟಿದಂಥ ನಿರಂತರವಾಗಿ ಆ ಭೂಮಿಯಲ್ಲಿ ಸ್ವಾಧೀನದಲ್ಲಿದ್ದಾರೆ, ಸಾಗುವಳಿಯಲ್ಲಿದ್ದಾರೆ ಎನ್ನುವಂಥ ವಿವರಗಳು ಮತ್ತು ದಾಖಲಾತಿಗಳನ್ನು ಪರಿಶೀಲಿಸಿ, ಅಲ್ಲಿರುವಂಥ ಕಂದಾಯ ಗ್ರಾಮಗಳು ಏನಾದರೂ ಇದ್ದರೆ ಅವುಗಳನ್ನು ಕೂಡ ಗುರ್ತಿಸಬೇಕು, ಅವುಗಳನ್ನು ಯಾವ ಕಾರಣಕ್ಕೂ ಕೂಡ ಒಕ್ಕಲೆಬ್ಬಿಸಬಾರದು ಎನ್ನತಕ್ಕಂಥ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿದೆ. ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಬಹಳ ಸಲ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಆದರೆ, 1980ರ ನಂತರದಲ್ಲಿ ಮಾಡತಕ್ಕಂಥದ್ದಲ್ಲ ಎಂದು ಸುಪ್ರೀಂಕೋರ್ಟಿನ ಕಾನೂನಿನ ವ್ಯಾಪ್ತಿಯಲ್ಲಿ ಅದನ್ನು ಹೇಳುತ್ತಿದ್ದಾರೆ. ಆದರೆ ನಾವು ಅದನ್ನು ಕಟ್–ಆಫ್–ಡೇಟ್ 1978 ಎಂದು ಇಟ್ಟುಕೊಂಡಿದ್ದೇವೆ. ಈಗ ಜಂಟಿ ಸರ್ವೆ ಆಗುತ್ತಾ ಇದೆ, ಆ ಸಭೆಗೆ ಅರಣ್ಯ ಸಚಿವರೂ ಕೂಡ ಬಂದಿದ್ದರು, ಎಲ್ಲಾ ಶಾಸಕರು ಕೂಡ ಆ ಸಭೆಗೆ ಬಂದಿದ್ದರು. ಜಂಟಿ ಸರ್ವೆಯಲ್ಲಿ ಸರ್ವೆ ಆಫ್ ಇಂಡಿಯಾದವರಿಗೆ ನಾವೇ ದುಡ್ಡು ಕಟ್ಟಿದ್ದೇವೆ. ಆಗ ನಾವು ಅವರಿಗೆ ಹೇಳಿದೆವು, ಈ ಜಂಟಿ ಸರ್ವೆ ಮಾಡುವಂಥ ಸಂದರ್ಭದಲ್ಲಿ, ಮೊದಲು ಸರ್ಕಾರ 1908ರಲ್ಲಿ ಆಗಲಿ 2003 ರಲ್ಲಾಗಲಿ ಅದಕ್ಕಿಂತ ಪೂರ್ವದಲ್ಲಿ ಆಗಲಿ ಭೂಮಿಯನ್ನು ಅರಣ್ಯಕ್ಕೆ ವಹಿಸಿಕೊಟ್ಟಿದ್ದಾರೆ. ಅದಾದ ನಂತರ ಅರಣ್ಯ ಇಲಾಖೆಯವರು ಪುನಃ ಕಂದಾಯ ಇಲಾಖೆಗೆ ಸ್ವಲ್ಪ ಭೂಮಿಯನ್ನು ಮತ್ತೆ ಮರಳಿಸಿದ್ದಾರೆ. ಈ ಎಲ್ಲಾ ಗೊಂದಲಗಳಲ್ಲಿ ಪೋಡಿಗಳಾಗಿವೆ, ಅವರ ಗಡಿಗಳನ್ನು ಗುರುತು ಮಾಡಿಲ್ಲ, ಈ ಒಂದು ಕಾರಣದಿಂದಲೂ ತೊಂದರೆಯಾಗಿದೆ. ಇದನ್ನು ಈಗ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಾಡುತ್ತಿದ್ದೇವೆ. ಇದನ್ನು ಕೊಡಗು, ಪಶ್ಚಿಮಘಟ್ಟದ ಎಲ್ಲಾ ಪ್ರದೇಶಗಳಿಗೂ ಮಾಡಿ, ಅದಕ್ಕೆ ಒಂದು ಸೂಕ್ತವಾದಂಥ ನಿರ್ಧಾರವನ್ನು ಹಿಂದಿನ ಸರ್ಕಾರವೂ ತೆಗೆದುಕೊಂಡಿದೆ, ನಾವು ಕೂಡ ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸುವಂಥ ಕೆಲಸವನ್ನು ಮಾಡಲಾರದಂತೆ ಕಾನೂನಿನ ಚೌಕಟ್ಟಿನಲ್ಲಿ ಅದನ್ನು ವಿವರಿಸುತ್ತೇವೆ. ಒಂದು ತೊಂದರೆ ಏನಾಗಿತ್ತು ಎಂದರೆ, ಒಬ್ಬ ಜಿಲ್ಲಾಧಿಕಾರಿ, ಅದು ಯಾವ್ಯಾವ ಕಾರಣವೋ ಗೊತ್ತಿಲ್ಲ, ವರ್ಗಾವಣೆಯಾಗುವ ಸಮಯದಲ್ಲಿ ಇಷ್ಟು ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ನಾನು ವಹಿಸಿ ಕೊಟ್ಟಿದ್ದೇನೆ, ಅದರ ಸರ್ವೆ ಮಾಡಿದ ನಂತರ ಇದರ ನಿರ್ಧಾರ ತೆಗೆದುಕೊಳ್ಳುವುದು. ಸರ್ವೆ ಮಾಡಿದ ನಂತರ ಎನ್ನುವುದಾದರೆ, ಇಷ್ಟು ಎಕರೆ ಭೂಮಿ ಎಂದು ನಿಗದಿಪಡಿಸುವ ಅವಶ್ಯಕತೆ ಆತನಿಗೆ ಇರಲಿಲ್ಲ, ಅದು ಆಗಿರತಕ್ಕಂಥ ಕಾರಣವೇ ಇವೆಲ್ಲಾ ಗೊಂದಲಕ್ಕೆ ಕಾರಣವಾಗಿದೆ. ಇದು ಒಂದೇ ಕಾರಣ ಎಂದಲ್ಲ, ಇಂಥ ಅನೇಕ ಕಾರಣಗಳು ಗೊಂದಲವನ್ನು ಸೃಷ್ಟಿ ಮಾಡಿವೆ. ಅದನ್ನು ಪರಿಹಾರ ಮಾಡುವುದರಲ್ಲಿ ಸರ್ಕಾರ ಬಹಳ ಭದ್ರವಾಗಿದೆ ಮತ್ತು ಬದ್ಧವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ಮಾತನಾಡುವಂಥ ಕಾಲದಲ್ಲಿ ಚಿಕ್ಕಮಗಳೂರು ಜಿಲ್ಲೆ ಅಥವಾ ಬೇರೆ ಯಾವುದೇ ಒಂದು ಜಿಲ್ಲೆ ಎಂದು ಹೇಳದೇ, 1980ರವರೆಗೆ ಈ ರೀತಿ ಅನ್ ಅಥಾರೈಸ್ಡ್ ಕಲ್ಟಿವೇಷನ್ ಏನು ಮಾಡುತ್ತಿದ್ದಾರೆ, ಕೆಲವು ಜಮೀನು ಕಳೆದುಕೊಂಡವರಿಗೆ ಬೇರೆ ಕಡೆ ಜಮೀನು ಕೊಡುವಂಥ ಪ್ರಯತ್ನ ಮಾಡಿದ್ದೇವೆ, ನೀರಾವರಿ ಯೋಜನೆಗಳಿಗೆ ಅವರು ಜಮೀನು ಬಿಟ್ಟಿದ್ದಾರೆ, ಪ್ರಾಜೆಕ್ಟ್‌ನಲ್ಲಿ ಬಂದಿದೆ, ಆ ರೀತಿ

ಶಿವಮೊಗ್ಗ ಜಿಲ್ಲೆಯೂ ಇದೆ ಹಾಗೂ ಬೇರೆ ಬೇರೆ ಜಿಲ್ಲೆಗಳು ಇವೆ. ಆದುದರಿಂದ ಈ ಒಂದು ಅನುಕೂಲ ಮಾಡಿಕೊಡಬೇಕು ಎನ್ನುವ ನಿರ್ಧಾರವನ್ನು ಅದು ಉತ್ತರ ಕನ್ನಡ ಜಿಲ್ಲೆ ಇರಲಿ, ಶಿವಮೊಗ್ಗ ಜಿಲ್ಲೆ ಇರಲಿ, ಯಾರು ಈ ರೀತಿ ತಮ್ಮ ಸರ್ವಸ್ವವನ್ನು ಕಳೆದುಕೊಂಡು ಎರಡು ಹೊತ್ತಿನ ಗಂಜಿಗೆ ಏನು ಮೊದಲಿನಿಂದ ಜಮೀನು ಮಾಡಿಕೊಂಡಿದ್ದಾರೆ ಅವರಿಗೆ ಅನುಕೂಲ ಮಾಡಿಕೊಡುವಂಥದ್ದು ಆಗಬೇಕು. ರೆವಿನ್ಯೂ ಸಚಿವರು ಆಗಿರುವ ತಮಗೆ ತಮ್ಮ ಅನುಭವದಲ್ಲಿ ಇದೆಲ್ಲಾ ಗೊತ್ತಿದೆ. ಸಿ ಅಂಡ್ ಡಿ ಲ್ಯಾಂಡ್ ಸಂದರ್ಭದಲ್ಲಿ ಈ ಚರ್ಚೆ ವ್ಯಾಪಕವಾಗಿ ದಿವಸಗಟ್ಟಲೆ ಆಯಿತು. ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಲಕ್ಷಾಂತರ ಎಕರೆ ಜಮೀನನ್ನು ನಾವು ಅರಣ್ಯ ಇಲಾಖೆಗೆ ಕೊಟ್ಟಿದ್ದೇವೆ. ಆದರೆ ಅಧಿಕಾರಿಗಳ ಒಂದು ತಪ್ಪಿನಿಂದ ಸುಪ್ರೀಂಕೋರ್ಟು ನಮಗೆ ಬರೆ ಎಳೆಯುವಂಥಾಯಿತು. ಈ ಒಂದು ಅನುಕೂಲತೆಗಳನ್ನು ಅದು ಶಿವಮೊಗ್ಗ ಇರಲಿ ಅಥವಾ ಉತ್ತರ ಕನ್ನಡ ಜಿಲ್ಲೆ ಇರಲಿ ಎಲ್ಲಾ ಜಿಲ್ಲೆಗಳಿಗೂ ಇದು ಅನ್ವಯವಾಗಬೇಕು, ಆ ಬಗ್ಗೆ ತಾವು ಒಂದು ಮಾತು ಹೇಳದೇ ಇದ್ದರೆ ನಾಳೆ ಅದು ಪತ್ರಿಕೆಗಳಲ್ಲಿ ಬಂದಾಗ ವ್ಯತ್ಯಾಸವಾಗಬಾರದು ಎನ್ನುವ ದೃಷ್ಟಿಯಿಂದ ನಾನು ಈ ಮಾತು ಹೇಳಬೇಕಾಯಿತು.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು ಮಾಡಿದಂಥ ಹೋರಾಟ, ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡಿರುವಂಥದ್ದು, ಮಾನ್ಯ ಚಂದ್ರೇಗೌಡರವರು ಮಾತನಾಡಿರುವಂಥದ್ದು, ಹಿಂದಿನ ಸರ್ಕಾರದಲ್ಲಿ ಮಾತನಾಡಿರುವಂಥದ್ದು ಎಲ್ಲಾ ಗಮನದಲ್ಲಿದೆ, ತಾವು ಹೇಳಿದಂತೆ, ಚಿಕ್ಕಮಗಳೂರು ಒಂದು ಉದಾಹರಣೆಯಾಗಿ ಕೊಟ್ಟೇ ವಿನಹ ಈ ರೀತಿ ಆಗಿರತಕ್ಕಂಥ ಎಲ್ಲಾ ಪ್ರದೇಶಗಳಲ್ಲಿ ನಾವು ಮಾಡಬೇಕಾಗುತ್ತದೆ, ಈ ಅಧಿವೇಶನ ಮುಗಿದ ತಕ್ಷಣವೇ ಪ್ರತಿ ಜಿಲ್ಲೆಗೂ ಹೋಗಿ ತಮ್ಮೆಲ್ಲರನ್ನು ಕರೆಸಿ ಇದರ ಬಗ್ಗೆ ಚರ್ಚೆ ಮಾಡತಕ್ಕಂಥ ಕೆಲಸವನ್ನು ಮಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ತಾವು ಈಗ ಒಂದು ಸಮಿತಿಯನ್ನು ಮಾಡುವುದಕ್ಕೆ ಹೊರಟಿದ್ದೀರಿ, ಅದು ಯಾವುದು ಎಂದರೆ . .

ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು) : ಮಾನ್ಯ ಅಧ್ಯಕ್ಷರೆ, ಈ ನಕ್ಸಲೈಟ್ ವಿಚಾರವಾಗಿ ಹೇಳುವುದಾದರೆ, ಇದು ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ಭಾಗದಲ್ಲಿ ಹಬ್ಬುತ್ತಿದೆ. ಈ ನಕ್ಸಲೈಟ್ಸ್‌ರವರು ಯಾರ‍್ಯಾರು ಅಲ್ಲಿರುವ ಮನೆಗಳಿಗೆ ಬಂದು ಊಟ ಮಾಡಿದ್ದಾರೆ ಅವರ ಭಾವನೆಯನ್ನು ಜಿಲ್ಲಾಧಿಕಾರಿಯ ಎದುರಿನಲ್ಲಿ ಅವರು ವ್ಯಕ್ತಪಡಿಸಿದ್ದಾರೆ. ಒಂದು ಮಾತು ಏನೆಂದರೆ, ಅವರು ಕೇಳುವುದು ಏನೆಂದರೆ, ಅವರ ಒತ್ತುವರಿ ಜಮೀನನ್ನು ಖಾಲಿ ಮಾಡಿಸದೆ ಹಾಗೆ ನಾವು ಅವರಿಗೆ ರಕ್ಷಣೆ ಕೊಡುತ್ತೇವೆ ಎನ್ನುವ ಆಸೆ ತೋರಿಸಿದ್ದಾರೆ, ಎರಡನೆಯದಾಗಿ ಕಾಡು ಉತ್ಪತ್ತಿ ಏನು ಇದೆ ಅದನ್ನು ನೀವೇ ತೆಗೆಯಬೇಕು ಎನ್ನುವ ಪ್ರಚೋದನೆ ಕೊಡತಕ್ಕಂತಹ ರೀತಿಯಲ್ಲಿ ರಕ್ಷಣೆ ಕೊಡುವ ಕೆಲಸ ಅವರು ಮಾಡಿದ್ದಾರೆ. ನಾವು ಕೇಳಿದಾಗ ನೇರವಾಗಿ ಅವರೊಟ್ಟಿಗೆ ಶಾಮೀಲಾಗಿರುವ ಜನ ಏನು ಹೇಳುತ್ತಾರೆಂದರೆ, ನಿಮ್ಮಿಂದ ಆಗದಿರುವ ಕೆಲಸವನ್ನು ನಕ್ಸಲೈಟ್ಸ್ ಬಂದ ಮೇಲೆ ನಮಗೆ ರಕ್ಷಣೆ ಸಿಗುತ್ತದೆ, ಕಾಡು ಉತ್ಪತ್ತಿ ತೆಗೆಯುವುದಕ್ಕೆ ನಮಗೆ ಅವಕಾಶವಾಗಿದೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದರು. ಅವರಿಗೆ ಏನಾಗಿದೆ, ಅವರ ಮೂಲಭೂತ ಸೌಕರ್ಯ ಏನು ಅರಣ್ಯ ಒತ್ತುವರಿ ಜಾಗದಲ್ಲಿ ಕುಳಿತುಕೊಂಡಿರುವುದರಿಂದ ಅವರಿಗೆ ವಿದ್ಯುದ್ದೀಕರಣ ಮಾಡಲಿಕ್ಕೆ ಆಗಲಿಲ್ಲ, ಅವರಿಗೂ ಇನ್ನೂ ಕರೆಂಟ್ ಸಿಗಲಿಲ್ಲ. ಮತ್ತೆ ಅವರಿಗೆ ಇನ್ನುವರೆಗೂ ರೇಷನ್ ಕಾರ್ಡ್ ಸಿಕ್ಕಿಲ್ಲ. ಇವತ್ತಿನವರೆಗೂ ಅವರಿಗೆ ಯಾವುದೇ ನ್ಯಾಯವನ್ನು ಒದಗಿಸಿಕೊಡುವುದಕ್ಕೆ ಆಗಿಲ್ಲ.

ಸುಪ್ರೀಂಕೋರ್ಟ್‌ನ ತೀರ್ಮಾನದ ಪ್ರಕಾರ ಅಕ್ರಮ ಸಕ್ರಮದ ಅಡಿಯಲ್ಲಿ ಇದನ್ನು ಸಕ್ರಮೀಕರಣ ಮಾಡುವುದಕ್ಕೆ ಆಗುವುದಿಲ್ಲವೆಂದು ಒಂದು ಕಡೆ ಅವರು ಹೇಳುತ್ತಾರೆ. ಇವತ್ತಿನ ದಿವಸ ಮಲೆನಾಡು, ಪಶ್ಚಿಮಘಟ್ಟ ಪ್ರದೇಶಗಳಲ್ಲಿರುವ ಎಷ್ಟೋ ಹಳ್ಳಿಗಳಿಗೆ ಇದುವರೆಗೆ ವಿದ್ಯುತ್ ಕನೆಕ್ಷನ್ ಮತ್ತು ದೂರವಾಣಿ ಕನೆಕ್ಷನ್ ಕೊಡುವುದಕ್ಕೆ ಆಗಿಲ್ಲ. ಈ ರೀತಿಯಾದ ಒಂದು ಪ್ರಚೋದನಕಾರಿ ವಿಚಾರಗಳನ್ನು ಹೇಳಿ ಪ್ರತಿ ರಾತ್ರಿ ಅಲ್ಲಿರುವ ಮನೆಗಳಲ್ಲಿ ಅಡುಗೆ ಮಾಡಿ ಊಟ ಮಾಡಿಕೊಂಡು ಹೋಗತಕ್ಕಂಥ ವ್ಯವಸ್ಥೆ ಆ ಪ್ರದೇಶದಲ್ಲಿ ಆಗುತ್ತಿದೆ. ಇಂಥ ಒಂದು ವ್ಯವಸ್ಥೆ ಅಲ್ಲಿ ಆಗುತ್ತಿರುವ ಸಂದರ್ಭದಲ್ಲಿ ಅಲ್ಲಿನ ಜಿಲ್ಲಾಧಿಕಾರಿಗಳು ನೇರವಾಗಿ ಆ ಪ್ರದೇಶದಲ್ಲಿರುವ ಜನರ ಪುನಃಪರಿವರ್ತನೆ ಮಾಡುವುದಕ್ಕೆ ಕಾನೂನಿನ ಅಡಿಯಲ್ಲಿ ಏನು ಪ್ರಯತ್ನ ಮಾಡುವುದಕ್ಕೆ ಆಗುತ್ತದೆ ಎಂಬುದರ ಬಗ್ಗೆ ಜನರ ಜೊತೆಯಲ್ಲಿ ನೇರವಾಗಿ ಚರ್ಚೆ ಮಾಡಿದಾಗ ಬಹುಶಃ ನಮ್ಮ ಮೇಲೆ ಮತ್ತು ಸರ್ಕಾರದ ಮೇಲೆ ಜನರಲ್ಲಿ ನಂಬಿಕೆ ಬರತಕ್ಕಂಥ ಕೆಲಸ ಇವತ್ತಿನ ದಿವಸ ನಾವು ಮಾಡದಿದ್ದರೆ ಅಲ್ಲಿನ ಜನರು ನೇರವಾಗಿ ನಕ್ಸಲೈಟ್‌ರವರ ಜೊತೆ ಕೈ ಜೋಡಿಸತಕ್ಕಂಥ ವ್ಯವಸ್ಥೆ ಅಲ್ಲಿದೆ. ನನ್ನ ತಾಲ್ಲೂಕಿನಲ್ಲಿ ನಾನು ಈಗಾಗಲೇ ಮೂರು ಬಾರಿ ಅಲ್ಲಿನ ಜನರ ಹತ್ತಿರ ನೇರವಾಗಿ ಸಭೆ ನಡೆಸಿದ್ದೇನೆ. ಈ ಒಂದು ವ್ಯವಸ್ಥೆ ಸರಿಯಾಗಬೇಕಾದರೆ ಸರ್ಕಾರ ಅಲ್ಲಿ ಹೆಚ್ಚು ಸ್ಪಂದಿಸಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಇವತ್ತಿನ ದಿವಸ ನಕ್ಸಲೈಟ್‌ಗಳು ಅಲ್ಲಿಗೆ ಬಂದು ಇನ್ನೊಂದು ಆಶ್ವಾಸನೆ ಕೊಡುತ್ತಿದ್ದಾರೆ ಇದರ ಬಗ್ಗೆ ನಾವು ಮುಂಚಿತವಾಗಿ ಸ್ಪಂದಿಸದಿದ್ದರೆ ಅಲ್ಲಿರತಕ್ಕಂಥ ಜನರು ಮತ್ತು ಅದರಲ್ಲಿಯೂ ಕೂಡ ಯುವಕರು ಅವರ ಜೊತೆ ಕೈ ಜೋಡಿಸುವಂಥ ಒಂದು ವ್ಯವಸ್ಥೆ ಅಲ್ಲಿಯಾಗುತ್ತಿದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರದ ನಿಲುವೇನು ಎಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, 1978ರ ಪೂರ್ವದ ಬಗ್ಗೆ ಮಾನ್ಯ ಎಂ.ಪಿ.ಪ್ರಕಾಶ್‌ರವರು ಇಲ್ಲಿ ಹೇಳಿದರು. ಲ್ಯಾಂಡ್ ರೀಫಾರ್ಮ್ ಆಕ್ಟ್ ಜಾರಿಗೆ ಬಂದು ಮೇಲೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಅನೇಕ ಜನರನ್ನು ಎಲ್ಲಿ ಒಕ್ಕಲೆಬ್ಬಿಸಿದ್ದರೋ ಅವರೇ ಅಲ್ಲಿ ಅಂದರೆ ಅದೇ ಸ್ಥಳದಲ್ಲಿ ಕುಳಿತುಕೊಂಡಿರತಕ್ಕಂಥವರಾಗಿದ್ದಾರೆ. ಇವರೆಲ್ಲರೂ 1978ರ ಪೂರ್ವದಲ್ಲಿಯೇ ಅಲ್ಲಿ ಕುಳಿತುಕೊಂಡಿದ್ದಾರೆ. ಆದರೆ, ಇದರ ಬಗ್ಗೆ ಹೆಚ್ಚಿನವರಿಗೆ ಗೊತ್ತಿಲ್ಲ. ಮತ್ತೆ ಇದರ ಬಗ್ಗೆ ದಾಖಲೆಗಳನ್ನು ಮಾಡಿಕೊಳ್ಳಬೇಕೆಂಬುದೂ ಕೂಡ ಗೊತ್ತಿಲ್ಲ. ಇದಕ್ಕೊಂದು ಸಮಿತಿ ಮಾಡಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ನಾನು ಹೇಳುವುದೇನೆಂದರೆ, ಅವರು ಅಲ್ಲಿ ಎಷ್ಟು ವರ್ಷಗಳಿಂದ ಮನೆ ಕಟ್ಟಿಕೊಂಡು ಇದ್ದಾರೆಂಬುದು ನಿಮಗೆ ಗೊತ್ತಾಗುತ್ತದೆ. ಹಾಗೆಯೇ ಅಲ್ಲಿರುವ ಮರ ಎಷ್ಟು ದೊಡ್ಡದಾಗಿ ಬೆಳೆದಿದೆ ಎಂಬುದು ಮತ್ತು ಅದರ ವಯಸ್ಸು ಎಷ್ಟೆಂಬುದು ತೋಟಗಾರಿಕೆ ಅಥವಾ ಕೃಷಿ ಇಲಾಖೆಯವರಿಗೆ ಗೊತ್ತಾಗುತ್ತದೆ. ಆದ್ದರಿಂದ, ಇದಕ್ಕೆ ಸಂಬಂಧಪಟ್ಟಂಥ ದಾಖಲೆಗಳನ್ನು ಇವರಿಗೆ ಕೊಡಿ ಎಂದು ಹೇಳಿದ್ದೇವೆ. ಈ ದಾಖಲೆಗಳನ್ನು ಬೇರೆಯವರಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಎಷ್ಟು ವರ್ಷಗಳಿಂದ ಅಲ್ಲಿದ್ದಾರೆ ಎಂಬುದನ್ನು ದಾಖಲೆ ನೋಡಿದರೆ ಗೊತ್ತಾಗುತ್ತದೆ. ಇವತ್ತಿನ ದಿವಸ ಪರಿಹಾರ ಕೊಡುವುದಕ್ಕೆ ಇಲಾಖೆಯವರು ಯಾವ ರೀತಿಯಲ್ಲಿ ಕ್ರಮ ಕೈಗೊಳ್ಳುತ್ತಾರೆಯೋ ಅದೇ ರೀತಿಯಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ಅವರಿಗೆ ಪ್ರತ್ಯೇಕವಾಗಿ ಇದರ ಬಗ್ಗೆ ಮಾಹಿತಿ ಕೊಡಬೇಕಾಗುತ್ತದೆ. ನಾನೂ ಕೂಡ ಆ ಸಮಿತಿಯಲ್ಲಿ ಕುಳಿತು ಕೆಲಸ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಇವತ್ತಿನ ದಿವಸ ಎನ್‌ಕೌಂಟರ್ ಮತ್ತು ಫೇರ್

ಎನ್‌ಕೌಂಟರ್ ಬಗ್ಗೆ ಒಂದು ನಿರ್ಣಾಯಕವಾದ ತೀರ್ಮಾನಕ್ಕೆ ಬರಬೇಕಾಗುತ್ತದೆ. ಒಂದು ವೇಳೆ ಫೇರ್ ಎನ್‌ಕೌಂಟರ್ ಆಗಿದ್ದರೆ, ಇದು ಏಕೆ ಆಯಿತು ಮತ್ತು ಹೇಗಾಯಿತು ಎಂಬುದರ ಬಗ್ಗೆ ಗೊತ್ತಾಗಬೇಕಾಗುತ್ತದೆ. ವೀರಪ್ಪನ್‌ನನ್ನು ಹಿಡಿದುಕೊಂಡು ಬರಬೇಕಾಗಿತ್ತೆಂದು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು. ಆದರೆ, ಇದನ್ನು ನಾನು ಒಪ್ಪುವುದಿಲ್ಲ. ಹಿಡಿದುಕೊಂಡು ಬರಬೇಕೆಂದು ಹೇಳುವವರೇ ಅಲ್ಲಿಗೆ ಹೋಗಬೇಕಾಗಿತ್ತು. ಒಂದು ವೇಳೆ ಆತನನ್ನು ಹಿಡಿದುಕೊಂಡು ಬಂದಿದ್ದರೆ ಆತನ ಕಡೆಯವರು ಮತ್ತೆ ನಾಲ್ಕು ಜನರನ್ನು ಕಿಡ್ನಾಪ್ ಮಾಡಿಕೊಂಡು ಹೋಗಿ ಈತನನ್ನು ಬಿಡಿ ಎನ್ನತಕ್ಕಂಥ ಕೆಲಸ ಆಗುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ...

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನೀವು ಹೇಳಿದ್ದೀರೆಂದು ನಾನು ಹೇಳಲಿಲ್ಲ. ನೀವು ಗ್ರಾನೈಟ್ ಬಗ್ಗೆ ಹೇಳಿರತಕ್ಕಂಥದ್ದು ನನಗೆ ಗೊತ್ತಿದೆ. ನೀವು ಹೇಳಿರತಕ್ಕಂಥದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅದರ ಬಗ್ಗೆ ನಾನು ಎಕ್ಸ್‌ಪ್ಲೈನ್ ಮಾಡುತ್ತೇನೆ. ವೀರಪ್ಪನ್ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಚರ್ಚೆ ಪ್ರಾರಂಭ ಮಾಡಿದರು ಎಂದು ಹೇಳುತ್ತಾ ನನ್ನ ಮಾತನ್ನು ಮುಂದುವರಿಸುತ್ತಿದ್ದೆ. ಆದ್ದರಿಂದ, ನಿಮ್ಮ ಬಗ್ಗೆ ನಾನು ಹೇಳಲಿಲ್ಲ. ಅವನನ್ನು ಹಿಡಿದುಕೊಂಡು ಬನ್ನಿ ಎಂದು ಅನೇಕ ಮಂದಿ ಹೇಳಿದ್ದಾರೆ. ಆದ್ದರಿಂದ ಈ ರೀತಿ ಹೇಳಿದರು ಆತನನ್ನು ಹಿಡಿದುಕೊಂಡು ಬರುವುದಕ್ಕೆ ಹೋಗಬೇಕಾಗಿತ್ತು. ಮನೆಯಲ್ಲಿ ಕುಳಿತುಕೊಂಡು ಹಿಡಿದುಕೊಂಡು ಬನ್ನಿ ಎಂದು ಹೇಳತಕ್ಕಂಥದು ಸಮಂಜಸವಲ್ಲ. ಅನೇಕ ಮಂದಿ ಭಯೋತ್ಪಾದಕರನ್ನು ಹಿಡಿದುಕೊಂಡು ಬಂದಾಗ ಆಗಿರತಕ್ಕಂಥ ಬೆಳವಣಿಗೆಗಳನ್ನು ನಾವು ನೋಡಿದ್ದೇವೆ. ಅಂದರೆ, ಹಿಡಿದಿರತಕ್ಕಂಥ ಭಯೋತ್ಪಾದಕರನ್ನು ವಿಮಾನದ ಮೂಲಕ ಕಾಂದಾರ್‌ರವರಿಗೆ ಬಿಟ್ಟು ಬರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದ್ದರಿಂದ ಅವರೆಲ್ಲರೂ ಹೇಳಿದಂಥದನ್ನು ನಾವು ಕೇಳುತ್ತಾ ಹೋದರೆ ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲ ಎಂಬುದು ನಮಗೆ ಗೊತ್ತಿದೆ. ಆದರೆ, ಅವರು ಯಾವ ಕಾರಣಕ್ಕಾಗಿ ಪ್ರಾರಂಭ ಮಾಡಿದರು ಎಂಬುದು ಮತ್ತು ವಿಚಾರವಾದಿಗಳು ಇದರ ಬಗ್ಗೆ ಚಿಂತನೆ ಮಾಡತಕ್ಕಂಥದ್ದು ನೋಡಿದರೆ ಇದರ ಬಗ್ಗೆ ನನಗೆ ಟೋಟಲಿ ಕನ್‌ಫ್ಯೂಸ್ ಆಗಿದೆ. ಆದ್ದರಿಂದ ಇದರ ಬಗ್ಗೆ ಚರ್ಚೆಯಾಗದಿದ್ದರೆ ಏನಾಗುತ್ತದೆ ಎಂದರೆ, ಯಾರು ವಿಚಾರವಾದಿಗಳು, ಯಾರು ನಕ್ಸಲೈಟ್ಸ್ ಎಂಬುದರ ಬಗ್ಗೆ ಸಂಪೂರ್ಣವಾದ ವಿವರ ಬೇಕಾಗುತ್ತದೆ. ಇಲ್ಲದಿದ್ದರೆ ಯಾರನ್ನೋ ನಕ್ಸಲೈಟ್ಸ್ ಎಂದು ಹೇಳತಕ್ಕಂಥದು ತಪ್ಪಾಗುತ್ತದೆ. ಹಿಂದೆ ನಾನು ಮಾತನಾಡುವಂಥ ಸಂದರ್ಭದಲ್ಲಿ ಪೊಲೀಸ್ ಮತ್ತು ಅರಣ್ಯ ಇಲಾಖೆ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೆ.

ಅಧ್ಯಕ್ಷರು : ತಾವು ಬೇಗ ಮುಗಿಸಬೇಕು. ಏಕೆಂದರೆ, ಇನ್ನು ಮಾತನಾಡುವವರು ಬಹಳ ಜನ ಇದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇರತಕ್ಕಂಥ ಸಮಸ್ಯೆಯನ್ನು ಕಂಡು ಹಿಡಿದರೆ ಮಾತ್ರ ಇದಕ್ಕೆ ಪರಿಹಾರ ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಇವತ್ತಿನ ದಿವಸ ಅರಣ್ಯ ಇಲಾಖೆಯಲ್ಲಿ ಯಾರಿಗೆ ಇನ್‌ಫ್ಲುಯೆನ್ಸ್ ಇದೆಯೋ ಅವರು ಶಾಶ್ವತವಾಗಿ ಕೆಲವು ಕಡೆ ಕುಳಿತುಕೊಂಡು ಬಿಡುತ್ತಾರೆ. ಅವರ ಜಾತಿ ಧರ್ಮ ಮತ್ತು ಅವರ ಹತ್ತಿರ ಹಣವಿದ್ದರೆ ಮತ್ತು ಬೇರೆ ಬೇರೆ ಆಧಾರದ ಮೇಲೆ ಕೆಲವರು ಶಾಶ್ವತವಾಗಿ ಒಂದೇ ಜಾಗದಲ್ಲಿ ಕುಳಿತುಕೊಂಡು ಬಿಡುತ್ತಾರೆ. ಆದ್ದರಿಂದ, ಇದು ಬದಲಾಗಬೇಕು. ಇವತ್ತಿನ ದಿವಸ ಇದರಿಂದ ಏನಾಗಿದೆ ಎಂದರೆ, ಅಧಿಕಾರಿಗಳಿಗೆ ಸರ್ಕಾರದ

ಮೇಲೆ ನಂಬಿಕೆ ಇಲ್ಲ. ಏಕೆಂದರೆ ಅವರು ಎಷ್ಟು ಕೆಲಸ ಮಾಡಿದರು ಕೂಡ ಅವರನ್ನು ತೆಗೆದು ಸಿ.ಓ.ಡಿ. ಅಥವಾ ಇಂಟಲಿಜೆನ್ಸಿಗೆ ವರ್ಗಾವಣೆ ಮಾಡುವುದರಿಂದ ಅವರಿಗೆ ಕೆಲಸ ಮಾಡುವುದಕ್ಕೆ ಆಸಕ್ತಿ ಇಲ್ಲದಂತಾಗಿದೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಒಬ್ಬ ಅಧಿಕಾರಿ ಇಲಾಖೆಯ ಎಲ್ಲಾ ಅಂಗಗಳಲ್ಲಿ ಕೆಲಸ ಮಾಡದಿದ್ದರೆ ಅವರಿಗೆ ಪ್ರಮೋಷನ್ ಕೊಡುವುದಿಲ್ಲವೆಂಬ ನಿಯಮ ಮಾಡಿ. ಇವತ್ತಿನ ದಿವಸ ಇವರಲ್ಲಿಯೂ ಕೂಡ ಲ್ಯಾಂಡ್ ಮಾಫಿಯಾಗಳ ಜೊತೆ ಅನೇಕ ಜನರು ಸೇರಿಕೊಂಡಿದ್ದಾರೆ. ಮತ್ತೆ ಜನಪ್ರತಿನಿಧಿಗಳ ಜೊತೆ ಸೇರಿಕೊಂಡಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ಕಾನೂನು ಸುವ್ಯವಸ್ಥೆ ಹದಗೆಡುವುದಕ್ಕೆ ಮುಖ್ಯವಾದ ಕಾರಣಗಳು ಯಾವುದೆಂದರೆ, ಮಟ್ಕಾ ಮತ್ತು ಲ್ಯಾಂಡ್ ಮಾಫಿಯ ಹಾಗೂ ಲಿಕ್ಕರ್ಸ್‌ನವರು Illgotten wealth is the main cause for all these problems. ಇದರಲ್ಲಿ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳೂ ಕೂಡ ಸೇರಿಕೊಂಡಿದ್ದಾರೆ. ಆದ್ದರಿಂದ, ಎಲ್ಲರ ಮೇಲೆ ಆಪಾದನೆ ಹೊರಿಸತಕ್ಕಂಥದ್ದು ತಪ್ಪಾಗುತ್ತದೆ. It is a joint stock company. ಇದಕ್ಕೆ ಎಲ್ಲರೂ ಭಾಗಿದಾರರಾಗಿದ್ದಾರೆ. ಇವತ್ತಿನ ದಿವಸ ಏನಾಗಿದೆ ಎಂದರೆ ಬೆಂಗಳೂರು ನಗರದಲ್ಲಿ ಯಾರಾದರೊಬ್ಬರಿಗೆ ಒಳ್ಳೆಯ ಜಾಗದಲ್ಲಿ ಬಿ.ಡಿ.ಎ.ಯಿಂದ ಸೈಟ್ ಅಲಾಟ್‌ಮೆಂಟ್ ಆಗಿದ್ದರೂ ಕೂಡ ಆ ಜಾಗದಲ್ಲಿ ಬೇರೆಯವರು ಬಂದು ಸೇರಿಕೊಳ್ಳುವುದಕ್ಕೆ ಅನೇಕ ಮಂದಿ ಸಹಾಯ ಮಾಡುತ್ತಾರೆ. ಬಿಡಿಎಯಿಂದ ಅಲಾಟ್‌ಮೆಂಟ್ ಪತ್ರ ಇದ್ದರೂ ಕೂಡ ಆ ಜಾಗದಲ್ಲಿ ಕುಳಿತುಕೊಂಡಿರುವವನ ವಿರುದ್ಧ ಕೋರ್ಟ್‌ನಿಂದ ಇನ್‌ಜಂಕ್ಷನ್ ಆರ್ಡರ್ ತಂದರೂ ಕೂಡ ಇದಕ್ಕೆ ಅಧಿಕಾರಿಗಳು ಬೆಂಬಲವನ್ನು ಕೊಡುವುದಿಲ್ಲ. ಏಕೆಂದರೆ, ಹಿಂದೆ ಒಬ್ಬ ಪ್ರತಿನಿಧಿ ಇರುತ್ತಾನೆ. ಕೇಳುವುದಕ್ಕೆ ಹೋದರೆ ಇದರ ಹಿಂದೆ ಪವರ್ ಫುಲ್ ಪೊಲಿಟಿಶಿಯನ್ ಇದ್ದಾರೆಂದು ಹೇಳುತ್ತಾರೆ. ಇವತ್ತಿನ ದಿವಸ ನ್ಯಾಯಾಧೀಶರೂ ಕೂಡ ಅವರ ಹತ್ತಿರ ಹೋಗಿ ಸಹಕಾರ ಕೇಳುವಂಥ ಪರಿಸ್ಥಿತಿ ಬಂದಿದೆ ಎಂದು ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಹೇಳುತ್ತಿದ್ದಾರೆ. ಮೊನ್ನೆ ದಿವಸ ನ್ಯಾಯಾಧೀಶರ ಮುಂದೆ ಒಂದು ಮಾತನ್ನು ಹೇಳಿದೆ. ಅದೇನೆಂದರೆ, Law is not justice and trial is not the scientific enquiry into the truth. A trail is the resolution of the dispute. ಲಾಯರ್‌ಗಳು ವಾದ ಮಾಡಿ ಸುಳ್ಳು ಸಾಕ್ಷಿಯನ್ನು ಕೊಡುವುದರಿಂದ ಆತನಿಗೆ ಕನ್‌ವಿಕ್ಷನ್ ಆಗುತ್ತದೆ. ಇವತ್ತಿನ ದಿವಸ ಎಷ್ಟು ಜನ ನಿಜವಾದ ಹಾರ್ಡ್‌ಕೋರ್ ಕ್ರಿಮಿನಲ್‌ಗಳಿಗೆ ಕನ್‌ವಿಕ್ಷನ್ ಆಗಿದೆ? ಗಂಧವನ್ನು ಕಳ್ಳತನ ಮಾಡುವವನ ವಿರುದ್ಧ ಮತ್ತು ರೆಗ್ಯುಲರ್ ಹಾರ್ಡ್‌ಕೋರ್ ಕ್ರಿಮಿನಲ್‌ಗಳ ವಿರುದ್ಧ ಸಾಕ್ಷಿ ಹೇಳುವುದಕ್ಕೆ ಇವತ್ತಿನ ದಿವಸ ಯಾರೂ ತಯಾರಿಲ್ಲ. ಒಂದು ವೇಳೆ ಸಾಕ್ಷಿ ಹೇಳಿದರೆ ಆತ ಮನೆಗೆ ವಾಪಸ್ಸು ಹೋಗುವುದಿಲ್ಲ. ಇದು ಇವತ್ತಿನದಿವಸ ಇರತಕ್ಕಂಥ ಪರಿಸ್ಥಿತಿಯಾಗಿದೆ.

ಅಧ್ಯಕ್ಷರು : ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ತಾವು ಬೇಗ ಮುಗಿಸಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇವತ್ತಿನ ದಿವಸ ಅನೇಕ ಮಂದಿಗೆ ಅಕ್ವಿಟಲ್ ಆಗಿದೆ. ಮತ್ತೆ ಸುಳ್ಳು ಸಾಕ್ಷಿ ಹೇಳಿಸಿ ಅನೇಕ ಮಂದಿಗೆ ಕನ್‌ವಿಕ್ಷನ್ ಕೂಡ ಆಗಿದೆ. ಎಷ್ಟೋ ಸಾರಿ ಅರೆಸ್ಟ್ ಮಾಡಿದ ಮೇಲೆ I have built the case ಎಂದು ಒಬ್ಬ ಪೊಲೀಸ್ ಅಧಿಕಾರಿ ನನ್ನ ಹತ್ತಿರ ಹೇಳಿದರು. ಕಾರಣ ಏನೆಂದರೆ, ಯಾರೋಬ್ಬರ ಒತ್ತಡಕ್ಕೆ ಅರೆಸ್ಟ್ ಮಾಡುತ್ತೇನೆ . . .

ಶ್ರೀ ಜೆ.ಸಿ.ಮಾಧುಸ್ವಾಮಿ : ಆಲ್ ಪೋಸ್ಟ್ ಆಲ್ ಕೇಸಸ್‌ನಲ್ಲಿ ಅಂದರೆ, ಪ್ರೊಟೆಸ್ಟ್, ಸ್ಟ್ರೈಕ್ ಮಾಡಿದಂಥವರನ್ನು ಅರೆಸ್ಟ್ ಮಾಡಿದ ಮೇಲೆಯೇ ಕೇಸ್ ಹಾಕುವುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರ ಹಿನ್ನೆಲೆಯನ್ನು ನೋಡುವುದಿಲ್ಲ. ಒಬ್ಬ ಅಧಿಕಾರಿಯನ್ನು ಬೇರೆ ಕಡೆಗೆ ಪೋಸ್ಟಿಂಗ್ ಮಾಡುವಾಗ ಆತನ ಜಾತಿ ಮತ್ತು ಹಣದ ಶಕ್ತಿ ನೋಡುವುದನ್ನು ಬಿಟ್ಟು ಆತನ ಸರ್ವಿಸ್ ರೆಕಾರ್ಡ್ಸ್ ನೋಡಿ ಪೋಸ್ಟಿಂಗ್ ಮಾಡಿ. ಒಂದು ವೇಳೆ ಇಂಥವರನ್ನು ಪೋಸ್ಟಿಂಗ್ ಮಾಡಿ ಎಂದು ನಾನು ಪತ್ರ ಕೊಟ್ಟರೂ ಆತನ ಹಿನ್ನೆಲೆಯನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುನೋಡಿ ತೀರ್ಮಾನ ತೆಗೆದುಕೊಳ್ಳಲಿ. ಇಂಥವನು ಬೇಡ ಎಂದು ಹೇಳುವುದಕ್ಕೆ I have the right. ಹಾಗೆಯೇ, ನನಗೆ ಇಂಥವನು ಬೇಕು ಎಂಬ ಹಕ್ಕನ್ನೂ ಕೂಡ ಕೊಡಬೇಡಿ. ನನ್ನ ಕ್ಷೇತ್ರದಲ್ಲಿ ಎಲ್ಲರನ್ನೂ ವರ್ಗಾವಣೆ ಮಾಡಿಸಿದಾಗ ನಾನು ಪುನಃ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವಂಥ ಪರಿಸ್ಥಿತಿ ಬೇಡ. ಅಂದರೆ, ಈ ಒಂದು ವಿಷಯಕ್ಕೆ ನಾನು ಬೇರೆಯವರ ಹಿಂದೆ ಹೋಗುವಂಥ ಪರಿಸ್ಥಿತಿ ಬೇಡ. ಆದರೆ, ಇವತ್ತಿನ ದಿವಸ ಏನಾಗಿದೆ ಎಂದರೆ ಒಬ್ಬ ಅಧಿಕಾರಿ ವರ್ಗಾವಣೆ ಮಾಡಿಸಿಕೊಳ್ಳುವುದಕ್ಕೆ ಮತ್ತು ವರ್ಗಾವಣೆಯನ್ನು ತಡೆ ಹಿಡಿಯುವ ಅಧಿಕಾರಿಗಳ ಗುಂಪು ಬೆಂಗಳೂರಿನಲ್ಲಿಯೇ ಕುಳಿತುಕೊಂಡಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಯವರಿಗೂ ಮತ್ತು ನಮಗೂ ಒಂದು ದೊಡ್ಡ ಸಮಸ್ಯೆ ಆಗಿರತಕ್ಕಂಥದ್ದು ಈ ವರ್ಗಾವಣೆ ವ್ಯವಹಾರ. 10 ಬಾರಿ ನಾನು ವೈಯಕ್ತಿಕವಾಗಿ ನಿಮ್ಮನ್ನು ಬಂದು ಭೇಟಿ ಮಾಡಿದ್ದೇನೆ. ನಾವೇನು ಜಿಲ್ಲಾ ಮಟ್ಟದ ಟಾಪ್ ಅಧಿಕಾರಿಗಳಾದ ಐ.ಪಿ.ಎಸ್. ಮತ್ತು ಐ.ಎ.ಎಸ್. ಅಧಿಕಾರಿಗಳ ಬಗ್ಗೆ ಮಾತನಾಡುತ್ತಿಲ್ಲ. ಆಯಾಯ ಕ್ಷೇತ್ರದ ಶಾಸಕರು ಹೇಳಿದಂತ ವರ್ಗಾವಣೆಗಳು ಅಂದರೆ, ಬಿ.ಡಿ.ಓ. ಅಥವಾ ಎ.ಇ.ಓ. ಅಥವಾ ಸಣ್ಣ ಸಣ್ಣ ಹುದ್ದೆಗಳಲ್ಲಿರತಕ್ಕಂಥವರ ಬಗ್ಗೆ ಸುಮಾರು 10–10 ಬಾರಿ ನಿಮ್ಮ ಹತ್ತಿರ ನಮ್ಮ ಶಾಸಕರು ಬಂದು ವಿನಂತಿ ಮಾಡಿದ ಮೇಲೆ ಅವರನ್ನು ಕರೆದು ತಾವು ಮಾತನಾಡಿದ ಮೇಲೂ ಕೂಡ ವರ್ಗಾವಣೆ ಆಗಿಲ್ಲ. ಅಂದರೆ ಇಲ್ಲಿ ನಿಮ್ಮ ಮಾಜಿ ಮತ್ತು ಹಾಲಿ ಸಚಿವರುಗಳು ಹಠವಿರಬಹುದು. ಶೃಂಗೇರಿ, ಮಂಗಳೂರು, ಉಡುಪಿ ಮತ್ತು ಚಿಕ್ಕಮಗಳೂರು, ಸೌತ್ ಕೆನರಾ ಹಾಗೂ ಕಾರ್ಕಳ ಭಾಗದ ಶಾಸಕರಿಗೆ ಈ ರೀತಿಯಾದ ಒಂದು ಪರಿಸ್ಥಿತಿಯಾಗಿದೆ. ವರ್ಗಾವಣೆ ಬಗ್ಗೆ ತಾವು ಒಂದು ತೀರ್ಮಾನ ತೆಗೆದುಕೊಳ್ಳಿ. ಆಗ ನಾವೂ ಕೂಡ ತಮ್ಮ ಹತ್ತಿರ ಬಂದು ಕಾಡಿಸುವುದಿಲ್ಲ. ಇವತ್ತು ಸಾಯಂಕಾಲ 6–00 ಗಂಟೆಗೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ತಮ್ಮನ್ನು ಭೇಟಿ ಮಾಡುತ್ತೇವೆ. ವರ್ಗಾವಣೆ ವಿಷಯಕ್ಕೆ ಸಂಬಂಧಪಟ್ಟಂತೆ ಏಕೆ ಈ ರೀತಿಯಾದ ಹ್ಯುಮಿಲಿಯೇಷನ್? ಆತ ಅಲ್ಲಿಗೆ ವರ್ಗಾವಣೆಯಾಗಿ ಇನ್ನು ಒಂದೆರಡು ತಿಂಗಳು ಆಗಿರುವುದಿಲ್ಲ. ಆದರೆ, ಮಾಜಿ ಸಚಿವರು ಅಥವಾ ಜಿಲ್ಲಾ ಉಸ್ತುವಾರಿ ಸಚಿವರು ಅಥವಾ ಇನ್ಯಾರೋ ಬಲವಂತ ಮಾಡಿದ್ದಾರೆಂದು ದಿನನಿತ್ಯ ಬದಲಾವಣೆ ಮಾಡಿ ಕಾಡಿಸುವುದಾದರೆ ಅಲ್ಲಿರತಕ್ಕಂಥ ಚುನಾಯಿತ ಶಾಸಕರು ಗೌರವದಿಂದ ಕೆಲಸ ಮಾಡುವುದು ಬೇಡವೆ? ಬೇಕಾದರೆ ನಿಮ್ಮ ವರ್ಗಾವಣೆ ನೀತಿಯನ್ನು ಬದಲಾವಣೆ ಮಾಡಿ. ಮತ್ತೆ ಇದಕ್ಕೆ ಯಾವುದೇ ಶಾಸಕರು ಇಂಟರ್‌ಫಿಯರ್ ಆಗಬಾರದು. ಮತ್ತೆ ಆತ ಮೂರ್‍ನಾಲ್ಕು ವರ್ಷ ಕೆಲಸ ಮಾಡಿರುವಂಥದನ್ನು ನೋಡಬೇಕು ಮತ್ತು ಆತ ತಪ್ಪು

ಮಾಡಿದ್ದಲ್ಲಿ ಆತನ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂಬ ನಿರ್ಧಾರ ತೆಗೆದುಕೊಳ್ಳಿ. ಇದನ್ನು ನಾವೂ ಕೂಡ ಸ್ವಾಗತ ಮಾಡುತ್ತೇವೆ. ಇವತ್ತಿನ ದಿವಸ ನಾವು 79 ಜನ ಶಾಸಕರು ಅನುಭವಿಸಿರತಕ್ಕಂಥದ್ದು ಆ ದೇವರಿಗೆ ಗೊತ್ತಿದೆ. ಮತ್ತೆ ಇದನ್ನು ಆ ದೇವರೇ ಕಾಪಾಡಬೇಕು. ಅಲ್ಲಿ ಹೇಳುತ್ತಾರೆ, ಏನು ಮಾಡಿದರು ನಿಮ್ಮ ಶಾಸಕರು, ನೋಡಿ ನಾವು ದುಡ್ಡು ಕೊಟ್ಟು ಮಾಡಿಸಿಕೊಂಡು ಬಂದಿದ್ದೇವೆ, ಈ ರೀತಿ ಮಾತನಾಡುತ್ತಾರೆ, ನಮ್ಮ ಡೆಪ್ಯುಟಿ ಲೀಡರ್ ಕೂಡ ಅದನ್ನೇ ಹೇಳುತ್ತಿದ್ದಾರೆ. ನಿಮಗೆ ನಾವು ಅನೇಕ ಸಲ ಹೇಳಿದ್ದೇವೆ. ಏನಾದರೂ ಇದಕ್ಕೊಂದು ಕ್ರಮ ನೀವು ತೆಗೆದುಕೊಳ್ಳದಿದ್ದರೆ, ನೀವು ಅವರಿಗೆ ಹೇಳಿ, ಮಾಜಿ ಸಚಿವರಿಗೆ ನೀವು ಇನ್ನೊಂದು ಸಲ ಗೆದ್ದು ಬನ್ನಿ ನೀನು ಹೇಳಿದ್ದೇ ಮಾಡುತ್ತೇನೆಂದು ಹೇಳಿ. ಈಗ ಜನ ನಿಮ್ಮನ್ನು ಮನೆಗೆ ಕಳುಹಿಸಿದ್ದಾರೆ. ಅಲ್ಲಿ ಇರುವವರು ಏನೋ ಮಾಡಿಕೊಳ್ಳುತ್ತಾರೆ ಎಂದು ಧೈರ್ಯವಾಗಿ ನೀವು ಹೇಳದಿದ್ದರೆ ಖಂಡಿತವಾಗಿ ಯಾರಿಗೂ ಇದರ ಬಗ್ಗೆ ಗೌರವ ಬರುವುದಿಲ್ಲ. ಈ ಹ್ಯುಮಿಲಿಯೇಶನ್‌ನ್ನು ಶಾಸಕರು ಅನುಭವಿಸುವುದಕ್ಕಾಗುವುದಿಲ್ಲ. ಬಹಳ ದೊಡ್ಡವರು, ಮಾಜಿ ಸಚಿವರಾಗಿದ್ದವರು, ಮಾಜಿ ಮುಖ್ಯಮಂತ್ರಿಗಳಾಗಿದ್ದವರು ಅವರು ದೊಡ್ಡ ದೊಡ್ಡ ಸ್ಥಾನದಲ್ಲಿ ಇದ್ದವರು ಅವರು. ಅವರ ಕಾಟವನ್ನು ಹೊಸದಾಗಿ ಆಯ್ಕೆಯಾಗಿ ಬಂದಿರುವ ಶಾಸಕರನ್ನು ಆ ದೇವರೇ ಕಾಪಾಡಬೇಕು. ಈ ಶಾಸಕರು ತಲೆ ತಗ್ಗಿಸಿ ಓಡಾಡುವಂಥ ಒಂದು ದಯನೀಯ ಸ್ಥಿತಿ, ಅಧಿಕಾರದ ದರ್ಪ, ಹೇ ನೋಡು ಮಾಡಿಸಿಕೊಂಡು ಬಂದಿದ್ದೇನೆ, ಅಲ್ಲಿರುವ ಅಧಿಕಾರಿಗಳು ಚೆನ್ನಾಗಿದ್ದಾರೆ ಅವರನ್ನು ಮುಂದುವರೆಸಿ, ಅದಕ್ಕೂ ಅವಕಾಶವಿಲ್ಲ, ಇದನ್ನು ಪ್ಲೀಸ್ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಸ್ಯಾಂಡಲ್‌ವುಡ್ಸ್ ಸ್ಮಗ್ಲಿಂಗ್ ನಮ್ಮಲ್ಲಿ ಜಾಸ್ತಿಯಾಗುತ್ತಿದೆ. ಮೊನ್ನೆ ದಿವಸ ಒಬ್ಬ ಕಾನ್‌ಸ್ಟೇಬಲ್ ಸ್ಯಾಂಡಲ್‌ವುಡ್ಸ್ ತೆಗೆದುಕೊಂಡು ರಿಕ್ಷಾದಲ್ಲಿ ಹೋಗುವಾಗ ಅಧಿಕಾರಿಗಳು ಹಿಡಿದಿದ್ದಾರೆ. ಎರಡು ದಿವಸದ ಕೆಳಗೆ ಪ್ರೆಸ್ ಎಂದು ಬೋರ್ಡ್ ಹಾಕಿಕೊಂಡು, ಪ್ರೆಸ್ ಎನ್ನುವುದರ ಬಗ್ಗೆ ಅಥವಾ ಯಾವುದು ಎನ್ನುವುದರ ಬಗ್ಗೆ ಇನ್ನೂ ತನಿಖೆಯಾಗಬೇಕು. ಪ್ರೆಸ್ ಎಂದು ವಾಹನದ ಮೇಲೆ ಬೋರ್ಡ್ ಹಾಕಿಕೊಂಡು ಹೋಗುವವರನ್ನು ಹಿಡಿದಿದ್ದಾರೆ, ಅಂತಹ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸುವಂಥದ್ದು, ಯಾರು ಕೇಸ್ ಹಿಡಿಯುತ್ತಾರೆ, ಅವರಿಗೆ ವರ್ಗಾವಣೆ ಯಾರು ಇಂತಹ ಕೆಲಸದಲ್ಲಿ ಅವರೊಂದಿಗೆ ಸೇರಿಕೊಳ್ಳುತ್ತಾರೆ ಅಂಥವರಿಗೆ ವರ್ಗಾವಣೆ ಇಲ್ಲ. ಇಂತಹ ಪರಿಸ್ಥಿತಿ ಬರಬಾರದು. ಇಲಾಖೆಯ ಮೊರೆಲ್ ಹಾಳಾಗುತ್ತಿದೆ. It is going to dogs. ಅದನ್ನು ಸರಿಪಡಿಸಬೇಕು. ಅವರಿಗೆ ಎಲ್ಲಿಯವರೆಗೆ ಧೈರ್ಯ ಬರುವುದಿಲ್ಲ, ನೀವು ಯಾವ ಸರ್ಕಾರ ಹೇಳಿದರೂ ಕೂಡ ಅವರು ಕೇಳುವುದಿಲ್ಲ. ವೆಂಕಟಮ್ಮನಹಳ್ಳಿ ಬಗ್ಗೆ ಹೇಳಿದರು ನಮ್ಮ ಮನೆಯವರು ವಾಪಸ್ಸು ಬರುತ್ತಾರೆನ್ನುವ ಬಗ್ಗೆ ಅವರ ಮನೆಯವರಿಗೆ ಧೈರ್ಯ ಬೇಕು. ಎಲ್ಲವನ್ನೂ ಮಾಡಲಿಕ್ಕಾಗುವುದಿಲ್ಲ, ಹೇಗೆ ಗೊತ್ತಾಗುವುದು. ಅಟ್ಮಾಸ್ಫಿಯರ್ ಕ್ರಿಯೇಟ್ ಆಗಬೇಕು, We should create an atmosphere, ಆಫೀಸರ್ ವರ್ಕ್ ಮಾಡಬೇಕಾಗುತ್ತದೆ. ಜನರಿಗೂ ಧೈರ್ಯ ಬರಬೇಕಾಗುತ್ತದೆ. ಎಲ್ಲರನ್ನೂ ಅವರಿಗೆ ಹಿಡಿಯುವುದಕ್ಕಾಗುವುದಿಲ್ಲ, ರಿಯಲ್ ಎಸ್ಟೇಟ್ ಏಜೆಂಟರ್‌ಗಳನ್ನು ಕಿಡ್ನಾಪ್ ಮಾಡುತ್ತಾರೆ, ಮಗುವನ್ನು ಕಿಡ್ನಾಪ್ ಮಾಡಿ ಕೊಲ್ಲುವಂಥದ್ದು, ಇವೆಲ್ಲಾ ಅಟ್ಮಾಸ್ಫಿಯರ್ ಹಾಳಾಗಿರುವುದರಿಂದ ಆಗುತ್ತವೆ, ಅದನ್ನು ಬಿಟ್ಟರೆ, ಇದೆಲ್ಲವನ್ನೂ ಸರಿಪಡಿಸುವುದಕ್ಕಾಗುತ್ತದೆ. ಆದರೆ

ದೊಡ್ಡ ದೊಡ್ಡವರನ್ನು ಹಿಡಿದರೆ, ಹೊಡೆದರೆ ಕೊಲೆ ಮಾಡಿದರೆ ಇಮ್ಮೀಡಿಯೇಟ್ ಆಗಿ ಎರಡು ದಿವಸದಲ್ಲಿ ಹಿಡಿಯುತ್ತಾರೆ. ನಾನು ನಿಮಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ, ನನ್ನ ಪರಿಸ್ಥಿತಿಯ ಬಗ್ಗೆ, ನನ್ನ ವೈಯಕ್ತಿಕ ಆಕ್ಸಿಡೆಂಟ್ ಆದ ಕೇಸ್ ಅದು, ಕೇಸ್ ರಿಜಿಸ್ಟರ್ ಆಯಿತೋ ಇಲ್ಲವೋ ಗೊತ್ತಿಲ್ಲ 3–4 ವರ್ಷ ಆಯಿತು ಮೊಬೈಲ್ ಕಳ್ಳತನವಾಯಿತು, Rampant in the city. ಅದರ ಬಗ್ಗೆ ಪೊಲೀಸ್ ಸ್ಟೇಶನ್‌ಗೆ ಕಂಪ್ಲೇಂಟ್ ಕೊಡುವುದಕ್ಕೆ ಹೋದರೆ, ಏಕೆ ಈ ಕಂಪ್ಲೇಂಟ್ ಕೊಡುವುದಕ್ಕೆ ಬರುತ್ತೀರಿ ಎಂದು ಹೇಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಬೇರೆ ಯಾರೂ ಅಲ್ಲ, ಕಂಪ್ಲೇಂಟ್ ಕೊಟ್ಟು ಬಾ ಎಂದು ನನ್ನ ಮಗಳನ್ನೇ ಕೊಟ್ಟು ಕಳುಹಿಸಿದ್ದೆ, ಅವರು ಎಂ.ಎಲ್.ಎ. ಅವರಿಂದ ಏಕೆ ಫೋನ್ ಮಾಡಿಸಿದಿರಿ ಎಂದು ಕೇಳಿದರಂತೆ, ಅದಕ್ಕೆ ನಮ್ಮ ಅಪ್ಪನವರು ಎಂದು ಅವಳು ಹೇಳಿದ್ದಾಳೆ. This is the position, ಯಾವ ನಮ್ಮ ಸೆಲ್‌ಫೋನ್ ಕಳೆದು ಹೋಗಿತ್ತು. ಅವನು ಒಂದು ತಿಂಗಳವರೆಗೆ ಬೇರೆ ಫೋನ್‌ಗೆ ಟೆಲಿಫೋನ್ ಮಾಡಿದ್ದಾನೆ. ಸೇಮ್ ನಂಬರದಿಂದ, ಅದನ್ನು ಹಚ್‌ದಿಂದ ತೆಗೆದುಕೊಂಡು ಪೊಲೀಸ್ ಸ್ಟೇಶನ್‌ಗೆ ಕೊಟ್ಟರೂ ಸಹ ಇವತ್ತಿನವರೆಗೆ ಅವರಿಂದ ಅವನನ್ನು ಹಿಡಿದುಕೊಡಲಿಕ್ಕೆ ಆಗಲಿಲ್ಲ. ಅವನಿಗೆ ಫೋನ್ ಬಂದಿದ್ದು ಅಲ್ಲ, ಅದೇ ಫೋನ್‌ದಿಂದ ಅವರು ಯಾರಿಗೆ ಫೋನ್ ಮಾಡಿದ್ದರು ಅದನ್ನು ಇವರಿಂದ ಹಿಡಿಯಲಿಕ್ಕೆ ಸಾಧ್ಯವಾಗಲಿಲ್ಲ. ಇದು ಇರುವಂಥ ಪರಿಸ್ಥಿತಿ. ಏನ್ ಮೇಡಂ, ಇದೊಂದು ಸೆಲ್ ಫೋನ್‌ಗಾಗಿ ಇಷ್ಟೊಂದು ಕಷ್ಟಪಡುತ್ತಿದ್ದೀರಿ ಅನ್ನತಕ್ಕ ಪರಿಸ್ಥಿತಿ ಆ ಪೊಲೀಸ್ ಸ್ಟೇಶನ್‌ದಲ್ಲಿ. ನನಗೆ ಗೊತ್ತಿರುವಂತೆ ನಾನು ಶಾಸಕನಾಗುವುದಕ್ಕಿಂತ ಮುಂಚೆ ಬಿಪಿನ್ ಗೋಪಾಲಕೃಷ್ಣ ಎ.ಎಸ್.ಪಿ. ಆಗಿ ಅವರು ಉಡುಪಿಯಲ್ಲಿ ಇದ್ದರು, ನಮಗೆ ಆಗ ಈ ಇಲಾಖೆಯ ಬಗ್ಗೆ ಸ್ವಲ್ಪ ಹೆದರಿಕೆ ಇತ್ತು, ಈಗ ಯಾರಿಗೂ ಯಾವ ಇಲಾಖೆಯ ಬಗ್ಗೆ ಹೆದರಿಕೆ ಇಲ್ಲ. ಆಗ ಮಟ್ಕಾ ಇರಲಿಲ್ಲ, ಇವತ್ತು ದೊಡ್ಡ ದೊಡ್ಡ ಲೀಡರ್ಸ್‌ಗಳು, ಯಾರು ಈ ಹೋರಾಟವನ್ನು ಮಾಡುತ್ತಾರೆ, ಅವರಿಗೆ ಈ ರಿಯಲ್ ಎಸ್ಟೇಟ್ ಏಜೆಂಟ್ಸ್ ಕಾಣುವುದಿಲ್ಲವೆ? ಮಟ್ಕಾದವರು ಕಾಣುವುದಿಲ್ಲವೆ? ಇಲ್ಲಿ ಸಿಟ್ ಲಿಕ್ಕರ್‌ರವರು ಕಾಣುವುದಿಲ್ಲವೆ? ಬರೀ ರೈತರು ಭೂಮಿ ಜಾಸ್ತಿ ಇದ್ದವರು ಮಾತ್ರ ಕಾಣುವುದೆ? ಎಲ್ಲವನ್ನೂ ಕಾಣಬೇಕಾಗುತ್ತದೆ. ಎಲ್ಲದರ ಮೇಲೆ ಹೋರಾಟವನ್ನು ಮಾಡಬೇಕಾಗುತ್ತದೆ, ಆ ಹೋರಾಟ ಏಕೆ ಮಾಡುವುದಕ್ಕಾಗುತ್ತಿಲ್ಲವೆಂದರೆ ದೊಡ್ಡ ದೊಡ್ಡ ಖುರ್ಚಿಯ ಮೇಲೆ ಕುಳಿತವರೆಲ್ಲರೂ ಇದಕ್ಕೆ ಬೆಂಬಲವನ್ನು ಕೊಡುತ್ತಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿಯೇ ಕುಳಿತಿದ್ದಾರೆ, ಅವರು ಕಿಸ್ತನ್ನು ಎಷ್ಟು ಕಟ್ಟುತ್ತಾರೆ, ಅವರಿಗೆ ಡೈರೆಕ್ಟಾಗಿ ಸ್ಯಾಚೆಟ್ಸ್ ಮಾಡುವುದಕ್ಕೆ ಕೊಟ್ಟಿರುವುದರಿಂದ ಅವರು ಕಿಸ್ತನ್ನು ಎಷ್ಟು ಕಟ್ಟುತ್ತಾರೆ, ಅವರು ಸರ್ಕಾರದಿಂದ ಎಷ್ಟು ಲಿಕ್ಕರ್‌ನ್ನು ಡ್ರಾ ಮಾಡಿದ್ದಾರೆನ್ನುವುದು ಗೊತ್ತಾದರೆ, ಖಂಡಿತವಾಗಿ ಇವರೆಲ್ಲರೂ ಇನ್‌ವಾಲ್ವ್ಡ್. ಮೇಲಿಂದ ಕೆಳಗೆ, ಎಲ್ಲಾ ದೊಡ್ಡ ದೊಡ್ಡ ಗುತ್ತಿಗೆದಾರರು, ಮತ್ತು ರಿಯಲ್ ಎಸ್ಟೇಟ್ ಏಜೆನ್ಸಿಯವರು ಇನ್‌ವಾಲ್ವ್ಡ್. ಮಟ್ಕಾ ಮತ್ತು ಪ್ರೈವೇಟ್ ಫೈನಾನ್ಸಿಯವರು ಇನ್‌ವಾಲ್ವ್ಡ್. ಈಗ ಹೆಚ್ಚು ಕೊಲೆಗಳು ಆಗುತ್ತಿರುವಂಥದ್ದು ಇದರಲ್ಲಿಯೆ? ಪ್ರೈವೇಟ್ ಫೈನಾನ್ಸ್‌ನವರು ಕೊಡುವ ಹಣಕ್ಕೆ ಯಾವ ಆಧಾರವಿಲ್ಲ. ಕೇಳಿದಾಗ, ವಾಪಸ್ಸು ಹಣವನ್ನು ಕಟ್ಟಲಿಕ್ಕೆ ಆಗದವರು ಅವರನ್ನು ಕೊಲೆ ಮಾಡುವುದು, ಒಂದು ವೇಳೆ ಹಣ ಕೊಡದಿದ್ದರೂ ಅವರು ಕೊಲೆ ಆಗುವುದು. ಅಥವಾ ಅವರ ಮಕ್ಕಳನ್ನು ತೆಗೆದುಕೊಂಡು ಹೋಗಿ ಕೊಲೆ ಮಾಡುವುದು ಮತ್ತು ಇನ್ನೊಸೆಂಟ್ಸ್ ಇದ್ದವರನ್ನು ಕೊಲೆ ಮಾಡುವುದು. ಇದು ಎಲ್ಲಾ ಎಲ್ಲಿ ಹೋಗಿ ನಿಲ್ಲುತ್ತದೆ

ಎನ್ನುವುದು ಗೊತ್ತಾಗುವುದಿಲ್ಲ. ಈ ಒಂದು ಅಟ್ಮಾಸ್ಪಿಯರ್‌ನ್ನು ಕ್ರಿಯೇಟ್ ಮಾಡಬೇಕಾದರೆ ಮೇಲಿಂದ ಕೆಳಗಡೆಯವರಿಗೆ ಸ್ಟಾಫ್ ಸರಿಯಾಗಿರಬೇಕು. ವ್ಯವಸ್ಥೆ ಸರಿಯಾದರೆ ನಾನು ಹೇಳಿದ ಹಾಗೆ ಸರ್ಕಾರ ಮತ್ತು ಮೇಲಾಧಿಕಾರಿಗಳು, ಕೆಳಗಡೆ ಸ್ವಲ್ಪ ಅಡ್ಮಿನಿಸ್ಟ್ರೇಶನ್‌ನ್ನು ಟೈಟ್ ಮಾಡಬೇಕಾಗುತ್ತದೆ. ದಯವಿಟ್ಟು ನೀವು ನಾನು ಕೇಳಿರುವ ವರ್ಗಾವಣೆ, ನೀವು ಬೇರೆಯವರ ಮಾತನ್ನು ಕೇಳಿ ವರ್ಗಾವಣೆ ಮಾಡಿದಾಗ ನಾನು ನಿಮ್ಮ ಹತ್ತಿರ ಬರುತ್ತೇನೆ. ನಾನು ಬೇರೆ ಯಾವ ವರ್ಗಾವಣೆಗೂ ನಿಮ್ಮ ಹತ್ತಿರ ಬರುವುದಿಲ್ಲ. ಟೀಚರ್ಸ್ ಬಗ್ಗೆ ಕೆಲವೊಂದು ಅಲ್ಲಿ ಇಲ್ಲಿ ಕೇಳಿದ್ದೇನೆ ಅದನ್ನು ಬಿಟ್ಟರೆ ಯಾವ ವರ್ಗಾವಣೆಗೂ ನಿಮ್ಮ ಹತ್ತಿರ ಬರುವುದಿಲ್ಲ. ಇದನ್ನು Let us not take it as an agency. ಟ್ರಾನ್ಸ್‌ಫರ್ ಮಾಡುವಂಥದ್ದು. ನಾನು ಮಾನ್ಯ ವಾಟಾಳ್‌ರವರು ಎಂದು ಹೆಸರು ಹೇಳಿರುವುದಿಲ್ಲ. ನಾನು ಇನ್ನೊಬ್ಬರ ಮೇಲೆ ಆಪಾದನೆ ಮಾಡುವುದಿಲ್ಲ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡಿದಾಗಲೂ ಅದನ್ನೇ ಹೇಳಿದರು. ಪ್ರತಿಪಕ್ಷದವರು ಹಾಗೂ ಆಡಳಿತ ಪಕ್ಷದವರೆಲ್ಲರೂ ಸೇರಿ, ಏನಾದರೊಂದು ನೀತಿ ಸಂಹಿತೆಯನ್ನು ರೂಪಿಸಿಬಿಟ್ಟರೆ ಬಹುಶಃ ಈ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಇಂಪ್ರೂವ್ ಆಗಬಹುದು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾಡಬಹುದು.

ಅಧ್ಯಕ್ಷರು : ಎಲ್ಲರೂ ಸೇರಿ ಒಂದು ನೀತಿ ಸಂಹಿತೆಯನ್ನು ರೂಪಿಸಿ ಮಾಡಬಹುದು. ಬಹಳಷ್ಟು ಮಟ್ಟಿಗೆ ಸುಧಾರಣೆಯಾಗುತ್ತದೆ. ಮಟ್ಕಾ ಆಗಬಹುದು, ಇನ್ನೊಂದು ಆಗಬಹುದು, ಅವೆಲ್ಲಾ ನಿಲ್ಲುತ್ತವೆ. ಏಕೆ ಮಾಡಬಾರದು? ನಾನು ಏನು ಹೇಳುತ್ತೇನೆಂದರೆ, ಎಲ್ಲಾ ಪ್ರತಿಪಕ್ಷದ ನಾಯಕರುಗಳು ಎಲ್ಲರೂ ಇಲ್ಲಿ ಮಾತನಾಡಿದ್ದೀರಿ, ಆದರೆ ಎಲ್ಲರೂ ಕುಳಿತುಕೊಂಡು ದೀರ್ಘವಾಗಿ ಇದರ ಬಗ್ಗೆ ಚರ್ಚೆ ಮಾಡಿ ಒಂದು ನೀತಿ ಸಂಹಿತೆಯನ್ನು ರೂಪಿಸಿಕೊಂಡು ಅದರ ಪ್ರಕಾರ ಅವರವರ ಪಕ್ಷದ ಎಲ್ಲಾ ಸದಸ್ಯರಿಗೂ ಹೇಳಿ, ಅದನ್ನು ಮಾಡುವುದು ಒಳ್ಳೆಯದು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ಪೋಲೀಸ್ ಸ್ಟೇಶನ್‌ದವರಿಗೆ ಎಲ್ಲಿ ಮಟ್ಕಾ ಮಾಡುತ್ತಿದ್ದಾರೆಂದು ಗೊತ್ತಿದೆ. ಎಲ್ಲಿ ಇಲ್ಲಿ ಸಿಟ್‌ಲಿಕ್ಕರ್ ತಯಾರಾಗುತ್ತಿದೆ ಎಂದು ಪ್ರತಿ ಎಕ್ಸೈಸ್ ಆಫೀಸರ್‌ಗೂ ಗೊತ್ತಿದೆ. ಎಲ್ಲಿಗೆ ಹೋಗುತ್ತಿದೆ, ಅದನ್ನು ಹಿಡಿದುಕೊಡಿ ಅಂದರೆ ನಾನು ಅದನ್ನು ಮಾಡುವುದಕ್ಕೂ ತಯಾರಾಗಿದ್ದೇನೆ. ಒಂದು ವೇಳೆ ಆ ಅಧಿಕಾರಿಗಳಿಗೆ ಗೊತ್ತಾಗದಿದ್ದರೆ, ಇದನ್ನೇನೂ ಜೇಬಿನಲ್ಲಿ ಇಟ್ಟುಕೊಂಡು ಹೋಗುತ್ತಿಲ್ಲ, ಪೇಪರ್‌ನಲ್ಲಿ ಪಾಸ್ ಮಾಡುತ್ತಿಲ್ಲ. ಪ್ರತಿಯೊಬ್ಬರಿಗೂ ಗೊತ್ತಿದೆ. ನಮ್ಮಲ್ಲೆಲ್ಲಾ ಮೊಬೈಲ್ ಇಲ್ಲಿ ಸಿಟ್‌ಲಿಕ್ಕರ್ ತಯಾರು ಮಾಡುವಂಥ ಮ್ಯಾನುಫ್ಯಾಕ್ಚರ್ ಮಾಡುವಂಥ ಯೂನಿಟ್ಸ್ ಇವೆ. ಕಾರ್‌ನಲ್ಲಿ ಮೆಷನ್‌ನ್ನು ತೆಗೆದುಕೊಂಡು ಹೋಗುತ್ತಾರೆ, ಕಾರ್‌ನಲ್ಲಿ ತೆಗೆದುಕೊಂಡು ಹೋಗಿ ಸ್ಪಾಟ್‌ನಲ್ಲಿ ತಯಾರು ಮಾಡಿ ಕೊಟ್ಟು ಬರುವಂಥ ಪರಿಸ್ಥಿತಿ ಇದೆ. ಮಟ್ಕಾವನ್ನು ಇವತ್ತು ಪ್ರತಿಯೊಂದು ಗಲ್ಲಿಗಲ್ಲಿಯಲ್ಲಿ ಮಾಡುತ್ತಾರೆ. ಏಕೆ ಹಿಡಿಯುತ್ತಿಲ್ಲ ಎನ್ನುವಂಥದ್ದನ್ನು ಮೇಲಾಧಿಕಾರಿಗಳು ಕೆಳಗಿನ ಅಧಿಕಾರಿಗಳನ್ನು ಕೇಳಬೇಕು. ಕೆಳಗಿನ ಅಧಿಕಾರಿಗಳ ಮೇಲೆ ಸಿವಿಯರ್ ಆಕ್ಷನ್ ತೆಗೆದುಕೊಳ್ಳ ಬೇಕಾಗುತ್ತದೆ. ಇದನ್ನು ಮಾಡದಿದ್ದರೆ, ಹೊಸ ಹೊಸ ಕಾನೂನಿಗಳಿಗಿಂತ ಇರುವ ಇಂತಹ ಕಾನೂನುಗಳನ್ನೇ ಜಾರಿಗೆ ತರುವಂಥದ್ದು ಬಹಳ ಮುಖ್ಯವೆಂಬುದು ನನ್ನ ಅಭಿಪ್ರಾಯ, ಹೊಸ ಕಾನೂನನ್ನು ಮಾಡಿದಾಗ ಜಾಸ್ತಿ ಕನ್‌ಫ್ಯೂಸನ್

ಆಗುತ್ತವೆ. ಇದ್ದ ಕಾನೂನನ್ನು ಜಾರಿಗೆ ತನ್ನಿ, ಅಷ್ಟೆ ಸಾಕಾಗುತ್ತದೆಂದು ಹೇಳುತ್ತಾ, ಇನ್ನೊಂದು ವಿಷಯವೆಂದರೆ, ಪಾಪದವನು ಪೊಲೀಸ್ ಸ್ಟೇಶನ್‌ಗೆ ಹೋಗಿ ನಿಂತುಕೊಂಡು ಕಂಪ್ಲೇಂಟ್ ಹೇಳುವಂಥ ಒಂದು ಪರಿಸ್ಥಿತಿ, ಕ್ರಿಮಿನಲ್ ಹೋಗಿ ಅಲ್ಲಿ ಕುಳಿತುಕೊಳ್ಳುತ್ತಾನೆ, ಏಕೆಂದರೆ ಅವನ ಹತ್ತಿರ ದುಡ್ಡು ಇದೆ, ಬಟ್ಟೆ ಗಲೀಜು ಇದ್ದವನಿಗೆ ಯಾರಾದರೂ ಹೊಡೆದರೂ ಅವನು ಹೋಗಿ ಕಂಪ್ಲೇಂಟ್ ಕೊಡುವಂಥ ಪರಿಸ್ಥಿತಿ ಇವತ್ತು ಇಲ್ಲ. ಏಕೆಂದರೆ ಅವನು ಕೇಸ್ ತೆಗೆದುಕೊಳ್ಳುವುದಿಲ್ಲ. ಒಂದು ಕೇಸನ್ನು ಕೊಟ್ಟರೆ ಮಾರನೆಯ ದಿವಸ ಪುನಃ ಇವನನ್ನೇ ಕರೆಸುತ್ತಾರೆ, ಏಕೆಂದರೆ ಇನ್ನೊಂದು ಕೌಂಟರ್ ಕೇಸನ್ನು ತೆಗೆದುಕೊಂಡಿರುತ್ತಾರೆ, ಇದನ್ನು ವಾಪಸ್ಸು ತೆಗೆಯಿಸಬೇಕು. ಏಕೆಂದರೆ ಕೌಂಟರ್ ಕೇಸ್ ತೆಗೆದುಕೊಂಡಿರುವುದರಿಂದ ಬೇರೆ ದಾರಿ ಇಲ್ಲದೆ ವಾಪಸ್ಸು ತೆಗೆಯಿಸಬೇಕು. ಇದು ಪರಿಸ್ಥಿತಿ ಇದೆ. ಇದನ್ನು ಹೇಗೆ ಸರಿಪಡಿಸಬೇಕು ಎನ್ನುವುದರ ಬಗ್ಗೆ ಆಲೋಚನೆ ಮಾಡ ಬೇಕಾಗುತ್ತದೆ. ಇದನ್ನು ಚರ್ಚೆ ಮಾಡಬೇಕಾಗಿಲ್ಲ, ಇದಕ್ಕೆ ಹೊಸ ಕಾನೂನು ಏನೂ ಬೇಕಾಗಿಲ್ಲ. ಪ್ರತಿ ಸ್ಟೇಶನ್‌ದಲ್ಲಿ ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ಪ್ರತಿಯೊಬ್ಬರಿಗೂ ಗೊತ್ತಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಏನು ಇರುತ್ತಾರೆ, ಅವನಿಗೆ ಇದರ ಬಗ್ಗೆ ಮಾಹಿತಿ ಇಲ್ಲದಿದ್ದರೆ He is unfit to hold that post. Remove him from there. ಮೊನ್ನೆ ದಿವಸ ಬೆಂಗಳೂರಿಗೆ ಜಾರ್ಖಂಡದಿಂದ ತಂದ ವೆಪನ್ಸ್‌ನ್ನು ಒಂದೇ ದಿವಸದಲ್ಲಿ ಹಿಡಿಯುವುದಕ್ಕೆ ಸಾಧ್ಯವಾದರೆ, ಅಲ್ಲಿ ದಿನನಿತ್ಯ ನಡೆಯುತ್ತದೆ. ಇನ್ನೊಂದು ವಿಷಯ ಥೆಫ್ಟ್ ಕೇಸ್‌ಗಳನ್ನು ರಿಜಿಸ್ಟರ್ ಮಾಡುವುದಿಲ್ಲ. ಏಕೆ ಮಾಡುವುದಿಲ್ಲವೆಂದರೆ ಅವರ ಪ್ರಾಪರ್ಟಿ ರಿಕವರಿ ತೋರಿಸಬೇಕಾಗುತ್ತದೆ. ಪ್ರಾಪರ್ಟಿ ರಿಕವರಿ ತೋರಿಸುವುದ ಕ್ಕಾಗುವುದಿಲ್ಲವೆಂದು, ಅಲ್ಲಿ ಎಷ್ಟು ಕೇಸ್‌ಗಳು ಪೆಂಡಿಂಗ್ ಇವೆ ಎಂದು ಗೊತ್ತಾಗುತ್ತದೆಂದು ಅವರ ಮೇಲೆ ರಿಫ್ಲೆಕ್ಟ್ ಆಗಿ, it reflects on the Station House Officer. ಅದಕ್ಕೋಸ್ಕರವಾಗಿ ಕೇಸನ್ನು ರಿಜಿಸ್ಟರ್ ಮಾಡುವುದಿಲ್ಲ. ನಮ್ಮಲ್ಲಿರುವ ಅನೇಕ ಉದಾಹರಣೆಗಳನ್ನು ನಾನು ಕೊಡುತ್ತೇನೆ, ಅನೇಕ ಮನೆಗಳನ್ನು ಬೀಗ ಒಡೆದಿರುವ ಬಗ್ಗೆ ಕೇಸ್ ರಿಜಿಸ್ಟರ್ ಮಾಡಿರುವುದಿಲ್ಲ. ಇದು ಪರಿಸ್ಥಿತಿ ಇದೆ. ಹೀಗಾದರೆ ಜನರು ಪೊಲೀಸ್ ಸ್ಟೇಶನ್‌ಗೆ ಹೋಗಬೇಕೊ ಅಥವಾ ಬೇಡವೆ? ಇವತ್ತು ಪೊಲೀಸ್ ಸ್ಟೇಶನ್‌ಗೆ ಹೋಗುವ ಧೈರ್ಯ ಯಾರಿಗೂ ಇಲ್ಲ. ಈ ವಾತಾವರಣವನ್ನು ನೀವು ಬದಲಾವಣೆ ಮಾಡಲಿಕ್ಕೆ ಏನು ಆಲೋಚನೆ ಸರ್ಕಾರ ಮಾಡಿದೆ ಎಂಬುದನ್ನು ಹೇಳಬೇಕು. ನಾನು ಎಷ್ಟು ಮಾತನಾಡಿದರೂ ಇದಕ್ಕಿಂತ ವ್ಯತ್ಯಾಸ ಏನೂ ಇಲ್ಲ. ಇದನ್ನು ನಾನು ಪುನಃ ಅವರ ಗಮನಕ್ಕೆ ತರುತ್ತೇನೆ. ಈಗಾಗಲೆ ಇಷ್ಟನ್ನು ನಾನು ಹೇಳಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳಿಗೆ ಗೊತ್ತಿದೆ, ಸರ್ಕಾರಕ್ಕೂ.ಗೊತ್ತಿದೆ, ಲೋಕಲ್ ಆಫೀಸರ್ಸ್‌ಗಳಿಗೂ ಗೊತ್ತಿದೆ. ಅದನ್ನು ನಿಲ್ಲಿಸುವಂಥ ಪ್ರಯತ್ನವನ್ನು ಎಲ್ಲರೂ ಸೇರಿ ಮಾಡಬೇಕಾಗುತ್ತದೆ. ಸರ್ಕಾರ ಮತ್ತು ಅಧಿಕಾರಿಗಳು ಸೇರಿ ಮಾಡಬೇಕಾಗುತ್ತದೆಂದು ಹೇಳುತ್ತಾ, ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ (ಶ್ರೀನಿವಾಸಪುರ) : ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಇತರ ಗೆಳೆಯರು ಮಾತನಾಡಿರುವುದನ್ನು ಕೇಳಿದೆ, ಒಂದು ಹಂತದಲ್ಲಿ ಹೋಂ ಡಿಪಾರ್ಟ್‌ಮೆಂಟಿನ ಡಿಮಾಂಡ್ಸ್ ಮೇಲೆ ಚರ್ಚೆ ಮಾಡುತ್ತಿದ್ದೇವಾ ಎನ್ನುವಂತಹ ಭಾವನೆ ಬಂತು. ಮಾನ್ಯ ವಿರೋಧಪಕ್ಷದ ನಾಯಕರು ಚರ್ಚೆಯನ್ನು ಮಾಡುತ್ತಾ ಲಾ ಅಂಡ್ ಆರ್ಡರ್ ತೊಂದರೆಗೆ ಸಂಬಂಧಿಸಿದಂತೆ ಹೆಚ್ಚು ಮಾತನಾಡಿದರು. ಗೆಳೆಯ ಶ್ರೀರಾಮರೆಡ್ಡಿಯವರು

ಲಾ ಅಂಡ್ ಆರ್ಡರ್ ಪ್ರಾಬ್ಲಮ್‌ಗಿಂತ ಹೆಚ್ಚಾಗಿ ರಾಜಕೀಯ ಸಮಸ್ಯೆ ಅನ್ನತಕ್ಕಂತಹ ವಿಷಯವನ್ನು ಪ್ರಸ್ತಾಪ ಮಾಡಿದರು. ನಾನು ಅವರ ಜೊತೆಗೆ ಪೂರ್ಣ ಸಹಮತವನ್ನು ಹೊಂದಿದ್ದೇನೆ. ನಾನು ಮಾತನಾಡುವುದಕ್ಕೆ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ, ನಾನು 3 ನಿಮಿಷದಲ್ಲಿ ಮುಗಿಸುತ್ತೇನೆ. ಮಾನ್ಯ ರೆಡ್ಡಿಯವರು ಮಾತುಮಾತಿಗೆ ಹೇಳಿದರು ಪೆಸ್ಟರ್ಸ್ ಗಾಟ್ಸ್‌ನ್ನು ಏತಕ್ಕಾಗಿ ಸೆಲೆಕ್ಟ್ ಮಾಡಿದ್ದಾರೆ ಎಂದು ಹೇಳಿದರು. ಗೆರಿಲ್ಲಾ ವಾರ್‌ನ್ನು ಮಾಡಬೇಕೆಂದು ಹೇಳಿ ಬಯಸಿದವರು ಆ ಸಿದ್ಧಾಂತದಲ್ಲಿ ನಂಬಿಕೆಯನ್ನು ಇಟ್ಟುಕೊಂಡವರು ಅವರು ಹೆಚ್ಚಾಗಿ ಅರಣ್ಯ ಪ್ರದೇಶಗಳನ್ನು ಬಯಸುತ್ತಾರೆ. ಶ್ರೀಕಾಕುಳಂ ಜಿಲ್ಲೆಯ ಪಾರ್ವತಿಪುರಂ ಸ್ಟೇಷನ್‌ನಲ್ಲಿ ಆವಾಗಲೂ ಕೂಡ ಅಷ್ಟೆ ಆದದ್ದು. ಕೇರಳದಲ್ಲಿ ಅಜಿತ ಕುಣಿಕಲ್ ನಾರಾಯಣನ್ ಮತ್ತು ಮಂದಾಕಿನಿ ನಾರಾಯಣನ್‌ರವರ ಮಗಳು ಮಾಡಿದಾಗಲೂ ಕೂಡ ಮಲಬಾರ್ ಹಿಲ್ಸ್ ಮಧ್ಯದಲ್ಲಿಯೇ ಆ ಹೋರಾಟ ಪ್ರಾರಂಭವಾದದ್ದು. Telangane armed movement ಆಗಲಿ, ಇವತ್ತು ನಡೆಯುತ್ತಿರುವಂತಹ ಪೀಪಲ್ಸ್ ವಾರ್ ಗ್ರೂಪ್ ಮೂವ್‌ಮೆಂಟ್ ಕೂಡ ಫಾರೆಸ್ಟ್ ಏರಿಯಾದಲ್ಲಿ ನಡೆಯುತ್ತಿರುವುದು. camouflage ಮಾಡಲಿಕ್ಕೆ ಅವರಿಗೆ ಅನುಕೂಲವಿರಬೇಕು. ಅವರ ಸಿದ್ಧಾಂತವನ್ನು ನಾವು ಒಪ್ಪತಕ್ಕಂತಹದ್ದು ಮತ್ತು ಬಿಡತಕ್ಕಂತಹದ್ದು ಅದು ಬೇರೆ ಪ್ರಶ್ನೆ ಅವರು ಅವರ ಪಾರ್ಟಿಯ ಲೈನನ್ನು ಹೇಳಿದರು, ಇವರು ಲಿಮ್‌ಕಿಯಾ ವಾದಿಗಳು ಮತ್ತೊಂದು, ಮತ್ತೊಂದು ಆದರೆ, ಸರ್ಕಾರದಲ್ಲಿ ನಾನು ಇಷ್ಟು ನಿವೇದನೆಯನ್ನು ಮಾಡಿಕೊಳ್ಳುತ್ತೇನೆ. ಇಷ್ಟು ದಿವಸಗಳ ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇದ್ದಂತಹ ಸರ್ಕಾರಗಳು ಸತತವಾಗಿ ಬಂದಂತಹವು, ಆ ಭಾಗದಲ್ಲಿ ವಾಸವಾಗಿರುವಂತಹ ಜನರ ಕೆಲವು ಸಮಸ್ಯೆಗಳ ಕಡೆಗೆ ಗಮನವನ್ನು ಕೊಡುವುದು ಸಾಧ್ಯವಾಗಿಲ್ಲ ; ಅದು ಕಟುಸತ್ಯ. ಅವರು ಶೋಷಣೆಗೆ ಒಳಗಾಗಿದ್ದಾರೆ. ಶೋಷಣೆ ಇದ್ದ ಕಡೆಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಹೋರಾಟ ಪ್ರಾರಂಭವಾಗತಕ್ಕಂತಹದ್ದು ಅನಿವಾರ್ಯ. Every suppression is met with counter suppression. ಈ ಅವಕಾಶವನ್ನು ಅವರು ಸದುಪಯೋಗಪಡಿಸಿಕೊಂಡಿದ್ದಾರೆ. ಅವರು ಚಾರುಮಜುಂದಾರ್ ಕಾನೂಸನ್ಯಾಲ ವಾದದಲ್ಲಿ ನಂಬಿಕೆ ಇದ್ದವರು ಅಥವಾ ಲಿಮ್‌ಕಿಯಾ ವಾದಿಗಳು ಅದರ ಸಂಬಂಧ ನಮಗೆ ಬೇಕಾಗಿಲ್ಲ. ಆದರೆ ಸ್ಥಳೀಯ ಜನರ ಸಮಸ್ಯೆಗಳನ್ನು ಅವರು ಕೈಗೆತ್ತಿಕೊಂಡಿದ್ದಾರೆ, ಆ ಜನರಿಗೆ ನನ್ನ ಮಿತ್ರ ಗೋಪಾಲಪೂಜಾರಿಯವರು ಹೇಳಿದಂತೆ ಅವರು ಒಂದು ರೀತಿಯಲ್ಲಿ ಹೀರೋಗಳಂತೆ ಕಾಣುತ್ತಿದ್ದಾರೆ. ನಾವು ಫೇಲಾಗಿದ್ದೇವೆ, The best and the immediate task the Government should attend to, is attend to the basic issues raised by these people. ಬಹುಶಃ ಇನ್ನು ಕೆಲವೇ ದಿವಸಗಳಲ್ಲಿ ಬಿಳಿಗಿರಿರಂಗನ ಬೆಟ್ಟದಲ್ಲಿ ಸೋಲಿಗರೂ ಕೂಡ ನಕ್ಸಲೈಟ್ ತರಹ ಸಿಂಪತೈಸ್ ಆದರೆ ನೀವು ಆಶ್ಚರ್ಯಪಡಬೇಕಾಗಿಲ್ಲ. ಅವರು ಎಷ್ಟು ದಿವಸಗಳ ಕಾಲ ಶೋಷಣೆಯನ್ನು ತಡೆಯುತ್ತಾರೆ? ನಮಗೆ ಇರುವಂತಹ ಎಲ್ಲಾ ಇತಿಮಿತಿಗಳಲ್ಲಿ ನಾವು ಅವರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದರಲ್ಲಿ ವಿಫಲರಾಗಿ ಅವರ ಮೇಲೆ ಗೂಬೆಯನ್ನು ಕೂರಿಸಿದರೆ ಹೇಗೇ? ನನಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆ, ಅವನಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರಬೇಕೆಂದು ಬಲವಂತ ಮಾಡುವುದಕ್ಕೆ ಸಾಧ್ಯವಿಲ್ಲ. ಇದನ್ನು ನಾವು ಯಾರು ಮರೆಯುವುದಕ್ಕೆ ಸಾಧ್ಯವಿಲ್ಲ. ಮತ್ತೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಬಹುತೇಕ ಈ ಎಲ್ಲಾ ಸಮಸ್ಯೆಗಳು ಫಾರೆಸ್ಟ್ ಇಲಾಖೆಗೆ ಸಂಬಂಧಪಟ್ಟಿದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಅತ್ಯಂತ ನಮ್ರತೆಯಿಂದ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಈ ಇಲಾಖೆಯಲ್ಲಿರುವಂತಹ ಕೆಲವು ಸೀನಿಯರ್ ಆಫೀಸರ್ಸ್ ಅವರು ಮೂಲತಃ ಕರ್ನಾಟಕದವರಲ್ಲ, ಆಲ್ ಇಂಡಿಯಾ ಸರ್ವೀಸ್‌ಗೆ ಸೇರಿ ಬಂದವರಾಗಿದ್ದಾರೆ, ಅವರು ಹ್ಯಾಂಡಲ್ ಮಾಡಿರುವಂತಹ ಸ್ಯಾಂಪಲ್‌ಗಾಗಿ 50 ಫೈಲ್‌ಗಳನ್ನು ತರಿಸಿ ಸ್ವತಃ ಮುಖ್ಯಮಂತ್ರಿಗಳು ನೋಡಲಿ. ಯಾವ ಫೈಲ್‌ನಾದರೂ ನೋಡುವುದು, ಓದುವುದು, ಸಮಸ್ಯೆ ಏನೆಂದು ತಿಳಿದುಕೊಳ್ಳುವುದು ಇದರಲ್ಲಿ ಏನು ಬರೆಯಬೇಕೆಂದು ಆಲೋಚನೆ ಮಾಡಿ ಬರೆದರೆ ಪರವಾಗಿಲ್ಲ. ಅವರು ಏನು ಈ ರಾಜ್ಯಕ್ಕೆ ವಿರುದ್ಧವಾಗಿದ್ದಾರೋ ಅಥವಾ ಓದು ಬರಹ ಬರೆಯುವುದು ಅವರಿಗೆ ಗೊತ್ತಿಲ್ಲವೋ ಅಥವಾ ಬೇರೆ ಯಾರಾದರೂ ಅವರ ಕೈಯಲ್ಲಿ ಈ ರೀತಿ ಕೆಲಸ ಮಾಡಿಸುತ್ತಿದ್ದಾರೋ ನನಗೆ ಗೊತ್ತಿಲ್ಲ. ಮಾನ್ಯ ಪ್ರಕಾಶ್‌ರವರು ಮಧ್ಯದಲ್ಲಿ ಇಂಟರ್‌ವಿನ್ ಆಗಿ ಬಹಳ ಮೀನಿಂಗ್‌ಫುಲ್ ಎಕ್ಸ್‌ಪ್ಲೆಸೇಷನ್‌ನ್ನು ಹೌಸ್‌ಗೆ ಕೊಟ್ಟರು. ಅನೇಕ ವೇಳೆಗೆ ಕಾಡನ್ನು ಕಾಪಾಡುವುದಕ್ಕೆ ಮುನ್ನ ಕಾಡು ಬೆಳೆಯುವುದಕ್ಕೆ ಮುನ್ನ ಈ ರೀತಿಯಾದಂತಹ ಒಂದು ವಿಚಿತ್ರ ವಾದಂತಹ ನಿಲುವನ್ನು ತಾಳಿ ಸರ್ಕಾರವೇ ಜನರಿಗೆ ವಿರುದ್ಧ ಎನ್ನುವಂತಹ ಭಾವನೆಗಳನ್ನು ಅವನ ಮನಸ್ಸಿನಲ್ಲಿ ಸೃಷ್ಟಿ ಮಾಡುವುದರಲ್ಲಿ ಇವರು ಯಶಸ್ವಿಯಾಗಿದ್ದಾರೆ. ನಾವು ಇಂತಹವರನ್ನು ಎಲ್ಲಿಯವರೆವಿಗೆ ನಮ್ಮ ವ್ಯವಸ್ಥೆಯಲ್ಲಿ ಪ್ರಮುಖ ಸ್ಥಾನಗಳಲ್ಲಿ ಇಟ್ಟುಕೊಂಡಿರುತ್ತೇವೆ, ಅಲ್ಲಿಯವರೆವಿಗೆ ರಾಜ್‌ಸಂಕೇತ ಅಂದರೆ ಅವನ ಜಾಗದಲ್ಲಿ ಇನ್ನೊಬ್ಬ ಹುಟ್ಟಿಕೊಳ್ಳುತ್ತಾನೆ. ನೀವು ಅದಕ್ಕೆ ಯಾವುದೇ ವಾದ ಎಂದು ಕರೆಯಬಹುದು, ಆ ಬೇಸಿಕ್ ಇಷ್ಯೂವನ್ನು ರೀಸಾಲ್ವ್ ಮಾಡುವುದರಿಂದ ನಾವು ಈ ಸಮಸ್ಯೆಯನ್ನು ಪರಿಹಾರವನ್ನು ಮಾಡಬಹುದು ಎಂಬುದು ನನ್ನ ಅಭಿಪ್ರಾಯ. ಮತ್ತೆ ಪೊಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ನಾವು ಮಾರ್ಡನೈಸ್ ಮಾಡಬೇಕಾಗಿದ್ದರೆ ಅವರನ್ನು ನಾವು ಇಂತಹ ಒಂದು ಕಾಂಟಿನ್‌ಜೆನ್ಸಿಗೆ ತಯಾರೇ ಮಾಡಿಲ್ಲ, ಇವತ್ತು ಅನೇಕ ಜನರು ಡೈರಕ್ಟರ್ ಆಫ್ ಇನ್‌ಫರ್ಮೇಷನ್ ಐಪಿಎಸ್ ಆಫೀಸರ್, ಟೂರಿಸಂ ಡೈರೆಕ್ಟರ್ ಐಪಿಎಸ್ ಆಫೀಸರ್, ಯೂನಿವರ್ಸಿಟಿಗೆ ರಿಜಿಸ್ಟಾರ್ ಐಪಿಎಸ್ ಆಫೀಸರ್, ಏಕೆ ಅವರು ಅಲ್ಲಿಗೆ ಹೋಗುವುದಕ್ಕೆ ಯಾರೂ ಬೇರೆ ಸೀನಿಯರ್ ಐಎಎಸ್ ಆಫೀಸರ್ ಇಲ್ಲವಾ ಅಥವಾ ಕೆಎಎಸ್‌ನವರು ಹೋಗುವುದಕ್ಕೆ ಆಗುವುದಿಲ್ಲವಾ? ಇವರಿಗೆ ಯೂನಿಫಾರಂ ಹಾಕಿಕೊಳ್ಳುವುದಕ್ಕೆ ಕಷ್ಟನಾ? ಇವರೆಲ್ಲರನ್ನೂ ಕರೆಸಿಬಿಡಿ Send them back. ನಿಮಗೆ ಅಷ್ಟು ಸರ್‌ಪ್ಲಸ್ ಇದ್ದರೆ ಐಪಿಎಸ್ ಕೇಡರ್ ಆಲ್ ಇಂಡಿಯಾ ಸರ್ವೀಸ್‌ನವರು ನಮಗೆ ಬೇಕಾಗಿಲ್ಲ, ಇವರ ಹೊರೆಯನ್ನು ನಾವು ಸಹಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿ ಅವರನ್ನು ಇಲ್ಲಿಗೆ ಕರೆದುಕೊಂಡು ಬಂದು ನಾನೆ ಐಪಿಎಸ್ ಪೋಸ್ಟ್‌ಗೆ ಎಕ್ಸಿಕ್ಯೂಟಿವ್ ಪೋಸ್ಟ್‌ಗೆ ಹಾಕಿಕೊಂಡು ಇವರು ಮಾಡಬೇಕಾದಂತಹ ಕೆಲಸವನ್ನೆಲ್ಲಾ ಬಿಟ್ಟು ಪಾಪ ಆ ಬಡ ಕಾನ್ಸ್‌ಟೇಬಲ್‌ಗಳಿಗೆ ಫೀಲ್ಡ್ ಸ್ಟಾಫ್‌ಗಳನ್ನು ಇನ್‌ಕ್ರೀಸ್ ಮಾಡುವುದಿಲ್ಲ, ವಾಟಾಳ್ ನಾಗರಾಜುರವರು ಹೇಳಿದಂತೆ ಅವರ ಬಗ್ಗೆ ನಮಗೆ ಕರುಣೆ ಇಲ್ಲ, ಅವರ ದಿನನಿತ್ಯದ ಬದುಕು ಸುಧಾರಿಸುವ ಕಡೆಗೆ ನಾವು ಗಮನ ಕೊಡುವುದಿಲ್ಲ. ಗಲಾಟೆಯಾದ ಕಡೆಗಳಿಗೆ ಕಾನ್ಸ್‌ಟೇಬಲ್‌ಗಳನ್ನು ಹೋಗಿ ಎಂದು ಹೇಳುತ್ತಾರೆ, ಅವನಿಗೆ ಅವನ ಹೆಂಡತಿ ಮಕ್ಕಳು ನೆನಪಿಗೆ ಬರುತ್ತಾರೆ, ಅವನು ಏತಕ್ಕಾಗಿ ಮುಂದಕ್ಕೆ ಹೋಗುತ್ತಾನೆ. ಇವತ್ತು ವೆಂಕಟಮ್ಮನಹಳ್ಳಿಯಲ್ಲಿ ಸತ್ತಿದ್ದಾರೆ, ಕಾಂಪನ್‌ಸೇಷನ್‌ನ್ನು ಕೊಟ್ಟರೆ ಆಯಿತು. ಆ ಮಗುವಿಗೆ ತಂದೆಯನ್ನು ಕೊಡುತ್ತೇವಾ ನಾವು? ಆ ಹೆಂಡತಿಗೆ ಗಂಡನನ್ನು ಕೊಡುತ್ತೀವಾ? ಆ ಲಕ್ಷ ರೂಪಾಯಿ ಗಳಿಗೆ ಗಂಡ ಸಿಗುವಹಾಗಿದ್ದರೆ ಖರೀದಿ ಮಾಡುವ ಹಾಗಿದ್ದರೆ, alright, we will do

that. ಫೀಲ್ಡ್ ಸ್ಟಾಫ್ ಮುಂದೆ ಹೋಗಬೇಕೇ ಹೊರತು ಯಾವ ಐಪಿಎಸ್ ಆಫೀಸರ್, ಯಾವ ಅಡಿಷನಲ್ ಎಸ್‌ಪಿ, ಯಾವ ಡಿವೈಎಸ್‌ಪಿ ಮುಂದಕ್ಕೆ ಹೋಗುವುದಿಲ್ಲ. ಫೀಲ್ಡ್ ಸ್ಟಾಫನ್ನು ಇನ್‌ಕ್ರೀಸ್ ಮಾಡಬೇಕು. ಇಂಟಲಿಜೆನ್ಸ್ ಮೊದಲು ಲೇಬರ್ ವಿಂಗ್‌ಗೆ ಬೇರೆ ಇರುತ್ತಿದ್ದರು. ಸ್ಟೂಡೆಂಟ್ಸ್‌ಗೆ ಹಾಗೂ ಪೊಲಿಟಿಕಲ್ ವಿಂಗ್‌ಗೆ ಬೇರೆ ಬೇರೆ ಇರುತ್ತಿದ್ದರು, ಸರ್ಕಾರದ ವಿರುದ್ಧ ಯಾರಾದರೂ ಪಿತೂರಿಯನ್ನು ಮಾಡುತ್ತಿದ್ದಾರೆಯೇ ಎಂದು ನೋಡುತ್ತಿದ್ದರು. ಟ್ಯಾಕ್ಸ್ ಇವೇಡರ್ಸ್ ಬೇರೆ ಇರುತ್ತಿದ್ದರು, ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಯಾರು ಥೆಫ್ಟ್ ಮಾಡುತ್ತಾರಲ್ಲಾ ಇಂತಹದ್ದಕ್ಕೆಲ್ಲಾ ಸಮಾಜದಲ್ಲಿ ಅವರು ಮಫ್ತಿ ಹಾಕಿಕೊಂಡು ಓಡಾಡುತ್ತಿದ್ದರು. ಇವತ್ತು ಯಾರು ಎಲ್ಲಿದ್ದಾರೋ? ಯಾರಿಗೂ ಗೊತ್ತಿಲ್ಲ. ಇಂಟಲಿಜೆನ್ಸ್ ಫೆಲ್ಯೂರ್ ಎಂದರೆ ಅವನು ಯಾವ ಇಂಟಲಿಜೆನ್ಸ್‌ನಲ್ಲಿ ಕೆಲಸ ಮಾಡಬೇಕು ಎಂಬುದರ ಬಗ್ಗೆ ಓರಿಯೆಂಟೇಷನ್ ಕೊಟ್ಟಿದ್ದರೇ ತಾನೇ? ಅವನಿಗೆ ಟ್ರೈನಿಂಗ್ ಇದ್ದರೆ ತಾನೇ ಮಾಡುತ್ತಾನೆ. ಒಂದು ದಿವಸ ಬೆಳಗಾಗಿ ಎದ್ದು ಈ ಸಮಸ್ಯೆ ಉದ್ಭವವಾಯಿತೆಂದು ಹೇಳಿ ನಾವೆಲ್ಲರೂ ಮಾತನಾಡಿಕೊಳ್ಳುತ್ತೇವೆ. ಮಾನ್ಯ ಅಧ್ಯಕ್ಷರೆ, ತಮ್ಮ ಪೀಠದಿಂದ ಕುಳಿತು ಒಂದು ಉತ್ತಮವಾದಂತಹ ಸಲಹೆಯನ್ನು ಕೊಟ್ಟಿದ್ದೀರಿ. ಹಾಗಾದರೆ ಕಾನ್ಸೆಸ್ ಅರೈಸ್ ಆಗಲಿ, ಪೊಲೀಸ್ ಅಡ್ಮಿನಿಸ್ಟ್ರೇಷನ್‌ನಲ್ಲಿ ನಾವ್ಯಾರು ಇಂಟರ್‌ಫೀಯರ್ ಆಗುವುದು ಬೇಡವೆಂದರೆ ಹೇಳಿದಿರಿ. ಆಲ್‌ರೈಟ್ ಇವತ್ತು ಅದನ್ನು ಮೂವ್ ಮಾಡಲಿ, ಮಾನ್ಯ ಮುಖ್ಯಮಂತ್ರಿಗಳು. We are all for it. ನಮಗೆ ಯಾವ ಆಸಕ್ತಿಯೂ ಇಲ್ಲ. ಇವನು ನನ್ನ ಜಾತಿಯವನು, ಇವನು ನನ್ನ ಉಪಜಾತಿಯವನು ಇವನು ನನ್ನ ಬಂಧು ಮತ್ತು ಬಾವಮೈದ ಇವನು ನಮ್ಮ ಚಿಕ್ಕಪ್ಪ, ದೊಡ್ಡಪ್ಪ, ಇವನಿಗೆ ಅಷ್ಟು ದಿವಸವಾಯಿತು, ಎಂದಾಗ the result is what you are having today. ಸಮಸ್ಯೆಗೆ ಕಾರಣಕರ್ತರು ನಾವು. ನಾವು ಆತ್ಮವಂಚನೆಯನ್ನು ಮಾಡಿಕೊಳ್ಳದೆ, ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿದುಕೊಳ್ಳಬೇಕಾದರೆ ನಮ್ಮನ್ನು ನಾವು ಅಪರಾಧಿ ಸ್ಥಾನದಲ್ಲಿಟ್ಟುಕೊಂಡು ಆತ್ಮವನ್ನು ಶುದ್ಧಿ ಮಾಡಿಕೊಂಡು ಈ ತಪ್ಪಿಗೆ ನಾವು ಪಶ್ಚಾತ್ತಾಪ ಮಾಡಿಕೊಳ್ಳುತ್ತೇವೆ, ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇವೆ ಎಂದು ಹೇಳಿ ನಾವು ಪರಿಹಾರಕ್ಕೆ ಕೈಹಾಕಬೇಕು. ಆ ಜನರು ಎದುರಿಸುತ್ತಿರುವ ಸಮಸ್ಯೆಗೆ ನಾವು ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. of collectively, I am speaking. ನಾವು ಬ್ಯಾಲೆಟ್ ಮೇಲೆ ನಂಬಿಕೆಯನ್ನು ಇಟ್ಟಿರತಕ್ಕಂತಹವರು, ಬುಲೆಟ್ ಮೇಲೆ ನಂಬಿಕೆ ಇಟ್ಟವರಲ್ಲ. We may disagree with those people. ಆದರೆ ನಾವು ಯಾರೋ ಹೇಳಿದಂತೆ extortionists ಪೋಲಿಪುಂಡರು, ಲುಚ್ಚಾಗಳು ಎಂದು ನಾನು ಹೇಳುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸಾಕೇತ್‌ರಾಜ್ ಸತ್ತ ದಿವಸ ಮರುಕಪಟ್ಟರು, ಎಂಬ ಮಾತನ್ನು ಹೇಳಿದರು. ಅದು ಮುಖ್ಯಮಂತ್ರಿಗಳಲ್ಲ, ಧರ್ಮಸಿಂಗ್‌ರವರು ಹೃದಯದ ಒಳಗಿರುವಂತಹ ಭಾವನೆ, ಯಾವುದೇ ಮನುಷ್ಯನಿಗೆ ಸಾರ್ವಜನಿಕ ಜೀವನದಲ್ಲಿ ಇರುವವನಿಗೆ ಹೃದಯ ಜೀವಂತವಾಗಿರಬೇಕು. ಹೃದಯ ಸತ್ತುಹೋದ ಮೇಲೆ ಅವನು ಯಾವ ಅಧಿಕಾರಕ್ಕೆ ಬಂದರೆ ಏನು ಪ್ರಯೋಜನ? ನಿಮ್ಮಲ್ಲಿ ಆ ಹೃದಯ ಜೀವಂತವಾಗಿದೆ. ಅದಕ್ಕಾಗಿ ಅವತ್ತು ಅವನು ಸತ್ತಾಗ ನಿಮಗೆ ನಾಡಿಮಿಡಿಯಿತು, ಯಾವುದೇ ದೊಡ್ಡ ಸಂಬಂಧವಿರಬೇಕೆಂದಲ್ಲ, ಅಥವಾ ನೀವು ಜನರ ಮೆಚ್ಚುಗೆಯನ್ನು ಗಳಿಸುವುದಕ್ಕೆ ಮಾಡಲಿಲ್ಲ. ನೀವು ತಡೆಯುವುದಕ್ಕೆ ಆಗದೇ ಇರುವಂತಹ ಭಾವನೆ ನಿಮ್ಮನ್ನು ಓವರ್‌ಟೇಕ್ ಮಾಡಿಕೊಂಡು

ಹೊರಗಡೆ ಬಂತು. That should come into effect. ಇನ್ನು ಮುಂದೆ ಮತ್ತೆ ಸಾಕೇತ್‌ರಾಜ ಎನ್ನುವವರು ಯಾರಿದ್ದಾರೆ ಅವರು ಸಾಯಕೂಡದು, ಎನ್‌ಕೌಂಟರ್ಸ್ ಆಗಕೂಡದು ಎನ್‌ಕೌಂಟರ್ ಆಗತಕ್ಕಂತಹ ಸೆನ್ಸಿಟಿವ್ ಸಿಚ್ಯುಯೇಷನ್ ನಾವು ಉದ್ಭವವಾಗುವುದಕ್ಕೆ ಅವಕಾಶವನ್ನು ಮಾಡಕೂಡದು, ಈ ಜಾಣ್ಮೆಯನ್ನು, ತಾಳ್ಮೆಯನ್ನು ಬುದ್ಧಿವಂತಿಕೆಯನ್ನು, ಧೈರ್ಯವನ್ನು, ಸಮಯಪ್ರಜ್ಞೆಯನ್ನು ಸರ್ಕಾರ ಪ್ರದರ್ಶನ ಮಾಡಬೇಕು. ಅವರು ಎತ್ತಿರುವಂತಹ ಮೈನ್ ಇಷ್ಯೂ ಕಡೆಗೆ ಗಮನ ಕೊಡಬೇಕು. ಇದನ್ನು ನಾವು ಮಾಡಿದರೆ ಬಹುಶಃ ಈ ಸದನದಲ್ಲಿ ಪುನಃ ಪುನಃ ನಕ್ಸಲ್ ವಾದದ ಬಗ್ಗೆ ನಾವು ಮಾತನಾಡಬೇಕಾದ ಅವಶ್ಯಕತೆ ಉದ್ಭವವಾಗುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ರೆಡ್ಡಿಯವರೇ, ತಮಗೆ ಗೊತ್ತಿದೆ, 1967ನೇ ಇಸವಿಯಲ್ಲಿ ಆದಂತಹ ರಾಜಕೀಯ ಪರಿಣಾಮದಿಂದ ಸಿ.ಪಿ.ಎಂ.ಪಾರ್ಟಿಯನ್ನು ಬಿಟ್ಟುಹೋದಂತಹ ನಕ್ಸಲ್ ವಾದವನ್ನು ಅಡ್ವೋಕೇಟ್ ಮಾಡತಕ್ಕಂತಹವರು ಯಾರಿದ್ದರೋ ಅವರ ಕಾರ್ಯಾಚರಣೆಯ ಫಲವಾಗಿ ಹೈಯಸ್ಟ್ ನಂಬರ್ ಆಫ್ ಕೇಡರ್ಸ್‌ಗಳನ್ನು ಕಳೆದುಕೊಂಡವರು ನಿಮ್ಮ ಪಾರ್ಟಿ. 1967 ರಿಂದ 1972ರವರೆಗೆ ನಡೆದಂತಹ ತೀವ್ರ ಕಾರ್ಯಾಚರಣೆಯಲ್ಲಿ ವೆಸ್ಟ್‌ಬೆಂಗಾಲ್ ರಾಜ್ಯದಲ್ಲಿ ಸತ್ತಷ್ಟು ಸಿಪಿಎಂ ಕಾರ್ಯಕರ್ತರು ಯಾರಿದ್ದಾರೆ ಅಷ್ಟು ಜನ ಯಾರೂ ಎಲ್ಲೂ ಬಲಿಯಾಗಲಿಲ್ಲ. ಅವರು ಇವರನ್ನು renegades ಎಂದರು, ಇವರು ಅವರನ್ನು ಡೆಮಗಾಗ್ಸ್ ಎಂದರು. ಆದರೆ 1977ರಲ್ಲಿ ಅಧಿಕಾರ ಸೂತ್ರವನ್ನು ಕೈಹಿಡಿದಂತಹ ಮಾನ್ಯ ಜ್ಯೋತಿಬಸುರವರು ಸಂಸದೀಯ ಪ್ರಜಾಪ್ರಭುತ್ವ ಇದಕ್ಕೆ ಉತ್ತರ ಎಂದು ಸಾಬೀತು ಮಾಡಿದ್ದಾರೆ. We should salute that man. ಬಹುಶಃ ಆ ತರಹದ ಒಂದು ಸಿಚ್ಯುಯೇಷನ್ ಹ್ಯಾಂಡಲ್ ಆಗದಿದ್ದರೆ ಇವತ್ತು ಇಡೀ ಇಂಡಿಯಾ ದೇಶ ಬೇರೆಯದೇ ಆದ ಒಂದು ಪರಿಸ್ಥಿತಿ ಉಂಟಾಗಿ ನಾವು ಅದನ್ನು ಹೇಳುವುದಕ್ಕಾಗುವುದಿಲ್ಲದಿರುವಂತಹ ಸ್ಥಿತಿಯಲ್ಲಿ ಲ್ಯಾಂಡ್ ಆಗಬೇಕಾಗಿತ್ತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ರಮೇಶ್‌ಕುಮಾರ್ ಅವರು ಹೇಳಿದ್ದಕ್ಕೆ ಪೂರಕವಾಗಿ ನಾನು ಹೇಳುವುದಾದರೆ ನಕ್ಸಲೈಟ್ ಚಳುವಳಿ ಪ್ರಾರಂಭವಾಗಿದ್ದೇ ಬಂಗಾಳದಲ್ಲಿ. ಬಂಗಾಳದಲ್ಲಿ ಇವತ್ತು ಏಕೆ ಕಡಿಮೆಯಾಗಿದೆಯೆಂದರೆ ಅವರು ಯಾವ ಭೂಮಿ ಸಮಸ್ಯೆಯನ್ನು ಎತ್ತಿಕೊಂಡು ಹೋರಾಟ ಮಾಡಿದರೋ ಅದನ್ನು ಪರಿಣಾಮಕಾರಿಯಾಗಿ ಎಡರಂಗ ಸರ್ಕಾರ ತನ್ನ ಅಧಿಕಾರಾವಧಿಯಲ್ಲಿ ಸಂಪೂರ್ಣ ಮಾಡಿದೆ. ಉಳುವವನಿಗೆ ಭೂಮಿ ಕೊಟ್ಟಿದೆ. ಇಡೀ ಲ್ಯಾಂಡ್ reforms ಬಿಲ್ ಅನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು ಹಳ್ಳಿಗಾಡಿನ ಜನಕ್ಕೆ ಭೂಮಿಯನ್ನು ಕೊಟ್ಟಿದೆ. Today, West Bengal stands first state in the country producing highest quantity of rice. It is just because of distribution of lands to the tillers. ಅದೇ ರೀತಿ ಕೇರಳದಲ್ಲಿ ನಮ್ಮ ಪಕ್ಷದ ಸರ್ಕಾರ ಅದೇ ಕೆಲಸ ಮಾಡಿದ್ದರಿಂದ ಆ ಚಳುವಳಿಯನ್ನು ನಿಲ್ಲಿಸಲಿಕ್ಕೆ ಸಾಧ್ಯವಾಯಿತೇ ಹೊರತು, ನಾವು ಬಂದೂಕಿನಿಂದ ಅದನ್ನು ನಿಲ್ಲಿಸಲಿಲ್ಲ, ಬಂದೂಕಿನಿಂದ ನಿಲ್ಲಿಸುವಂತಹ ಪ್ರಯತ್ನವನ್ನು ನಾವು ಮಾಡಲಿಲ್ಲ. We are the victims for their individual annihiliation. ಸಾವಿರಾರು ಕಾರ್ಯಕರ್ತರನ್ನು ನಮ್ಮ ಪಕ್ಷ ಕಳೆದುಕೊಂಡಿದೆ. ಆದರೂ ಕೂಡ ನಮಗೆ ಅವರ ಬಗ್ಗೆ ವೈಯಕ್ತಿಕವಾದ ದ್ವೇಷವಿಲ್ಲ. ಇವತ್ತು ನಾವು ಅವರನ್ನು ಅಪೀಲ್

ಮಾಡಿಕೊಳ್ಳುತ್ತಿದ್ದೇವೆ, ತಪ್ಪು ದಾರಿಗೆ ಹೋಗಿದ್ದೀರಿ, ಶಸ್ತ್ರಾಸ್ತ್ರವನ್ನು ಬಿಟ್ಟು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಹೋರಾಟದ ಮುಖಾಂತರ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕೇ ಹೊರತು ಯಾರೋ ಕೆಲವು ವ್ಯಕ್ತಿಗಳನ್ನು ಕೊಲೆ ಮಾಡುವುದರಿಂದ ವ್ಯವಸ್ಥೆ ಬದಲಾವಣೆಯಾಗುವುದಿಲ್ಲ. ವ್ಯವಸ್ಥೆ ಬದಲಾವಣೆಗೋಸ್ಕರ ಹೋರಾಟ ನಡೆಸಬೇಕು ಎನ್ನುವ ಅಪೀಲನ್ನು ನಾವು ಇವತ್ತೂ ಕೂಡ ಮಾಡುತ್ತಿದ್ದೇವೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಲೋಕೋ ವಿಭಿನ್ನ ರುಚಿ ಅಂತ ಹೇಳಿ ಯುನಿವರ್ಸಿಟಿ ಕ್ಯಾಂಪಸ್‌ನಲ್ಲಿ ಆರ್.ಎಸ್.ಎಸ್. ಸಿದ್ಧಾಂತವನ್ನು ಪ್ರತಿಪಾದನೆ ಮಾಡುವಂತಹ ಪ್ರೊಫೆಸರ್ಸ್ ಇದ್ದಾರೆ, ಮಾರ್ಕ್ಸ್‌ವಾದವನ್ನು ಪ್ರತಿಪಾದನೆ ಮಾಡುವವರಿದ್ದಾರೆ. ಮಾವೋವಾದವನ್ನು ಹಾಗೂ ಲೆನಿನ್ ವಾದವನ್ನು ಪ್ರತಿಪಾದನೆ ಮಾಡುವಂತಹವರು ಇದ್ದಾರೆ, ಯುನಿವರ್ಸಿಟಿ ಅಂದರೆ it is a campus of learning. ಪ್ರತಿಯೊಬ್ಬರೂ ಕೂಡ ತಾವು ನಂಬಿರತಕ್ಕಂತಹ ಸಿದ್ಧಾಂತವನ್ನು ಪ್ರಾಪಗೇಟ್ ಮಾಡಲಿಕ್ಕೆ they choose it; that is the most fertile area. Nothing wrong with it. Sympatheser ಹಂಟ್ ಮಾಡಬೇಕು ಅನ್ನ ತಕ್ಕದ್ದಲ್ಲಿ ಅವರನ್ನು crucify ಮಾಡಬೇಕು ಎನ್ನತಕ್ಕದ್ದಲ್ಲ. ಆ ರೀತಿಯ ಸ್ಟ್ಯಾಂಡ್ ಅನ್ನು ನಾವು ತೆಗೆದುಕೊಳ್ಳುವುದರಿಂದ ಅದನ್ನು ಮತ್ತಷ್ಟು ಹೆಚ್ಚು ಮಾಡಿ militants, militancy ಹೆಚ್ಚು ಮಾಡುತ್ತೇವೆ. ಆ ಒಂದು ಆಘಾತಕಾರಿಯಾದ ಕೆಲಸಕ್ಕೆ ಕೈ ಹಾಕಬಾರದು ಎನ್ನುವ ಮಾತನ್ನು ಹೇಳಿ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ, ಅವರು ರೈಸ್ ಮಾಡಿರುವಂತಹ ಬೇಸಿಕ್ ಇಷ್ಯೂಸ್ ಅನ್ನು ಅತ್ಯಂತ ಶೀಘ್ರದಲ್ಲಿ ನಿವಾರಣೆ ಮಾಡಲಿಕ್ಕೆ ನಾವು ಪ್ರಯತ್ನ ಮಾಡತಕ್ಕದ್ದು, ಪೊಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿರುವ ನಿಷ್ಠಾವಂತ ಅಧಿಕಾರಿಗಳನ್ನು ಚೂಸ್ ಮಾಡಿ ಇದಕ್ಕೊಂದು squad ಅನ್ನು ಮಾಡಿಕೊಂಡು ಅವರಿಗೆ ಸ್ಪೆಷಲ್ ಓರಿಯಂಟೇಷನ್ ಕೊಟ್ಟು ಡಿಪಾರ್ಟ್‌ಮೆಂಟನ್ನು ಮಾಡ್ರನೈಸ್ ಮಾಡುವಂತಹದ್ದು, field staff ಕಡೆಗೆ ಹೆಚ್ಚು ಒತ್ತು ಕೊಡುವಂತಹದ್ದು, ನಕ್ಸಲ್‌ವಾದದ ಬಗ್ಗೆ ಏನು ಅಭಿಪ್ರಾಯ ಕೊಡುತ್ತಾರೆ. ಉದಾಹರಣೆಗೆ ಅವರು ಹೆದರಿಸಿಲಿಕ್ಕೆ ಬಂದು ಊಟ ಕೇಳಿದರು, ದುಡ್ಡು ಕೇಳಿದರು, ಹಾಸ್ಟೆಲ್‌ಗೆ ನುಗ್ಗಿದರು ಕೆಲವು stray incidences ಅಲ್ಲಿ ಇಲ್ಲಿ ಆಗಿರಬಹುದು, ಆಗಿಲ್ಲ ಅಂತ ನಾನು ಹೇಳುವುದಿಲ್ಲ. ಆದ ಮಾತ್ರಕ್ಕೆ that is the contents of naxalism or naxalites ಎಂದು ಹೇಳತಕ್ಕಂಥದ್ದು ಅಪರಾಧವಾಗುತ್ತದೆ. ಮಾನ್ಯ ರೆಡ್ಡಿಯವರು ಹೇಳಿದಂತೆ ಅವರು they are misguided youth, ಅಂತ ತಿಳಿದುಕೊಳ್ಳಬಹುದು, ನಮಗೆ ತಾಳ್ಮೆ ಇದೆ, ಅವರಿಗೆ ತಾಳ್ಮೆ ಇಲ್ಲ, disgruntled ಆಗಿದ್ದಾರೆ disillusioned ಆಗಿದ್ದಾರೆ ಈ ವ್ಯವಸ್ಥೆ ವಿರುದ್ಧ ಹೋರಾಡಬೇಕು ಎಂದು ಬಂದೂಕನ್ನು ಕೈಯಲ್ಲಿಟ್ಟುಕೊಂಡಿದ್ದಾರೆ. ನಾವು ಅವರಿಗೆ ಇದು ಸರಿಯಲ್ಲ ಅಂತ ಹೇಳಬೇಕೆನ್ನುವ ಮಾತನ್ನು ಹೇಳಿ ನನಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಸನ್ಮಾನ್ಯ ಅಧ್ಯಕ್ಷರೆ, ನಕ್ಸಲೈಟ್ ಮತ್ತು ಉಗ್ರಗಾಮಿಗಳ ಸಮಸ್ಯೆಯಿಂದ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆಯೆಂದು ಇದುವರೆಗೆ ಚರ್ಚೆಯಾಗಿದೆ. ನಾನು ಒಂದು ವಿಷಯವನ್ನು ಸದನದ ಗಮನಕ್ಕೆ ತರಬಯಸುತ್ತೇನೆ.

ಬೆಂಗಳೂರಿನಲ್ಲಿ ಸಾಕಷ್ಟು ಐ.ಟಿ.ಕಂಪನಿಗಳು, ಕಾರ್ಖಾನೆಗಳು 24 ಗಂಟೆಗಳ ಕಾಲ ಕೆಲಸ ಮಾಡುತ್ತಿವೆ. ಇಂತಹ ಕಂಪೆನಿಗಳಲ್ಲಿ ಕೆಲಸ ಮಾಡುವಂತಹ ಕೆಲವು ಇಂಜಿನಿಯರ್ಸ್ ರಾತ್ರಿ ಹೊತ್ತು ಸ್ವಲ್ಪ ಲೇಟಾಗಿ ಮನೆಗೆ ವಾಪಸ್ಸಾಗುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ನಮ್ಮ ಪೋಲೀಸರು ಅವರನ್ನು ತಡೆದು ಹೆದರಿಸಿ, ಬೆದರಿಸಿ ಅವರಿಂದ ಹಣವನ್ನು ವಸೂಲು ಮಾಡುತ್ತಿದ್ದಾರೆ. ಇದು ನಮ್ಮ ಡಿ.ಜಿ.ಪಿ.ಯವರ ಗಮನಕ್ಕೆ ಬರಲಿಲ್ಲವೇ? ಇದು ಎಲ್ಲಿ ನಡೆಯುತ್ತದೆ ಎಂದರೆ ನಮ್ಮ ಶಾಸಕರ ಭವನದ ಹಿಂದೆ ಹಾಗೂ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳ ಮನೆಯ ಮುಂದಿನ ರಸ್ತೆಯಲ್ಲಿ ನಡೆಯುತ್ತಿದೆ. ರಾತ್ರಿ ಹೊತ್ತು ಮರ್ಯಾದಸ್ಥ ಮನೆತನದ ಹುಡುಗರನ್ನು ಹೆದರಿಸಿ ಬೆದರಿಸಿ ವಸೂಲು ಮಾಡುತ್ತಾರೆ, ಅವರೆಲ್ಲಾ ಐ.ಟಿ.ಕಂಪೆನಿಗಳಲ್ಲಿ ಕೆಲಸ ಮಾಡುವಂತಹ ಯುವ ಇಂಜಿನಿಯರ್ಸ್, ಅವರು ಮನೆಗೆ ಹೋಗುವಾಗ ಇಷ್ಟು ಹೊತ್ತಿನಲ್ಲಿ ಎಲ್ಲಿಗೆ ಹೊರಟಿದ್ದೀಯೇ ಯಾಕೆ ಬಂದಿರಿ ಎಂದು ಪ್ರಶ್ನಿಸುವುದು. ಅದಕ್ಕೆ ಅವರು ನಮ್ಮ ಕಂಪೆನಿಯಲ್ಲಿ ಸ್ವಲ್ಪ ಕೆಲಸ ಇತ್ತು ಅದಕ್ಕೆ ಲೇಟಾಗಿ ಮನೆಗೆ ಹೋಗುತ್ತಿದ್ದೇನೆಂದು ಹೇಳಿದರೆ ಅವರು ಕೇಳುವುದಿಲ್ಲ, ಇಲ್ಲ ನೀನು ಕುಡಿದಿರುವೆ ಅಂತ ಕೇಸ್ ಹಾಕುತ್ತೇವೆ, ಮತ್ತೊಂದು ಕೆಲಸ ಮಾಡಿರುವೆ ಅಂತ ಕೇಸ್ ಹಾಕುತ್ತೇವೆ ಎಂದು ಹೆದರಿಸಿದಾಗ ಅವರು ಮರ್ಯಾದೆಗೆ ಅಂಜಿ ಏನು ಕೇಳಿದರೂ ಕೊಟ್ಟು ಹೋಗುತ್ತಾರೆ. ಒಂದು ವೇಳೆ ಅವರಲ್ಲಿ ಸಫಿಷಿಯೆಂಟ್ ಹಣ ಇಲ್ಲದಿದ್ದಾಗ ಕೈಯಲ್ಲಿರುವ ಉಂಗುರ, ಕೊರಳಲ್ಲಿರುವ ಚೈನು, ಕೈಗಡಿಯಾರವನ್ನು ಕಸಿದುಕೊಳ್ಳುವುದು. ಇದು ದಿನನಿತ್ಯ ನಮ್ಮ ಬೆಂಗಳೂರಿನಲ್ಲಿ ನಡೆಯುವಂತಹ ಘಟನೆಯಾಗಿದೆ. ಹಾಗಾಗಿ ನಾನು ಡಿ.ಜಿ.ಪಿ. ಯವರಿಗೆ ಒಂದು ವಿನಂತಿ ಮಾಡುತ್ತೇನೆ ಏನೆಂದರೆ ರಾತ್ರಿ ಹೊತ್ತು ಅವರು ತಮ್ಮ ಕೆಂಪು ಲೈಟಿನ ವಾಹನವನ್ನು ಬಿಟ್ಟು ಒಂದು ಆಟೋ, ಮೋಟಾರ್ ಬೈಕ್‌ನಲ್ಲಿ ಹೋಗಿ ನೋಡಲಿ ನಾನು ಹೇಳಿದ್ದು ಸತ್ಯವೇ? ಅಥವಾ ಅಸತ್ಯವೇ ಎಂದು, ಈ ರೀತಿಯಾದರೆ ನಮ್ಮ ಕಾನೂನು ಸುವ್ಯವಸ್ಥೆ ಯಾವ ರೀತಿ ಸುಧಾರಿಸುತ್ತದೆ? ಪ್ರಾಮಾಣಿಕರನ್ನು, ದಕ್ಷರನ್ನು ಆರಿಸಿ ನೀವು ಪೋಸ್ಟಿಂಗ್ ಮಾಡಿದರೆ ಮಾತ್ರ ಪರಿಸ್ಥಿತಿ ಸುಧಾರಿಸುತ್ತದೆ. ಇವತ್ತು ಎಸ್.ಪಿ.ಲೆವಲ್‌ನ ಜಿಲ್ಲಾಧಿಕಾರಿಗಳು 1ನೇ ತಾರೀಖಿಗೆ ಪೊಲೀಸ್ ಸ್ಟೇಷನ್‌ಗಳಿಗೆ ತಿಂಗಳ ವಸೂಲಿ ಮಾಡುವುದಕ್ಕೆ ತಿರುಗಾಡಿದರೆ ನೀವು ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಯಾವ ರೀತಿ ಕಾಪಾಡಲಿಕ್ಕೆ ಸಾಧ್ಯವಾಗುತ್ತದೆ?

(ಈ ಹಂತದಲ್ಲಿ ಸಭಾಧ್ಯಕ್ಷರ ಪೀಠವನ್ನು ಮಾನ್ಯ ಎ.ಟಿ.ರಾಮಸ್ವಾಮಿಯವರು ಅಲಂಕರಿಸಿದರು)

ಮಾನ್ಯ ಅಧ್ಯಕ್ಷರೆ, ಇವತ್ತು ಸರ್ಕಾರಕ್ಕೆ ನಾನು ಒಂದು ಸಲಹೆಯನ್ನು ಮಾಡಲಿಕ್ಕೆ ಇಷ್ಟಪಡುತ್ತೇನೆ. ಆಗಲೇ ಮಾನ್ಯ ಜಯಪ್ರಕಾಶ್ ಹೆಗ್ಡೆ ಹಾಗೂ ರಮೇಶ್‌ಕುಮಾರ್ ಅವರು ಹೇಳಿದರು ಯಾರದೇ ರೆಕ್‌ಮೆಂಡೇಷನ್ ಮೇಲೂ ಮಾಡುವ ಅವಶ್ಯಕತೆ ಇಲ್ಲವೆಂದು ಹೇಳಿದರು. ಮಾಡುವುದು ಬೇಡ. ಆದರೆ ಒಂದು ಮಾತನ್ನು ಸರ್ಕಾರ ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಯಾವುದೇ ಶಾಸಕರು ಇರಲಿ, ಯಾವುದೇ ಸಚಿವರು ಇರಲಿ ಅವರ ಕ್ಷೇತ್ರದಲ್ಲಿ ಯಾವ ಜನಾಂಗದ ಅಧಿಕಾರಿಗಳು ಹೆಚ್ಚಾಗಿದ್ದಾರೆ ಆ ಜನಾಂಗದ ಅಧಿಕಾರಿಗಳನ್ನು ನೀವು ಪೋಸ್ಟಿಂಗ್ ಮಾಡಿದರೆ ಅಲ್ಲಿ ಲಾ ಅಂಡ್ ಆರ್ಡರ್ ವ್ಯವಸ್ಥೆ ಸರಿಯಾಗಿ ಉಳಿಯುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅಲ್ಲಿ ಬಹುಸಂಖ್ಯಾತ ಜನರಿರುವ ಕಾರಣದಿಂದ, ಈ ಓಟಿನ ಒಂದು ಅಂಜಿಕೆಗಾಗಿ ಅಂತಹ ಭ್ರಷ್ಟ ಅದಕ್ಷ ಅಧಿಕಾರಿಗಳನ್ನು

ನಾವು ಇಟ್ಟುಕೊಳ್ಳಬೇಕಾಗಿದೆ ಆದ್ದರಿಂದ ನಾವು ಈಗಾಗಲೇ ಸಲಹೆ ಮಾಡಿದಂತೆ ಉತ್ತಮ ಅಧಿಕಾರಿಗಳನ್ನು ಹುಡುಕಿ, ಗುರುತಿಸಿ ಪೋಸ್ಟಿಂಗ್ ಮಾಡಿದರೆ ಸ್ವಲ್ಪಮಟ್ಟಿಗೆ ಅವ್ಯವಸ್ಥೆಯನ್ನು ಕಡಿಮೆ ಮಾಡಬಹುದು. ಇನ್ನು ಕೆಲವು ಅಧಿಕಾರಿಗಳು ಮಟ್ಕಾ ಅಡ್ಡೆಗಳನ್ನು ಕೆಲವು ಗುಂಡಾ ಹುಡುಗರನ್ನು ಇಟ್ಟುಕೊಂಡು ನಡೆಸುತ್ತಿದ್ದಾರೆ, ಇಸ್ಪೀಟು ಕ್ಲಬ್‌ಗಳನ್ನು ಅವರೇ ನಡೆಸುತ್ತಿದ್ದಾರೆ, ಇದು ಸತ್ಯವಾದಂತಹ ಮಾತು, ಇದರಲ್ಲಿ ಏನೂ ಅಸತ್ಯವಿಲ್ಲ, ನಾವು ಎಷ್ಟೋ ಕಡೆ ಹೇಳಿದ್ದೇವೆ, ಸಂಬಂಧಪಟ್ಟವರ ಗಮನಕ್ಕೆ ತಂದರೂ ಏನೂ ಉಪಯೋಗವಾಗಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿಸುವುದೇನೆಂದರೆ, ಈ ದುಷ್ಟ, ದುರಹಂಕಾರಿ ಅಧಿಕಾರಿಗಳನ್ನು ಒಂದೇ ಸ್ಥಳದಲ್ಲಿ ಬಹಳ ವರ್ಷಗಳ ಕಾಲ ಕೆಲಸ ಮಾಡಲಿಕ್ಕೆ ಬಿಡದೆ ಅವರನ್ನು ಇಮ್ಮಿಡಿಯೇಟ್ ಆಗಿ ನಾನ್-ಎಕ್ಸಿಕ್ಯೂಟೀವ್ ಕಡೆ ಪೋಸ್ಟಿಂಗ್ ಕೊಡಿ, ಬೇರೆ ಬೇರೆ ಕಡೆ ಹೋದರೆ ಅವರಿಗೆ ಕಷ್ಟ ಗೊತ್ತಾಗುತ್ತದೆ. ಇಂತಹ ಕೆಲಸವನ್ನು ಸರ್ಕಾರ ಮಾಡಿದರೆ ಮಾತ್ರ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲಿಕ್ಕೆ ಆಗುತ್ತದೆ, ಜನರ ರಕ್ಷಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆ, ಇಲ್ಲದೇ ಹೋದರೆ ಇದು ಯಾವ ಕಾಲಕ್ಕೂ ಸರಿ ಮಾಡಲಿಕ್ಕೆ ಆಗುವುದಿಲ್ಲ, ಆದ್ದರಿಂದ ಮೊದಲು ಭ್ರಷ್ಟರನ್ನು ಗುರುತಿಸಿ ಅವರನ್ನು ಹೊರಗೆ ಹಾಕುವಂತಹ ಕೆಲಸವನ್ನು ಸರ್ಕಾರ ಮಾಡಲಿ ಎಂದು ಸಲಹೆ ಹೇಳಿ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.) : ಮಾನ್ಯ ಛೇರ್ಮನ್‌ರವರೆ, ಎರಡೇ ನಿಮಿಷದಲ್ಲಿ ನಕ್ಸಲೈಟ್ ಬಗ್ಗೆ ಯಾವ ರೀತಿ ನಾವು ಅವರನ್ನು ಸೇವ್ ಮಾಡಬೇಕೊ ಅಥವಾ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕೊ ಅನ್ನುವುದರ ಬಗ್ಗೆ ಹೇಳುತ್ತೇನೆ. ನಕ್ಸಲೈಟ್‌ರವರಿಂದ ಬಹಳ ತೊಂದರೆ ಯಾರಿಗೆಂದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ, ಅವರು ಯಾವ ಗುರಿಯಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಯೋಚಿಸುತ್ತಾರೆ. ನಕ್ಸಲೇಟ್ಸ್ ಬಹಳ ತೊಂದರೆ ಕೊಟ್ಟರೆ ಮುಖ್ಯಮಂತ್ರಿಗಳು ಏನು ಮಾಡುತ್ತಿದ್ದಾರೆಂದು ಹೇಳುತ್ತಾರೆ. ಒಂದು ವೇಳೆ ಅವರ ಮೇಲೆ ಕ್ರಮ ಕೈಗೊಂಡರೆ ಎನ್‌ಕೌಂಟರ್ ಮಾಡಿಬಿಟ್ಟರು ಅಂತ ಹೇಳುತ್ತಾರೆ. ಮುಖ್ಯಮಂತ್ರಿಯವರಿಗಿಂತ ನಕ್ಸಲೈಟ್ ಪೋಸ್ಟ್ ಈಜಿಯಾಗಿದೆ. ಸುಮ್ಮನಿದ್ದರೆ ಮುಖ್ಯಮಂತ್ರಿಗಳಿಗೆ ಕ್ರಮ ತೆಗೆದುಕೊಳ್ಳಬೇಕು ಅಂತ ಹೇಳುತ್ತಾರೆ. ಕ್ರಮ ಕೈಗೊಂಡರೆ ಅವರನ್ನು ಕರೆದು, ಕುಳಿತು, ಅವರೊಂದಿಗೆ ಮಾತನಾಡಿ ಏನಾದರೊಂದು ವ್ಯವಸ್ಥೆ ಮಾಡಬೇಕೆಂದು ಹೇಳುತ್ತಾರೆ. ಈಗ ಅವರಿಗೆ ಲ್ಯಾಂಡ್ಸ್ ಕೊಟ್ಟರೆ ನಕ್ಸಲೈಟ್ ಬಿಡುತ್ತೇವೆ ಅಂತ ಹೇಳುತ್ತಾರೆ ಅವರು ಬಂದು ಕೇಳಿದಾಗ ಕೊಡಿ ಬೇಕಾದಷ್ಟು ಲ್ಯಾಂಡ್ಸ್ ಇದೆ, ನಾಳೆ ಬಂದು ಅವರು 50-80 ಕೊಡಿ ಅಂತ ಕೇಳುತ್ತಾರೆ, ಆಗ ಏನು ಮಾಡುತ್ತೀರಿ? ಇವನ್ನೆಲ್ಲಾ ಚಿಂತನೆ ಮಾಡಿಕೊಂಡು you must take appropriate action on this. Who is naxalite? What for they are naxalites? ಅವರು ಯಾವ ರೀತಿಯಿಂದ ನಕ್ಸಲೈಟ್ ಆಗಿದ್ದಾರೆ ಈಗ ಮಾಜಿ ಸ್ಪೀಕರ್ ಮಾನ್ಯ ರಮೇಶ್‌ಕುಮಾರ್ ಹೇಳಿದರು, ಪೊಲೀಸರಾಗಲೀ, ಅಧಿಕಾರಿಗಳಾಗಲೀ ನಮ್ಮೂರಿನಲ್ಲಿ ಇಲ್ಲ, ಅವರುಗಳು ಬೇರೆ ಕಡೆಯಿಂದ ಬರುವುದರಿಂದ they are taking it easy etc. Of course, it is true, or may not be true. But ನನ್ನ ಅಭಿಪ್ರಾಯವೇನೆಂದರೆ ನಕ್ಸಲೈಟ್ಸ್ ನಿಜವಾಗಿಯೂ ಸರ್ಕಾರಕ್ಕೆ ತೊಂದರೆ ಮಾಡಬೇಕೆಂದು ಪ್ರಯತ್ನಿಸುತ್ತಿದ್ದಾರೆಯೇ? ಯಾರಾದರೂ ಶಾಸ್ತ್ರವನ್ನು

ನೋಡಿದ್ದೀರಾ? ನಕ್ಸಲೈಟ್ಸ್ ಅವರದು ವಾಟ್ ಈಸ್ ದಿ ರಿಯಾಲಿಟಿ ಅಂತ ಕೇಳಿದ್ದೀರಾ? ಕೆಲವರು ಹೇಳುತ್ತಾರೆ. I read it in the paper also. Some Judge said: ಅವರು ಕಾಡಿನಲ್ಲಿ ಏತಕ್ಕೆ ಇರಬೇಕು, ಸಿಟಿಯಲ್ಲಿ ಬಂದು ಇರಬಹುದು ತಾನೇ, ಕಾಡಿನಿಂದ ಏಕೆ ಹೋರಾಟ ಮಾಡಬೇಕು ಎಂದು ಕೇಳುತ್ತಾರೆ. Already, we have naxalites here. ಯಾವನಾದರೂ ಒಬ್ಬ ಅಂಗಡಿಯಲ್ಲಿ ಸಾಮಾನ್ಯ ನೌಕರನಿಗೆ ಸಂಬಳ ಕೊಟ್ಟಿಲ್ಲವೆಂದರೆ, ಅವನು ಹೋಗಿ ದಾದಾಗಿರಿ ಮಾಡುವನ ಹತ್ತಿರ ಹೇಳಿದರೆ, ಅವನ ಯಜಮಾನ ಹೋಗುತ್ತಾನೆ. ಏನ್ರಿ ನೀವು ಹೀಗೆ ಮಾಡಿದಿರಿ, ಇನ್ನೂರು ರೂಪಾಯಿಗೋಸ್ಕರ ಇವನು ಅವನನ್ನು ಥ್ರೆಟನ್ ಮಾಡಿ, 20 ಸಾವಿರ ರೂ. ಕೊಡಿ ಎಂದು ಕೇಳುತ್ತಾನೆ. Already we have here. ಅವನಾದರೂ ಕೊನೇಪಕ್ಷ ಅರಣ್ಯದಲ್ಲಿ ಕುಳಿತುಕೊಂಡು ಈ ತರಹ ಕೆಲಸ ಮಾಡಬೇಕೆಂದು ಹೇಳುತ್ತಾನೆ. ಜೊತೆಗೆ ನಾವು ಏನು ಹೇಳುತ್ತೇವೆ, ನಕ್ಸಲೈಟ್ಸ್ ಎಂದರೆ, ಅವರು ಸ್ಯಾಂಡಲ್ ವುಡ್‌ನ್ನೆಲ್ಲಾ ಕಟ್ ಮಾಡುತ್ತಾರೆ ಎಂದು ಹೇಳುತ್ತಾರೆ. ನನ್ನ ಊರಿನಲ್ಲಿ, ನನ್ನ ಎಸ್.ಪಿ. ಮನೆಯಲ್ಲೆ ಸ್ಯಾಂಡಲ್‌ವುಡ್ ಕಟ್ ಮಾಡಿದ್ದಾನೆ. ಅವನನ್ನು ಕಳ್ಳ ಎಂದು ಹೇಳುತ್ತೀರಾ, ನಕ್ಸಲೈಟ್ಸ್ ಎಂದು ಹೇಳುತ್ತೀರಾ? In my city, in my SP's house, they cut off. what you see then? ಸ್ಯಾಂಡಲ್ ವುಡ್ ಕಟ್ ಮಾಡುವವರೆಲ್ಲಾ ನಕ್ಸಲೈಟ್‌ಗಳಲ್ಲ. ಯಾವನು ಸ್ಯಾಂಡಲ್ ವುಡ್ ಕಟ್ ಮಾಡುವುದೇ ಇಲ್ಲ, ಅವನು ನಕ್ಸಲೈಟ್ ಅಲ್ಲ. These are all not segregated in this. Naxalites are depressed persons. ಯಾವ ಕಾರಣದಿಂದ depressed person ಆಗುತ್ತಾನೆ? Take it this way. ಯಾವುದೇ ಒಂದು ಕಾರಣದಿಂದ ಅವನು ಪೊಲೀಸ್ ಸ್ಟೇಷನ್‌ಗೆ ಹೋಗುತ್ತಾನೆ. ನಿಜವಾಗಿಯೂ ಕೆಲವು ಪೊಲೀಸ್ ಆಫೀಸರು ಇರಬಹುದು ಅಥವಾ ಇಲ್ಲವೋ. But, in my life, in my constituency, it is very difficult to find out such good officers. ಅವರದು ಏನು ಐಡಿಯಾ ಎಂದರೆ, ಅವನನ್ನು ಕೇರ್‌ಲೆಸ್ ಆಗಿ, ನೆಗ್ಲೆಟ್ ಮಾಡಿ, ಮಾಡಿ he will get depressed ಕೊನೆಗೆ, ಅವನು ಯಾರ ಮೇಲೆ ಚಾಲೆಂಜ್ ಮಾಡುತ್ತಾನೆ ಎಂದರೆ ಈ ಪೊಲೀಸಿನವರಿಗೆ ಪಾಠ ಕಲಿಸಬೇಕೆಂದು ನಕ್ಸಲೈಟ್ ಆಗಿ, ಕೊನೆಗೆ ಅವನು ಸರ್ಕಾರದ ಮೇಲೆಯೇ ಬರುತ್ತಾನೆ. ಒಬ್ಬ ಮಂತ್ರಿಯನ್ನು ಕಿಡ್ನಾಪ್ ಮಾಡಿದರೆ ನನಗೆ ಪಾಪ್ಯುಲಾರಿಟಿ ಆಗುತ್ತೆ, ಒಬ್ಬ ಮುಖ್ಯಮಂತ್ರಿಗೆ ಬಾಂಬ್ ಇಟ್ಟರೆ ನನಗೆ ಪಾಪ್ಯುಲಾರಿಟಿ ಆಗುತ್ತೇನೋ, ಅವತ್ತೇ ಇವರು ನಮ್ಮನ್ನು ಕರೆದು ಮಾತನಾಡುವುದು, ಇಲ್ಲವಾದರೆ ಅವರು ನಮಗೆ ಬೆಲೆ ಕೊಡುವುದಿಲ್ಲವೆಂಬ ಅಭಿಪ್ರಾಯ ಅವರಿಗೆ ಬಂದಿದೆ. ಅಂಥವರಿಗೆ ಬೆಳೆಸುವುದು ಯಾರೆಂದರೆ, the Police Department, no doubt. ನೀವು ಏನು ಮಾಡುತ್ತೀರೆಂದರೆ, ನಕ್ಸಲೈಟ್‌ಗಳನ್ನು ಹಿಡಿಯುವುದಕ್ಕೆ ಕಳುಹಿಸುತ್ತಾರೆಂದರೆ, ಆ ಪೊಲೀಸ್ ಬಾಯಲ್ಲಿ ಏನು ಬರುತ್ತದೆಂದರೆ, ನಮಗೆ ಪನಿಷ್‌ಮೆಂಟ್‌ಗೆ ಹಾಕುತ್ತಾರೇನೋ ಎಂಬ ಸುದ್ದಿ ಇದೆ, ಆ ಫಾರೆಸ್ಟ್‌ಗೆ ಹಾಕುತ್ತಾರೆ ಎಂದರೆ ಅದು ಪನಿಷ್‌ಮೆಂಟೇ? ಸಿಟಿ ಕಮೀಷನರ್ ಆಗಬೇಕು, ಸಿಟಿ ಅಸಿಸ್ಟೆಂಟ್ ಕಮೀಷನರ್ ಆಗಬೇಕು, ಸಿಟಿಯಲ್ಲಿರತಕ್ಕ ಒಳ್ಳೆಯ ಪೊಲೀಸ್ ಸ್ಟೇಷನ್‌ಗಳಲ್ಲಿ ಹಾಕಬೇಕು, ಯಾರು ಯಾರಿಗೆ ಆಸಕ್ತಿ ಇದೆಯೆಂದು ನಮ್ಮ ಮುಖ್ಯಮಂತ್ರಿಗಳು ಒಂದು ಪ್ರಕಟಣೆ ಮಾಡಲಿ, 99% police officers will put an application. ಆ ತರಹದ ನಕ್ಸಲೈಟ್ಸ್‌ಗಳನ್ನು

ಕಂಟ್ರೋಲ್ ಮಾಡುವುದಕ್ಕೂ ಸಬ್ ಇನ್‌ಸ್ಪೆಕ್ಟರ್‌ನಿಂದ ಹಿಡಿದು ಹೈಯರ್ ಆಫೀಸರ್‌ವರೆಗೂ ಯಾರು ವಿಲ್ಲಿಂಗ್‌ನಲ್ಲಿ ಹೋಗುತ್ತೇವೆಂದು ಅಪ್ಲಿಕೇಷನ್ ಕೊಡಿ ಎಂದು ಕೇಳಿ. ಅವತ್ತೇ ಇವರು ನನ್ನ ಮಕ್ಕಳು ಓದುತ್ತಿದ್ದಾರೆ. My children studying here. ನನಗೆ ಹೀಗೆ ಆಗಿದೆ, ಹಾಗೆ ಆಗಿದೆ ಎಂದು ಹೇಳುತ್ತಾರೆ. That is their administration. ನಕ್ಸಲೈಟ್ಸ್‌ನ್ನು ಕರೆದು ನಾನು ಮಾತನಾಡುತ್ತೇನೆಂದು ಏನು ಮುಖ್ಯಮಂತ್ರಿಗಳು ಹೇಳಿದ್ದಾರೆ, that is reasonable. You have to speak to them. ಯಾರನ್ನು ಕರೆಯುತ್ತೀರಿ? How do you know, who is the leader? How do you know that he is a Naxalite? ಅವರ ಗುಂಪಿನಲ್ಲಿ ಇನ್ನೂರು ಜನ ಇರಬಹುದು. ಒಬ್ಬರು ನಕ್ಸಲೈಟ್ ಹೆಸರಿನಲ್ಲಿ ಕ್ರಿಮಿನಲ್ ಮೈಂಡ್ ಇಟ್ಟುಕೊಳ್ಳುತ್ತಾನೋ ಯಾವನಾದರೂ ದೊಡ್ಡವರನ್ನು ಸಾಯಿಸಬೇಕು ಎಂದು ಮೈಂಡ್‌ನಲ್ಲಿ ಇರುವವನೂ ಈ ನಕ್ಸಲೈಟ್ ಆಗಿ ತೆಗೆದುಕೊಳ್ಳುತ್ತೀರಾ ಇಲ್ಲವೇ vengeance ಮೇಲೆ ತೆಗೆದುಕೊಳ್ಳುತ್ತೀರಾ, ಇಲ್ಲವೇ ಇವರನ್ನು ಕ್ರೈಮ್ ಎಂದು ತೆಗೆದುಕೊಳ್ಳುತ್ತೀರಾ? How you are going to segregate? But, give an opportunity to the Naxalites to know what their demands, reforms, socioeconomic development ಕೇಳುತ್ತಾರೋ, ಹೌದು ನಿಜವಾಗಿಯೂ ಕೇಳುತ್ತಾರೋ, ಜಮೀನು ಕೇಳುತ್ತಾರೋ ಕೊಡಿ. ಆಮೇಲೆ ನಮಗೆ ಬೌಂಡರಿ ಹಾಕಿಕೊಡಿ ಎಂದು ಕೇಳುತ್ತಾನೆ, ಕೊಡಿ. ನೀವು ಇಲ್ಲಿರುವ ಜನಕ್ಕೆ ಏಕೆ ಕೊಡುವುದಿಲ್ಲ? ಇಲ್ಲಿರುವವರಿಗೇ ಮನೆ ಕೊಡುವುದಿಲ್ಲ. ಇಲ್ಲಿರುವವರಿಗೇ ಅರ್ಕಾವತಿ ಕ್ಲಿಯರ್ ಮಾಡಿಲ್ಲ. ಇನ್ನು ಫಾರೆಸ್ಟ್‌ನಲ್ಲಿರುವವರಿಗೆ ಹೇಗೆ ಕ್ಲಿಯರ್ ಮಾಡುತ್ತೀರಿ? ಅದು ಒಂದು. ಎರಡನೆಯದು, ಚಿಕ್ಕಮಗಳೂರಿನಲ್ಲಿ ಸರ್ಕಾರದವರು ಏನು ಮಾಡಿದ್ದಾರೆಂದರೆ, ಅಲ್ಲಿ ವಿಲೇಜ್‌ನಲ್ಲಿ ಇರುವವರೆಲ್ಲರೂ ಫಾರೆಸ್ಟ್‌ನಲ್ಲಿದ್ದಾರೆ. They are living in the forest. As a safety measure, they have shifted. What for? ಕೇರಳದಲ್ಲಿರುವವರು ಯಾರೋ ಇವರನ್ನು ಉಪಯೋಗ ಮಾಡಿ ಸ್ಯಾಂಡಲ್ ವುಡ್‌ನ್ನೆಲ್ಲಾ ಕಟ್ ಮಾಡುತ್ತಾರೆಂದು ಹೇಳಿದರೆ, What about your Conservators? Why that Department? What about your Forest Officer? ಒಬ್ಬ ಅಸಿಸ್ಟೆಂಟ್ ಫಾರೆಸ್ಟ್ ಆಫೀಸರೋ, ಒಬ್ಬರು ಫಾರೆಸ್ಟ್ ಆಫೀಸರೋ ಡಬಲ್ ರೋಡ್ ಹಾಕುವುದಕ್ಕೋ, my constituency work, I am telling.

ಶ್ರೀ ಎಸ್.ಎಲ್.ಧರ್ಮೇಗೌಡ (ಬೀರೂರು) : ಮಾನ್ಯ ಸಭಾಧ್ಯಕ್ಷರೆ, ನನ್ನದೊಂದು ಚಿಕ್ಕ ಸಬ್‌ಮಿಷನ್, ಆಮೇಲೆ ಮಾನ್ಯ ಸದಸ್ಯರು ಮುಂದುವರೆಸಬಹುದು. ಇವತ್ತು ನಾವು ನಕ್ಸಲೈಟ್ಸ್ ಬಗ್ಗೆ ಮಾತನಾಡುತ್ತಿದ್ದೇವೆ. ಪ್ರಾಯಶಃ ಮಾತನಾಡಿದಂಥ ಪ್ರತಿಯೊಬ್ಬ ಸದಸ್ಯರೂ ಕೂಡ, Naxalism has risen because of police failure. ಎಂದು ತಾವು ಮಾತನಾಡುತ್ತಿದ್ದೀರಿ. ಪೋಲೀಸ್ ಫೇಲ್ಯೂರ್ ಒಂದು ಕಡೆ ಇರಬಹುದು. ಆದರೆ Naxalism has deep-rooted problem. ಒಬ್ಬ ಗಂಧದ ಮರ ಕದ್ದ, ಲೋಕಲ್ ಕಳ್ಳನಿಗಿಂತ, ಹಳ್ಳಿಯಲ್ಲಿರುವ, ಕಾಡಿನಲ್ಲಿರುವ ನಕ್ಸಲೈಟ್ಸ್‌ನ ಹೋಲಿಕೆ ಮಾಡುವುದು ಭಾರಿ ತಪ್ಪು. ಕಾರಣ ಎಂದರೆ, ನಕ್ಸಲಿಸಂ ಬೆಳೆದಂಥ ಸಿದ್ಧಾಂತ ಎಂದರೆ, 'haves and have-nots'.

'Have-nots' ಗೆ 'haves' ನಿಂದ ಕಿತ್ತು ಕೊಡುವುದು. ಅದಕ್ಕೂ ಜೊತೆಗೆ ನಮ್ಮ ಲೋಕಲ್ ಸಿಟಿ ಕ್ರಿಮಿನಲ್‌ಗೂ ಬಹಳ ವ್ಯತ್ಯಾಸ ಇದೆ. ಹಾಗಾಗಿ, this is not a problem connected only with failure of police officers. ಅಲ್ಲ, ಇದು ಇಡೀ ರಾಷ್ಟ್ರದ ಸಮಸ್ಯೆ. ರಾಷ್ಟ್ರದ ಸಮಸ್ಯೆ ಎಂದರೆ, ಇದು ಎಲ್ಲಿಂದ ಪ್ರಾರಂಭವಾಗುತ್ತೆ. ಈಗ ಮಾನ್ಯ ಶ್ರೀರಾಮರೆಡ್ಡಿಯವರು, ರಮೇಶ್‌ಕುಮಾರ್‌ರವರು ಮಾತನಾಡುತ್ತಾ ಇದ್ದರು. It started from Naxalbari. It started with Kanu Sanyal and Majumdar. ಅವರೂ ಕೂಡ, ಅವರದೇ ಆದಂಥ ಸೈದ್ಧಾಂತಿಕವಾದ ಹೋರಾಟದಲ್ಲಿ ಯಾವ ಯಾವುದೋ ದಿಕ್ಕಿನಲ್ಲಿ ಹೋಗಿ ಮಾವಿಸ್ಟೋ ಮತ್ತು ಚೈನಾ ಪಾಲೀಸಿನೋ ಅಥವಾ ಸೋವಿಯತ್ ಯೂನಿಯನ್ ದಿಕ್ಕಿನಲ್ಲಿ ಹೋಗಬೇಕೆಂದು ಬೆಳೆದಂಥ ಸಿದ್ಧಾಂತ. ಕೆಲವರಿಗೆ ಏನಾಗಿದೆ, ಈ ನಕ್ಸಲಿಸಂನಲ್ಲಿ ಎರಡು ದಿಕ್ಕು ಇದೆ. ಮಾನ್ಯ ರಾಜೇಂದ್ರರವರು ಗಮನಿಸಬೇಕು. ಒಂದು ಅರ್ಬನ್ ನಕ್ಸಲಿಸಂ. ಈ ಅರ್ಬನ್ ನಕ್ಸಲಿಸಂ ಎಂದರೆ ಕಳ್ಳರು, they are taking a form. ಒಂದು ನಕ್ಸಲಿಸಂ ಅಂದರೆ ಏನೋ ಒಂದು ಸಿದ್ಧಾಂತ ಅಂತ. Actually they are all thieves. ಆದರೂ ಕೂಡ ಅದಕ್ಕೆ ನಕ್ಸಲಿಸಂ ಎಂದು ಹೆಸರು ಕೊಟ್ಟುಕೊಳ್ಳುತ್ತಾರೆ. ಇನ್ನು ಕೆಲವರು ಹಳ್ಳಿಗಾಡು ಪ್ರದೇಶಗಳಲ್ಲಿ ಸೇರಿಕೊಂಡು ಲೋಕಲ್ ಇಷ್ಯೂಸನ್ನು, they are picking up local issues. ಚಿಕ್ಕಮಗಳೂರಿನಲ್ಲಿ ಏಕೆ ನಕ್ಸಲಿಸಂ ಬರಬೇಕು ಹೇಳಿ? ಲೋಕಲ್ ಇಷ್ಯೂಸ್ ಇಟ್ಟುಕೊಂಡು, ಅವರದೇ ಆದಂಥ ಬೇಳೆ ಬೇಯಿಸಿಕೊಳ್ಳುವುದಕ್ಕೆ they are trying to give a local colour to it. ಹಾಗಾಗಿ, ತಾವು ಏನು ಮಾತನಾಡುತ್ತಿದ್ದೀರಿ, but my name is not listed. ಆದರೂ ಕೂಡ ನಾನು ನಿಮಗೆ ಹೇಳಲೇಬೇಕೆಂದು ಕೊಂಡಿದ್ದೇನೆ. Naxalism to-day cannot be justified at any cost. ಸರ್ಕಾರ ಯಾವುದೇ ಕಾರಣಕ್ಕೂ ಕೂಡ ಅವರ ಜೊತೆಗೆ ಮಾತನಾಡತಕ್ಕ ಅಗತ್ಯ ಇಲ್ಲ. They need not negotiate. Naxalism has to be put down. Even it is said that there is human face. But, that is not correct. ಇಲ್ಲಿ ನಾವೆಲ್ಲಾ ಕುಳಿತುಕೊಂಡು ನಕ್ಸಲೈಟ್ಸ್ ಬಗ್ಗೆ ಸಿಂಪಥಿಟಿಕ್ ಆಗಿ ಮಾತನಾಡಿದರೆ it will have different repercussions ಎಂಬುದು ನನ್ನ ಅನಿಸಿಕೆ.

ಶ್ರೀ ಎಸ್.ರಾಜೇಂದ್ರನ್ : ಮಾನ್ಯ ಛೇರ್ಮನ್‌ರವರೆ, in what way my friend has taken it I did not know. I am explaining what is Naxalite. How it is to be? Who is going to be interrogated? How you are going to assess? ಅದರ ಬಗ್ಗೆ ನಾನು ಮಾತನಾಡುತ್ತಿದ್ದೆ. ಚಿಕ್ಕಮಗಳೂರು ಏಕೆ ಉದಾಹರಣೆ ಕೊಟ್ಟೆ ಎಂದರೆ, ಅಲ್ಲಿ ವಾಸ ಮಾಡಿಕೊಂಡಿರುವವರನ್ನು ನೀವು ಕಟ್ ಮಾಡುತ್ತೀರಿ, ಷಿಫ್ಟ್ ಮಾಡಿ ಎಂದು ಸರ್ಕಾರ ಹೇಳಿದ್ದಾರೆಯೇ? What is the Forest Department doing? It is their duty. ಅವರು ಕೆಲಸ ಮಾಡುವುದಿಲ್ಲ. ಸುಮ್ಮನೆ ನಾಟಕ ಮಾಡುತ್ತಿದ್ದಾರೆ. lapse in the administration ಎಂದು ನಾನು ಹೇಳುತ್ತಾ ಇದ್ದೇನೆ. ಫಾರೆಸ್ಟ್ ಆಫೀಸರು

ಏನು ಮಾಡುತ್ತಾರೆಂದರೆ, ಆ ಮರಗಳನ್ನು ಕಟ್ ಮಾಡಿ ಎಂದರೆ, ಸಾರ್ ಅದರ ವ್ಯಾಲ್ಯುಯೇಷನ್ 1 ಲಕ್ಷ 70 ಸಾವಿರ ರೂ. ಎಂದು ಹೇಳುತ್ತಾರೆ. ಅದಕ್ಕೆ 2 ಲಕ್ಷ ರೂ. ಇರಲಿ 50 ಲಕ್ಷ ರೂ. ಇರಲಿ ನಮಗೇನು? ರಸ್ತೆ ವಿಸ್ತರಣೆ ಮಾಡಬೇಕು. ಕಟ್ ಮಾಡಿ ಎಂದು ಹೇಳಿದರೆ, ಅವನು ಹೇಳುವುದೇನು ನೋಡಿ. ಅದು ಇಷ್ಟು ಬೆಲೆ ಎಂದು ಹೇಳುತ್ತಾನೆ. ಅದು ಎಷ್ಟಾದರೂ ಆಗಲೀ, ನೀವು ಕಟ್ ಮಾಡಿ ಸೇಲ್ ಮಾಡಿ ಎಂದು ಹೇಳಿದರೆ, ಅದಕ್ಕೆ ಟೆಂಡರ್ ಕರೆಯಬೇಕು ಎಂದು ಹೇಳುತ್ತಾರೆ. ಕೊಡಿ, ಅದಕ್ಕೆ 20 ದಿವಸ ಆಗುತ್ತೆ ಸ್ವಾಮಿ. ರೋಡ್ ಮಾಡುವವನು ಸುಮ್ಮನೇ ಇರುತ್ತಾನೆಯೇ? ಇದು ಒಂದು ಕಡೆ. ಇದೇ ಇವರು ಕಟ್ ಮಾಡಿಕೊಂಡು ಹೋದರೆ, ಅದು ಬಿದ್ದುಹೋಗಿದ್ದು ಸ್ವಾಮಿ ಎಂದು ಹೇಳುತ್ತಾರೆ. ನೋಡಿ, ಲೂಟಿ ಮಾಡುವುದು ಹೇಗೆ? ಆ ತರಹ ಅಲ್ಲಿಯೂ ಆಗುತ್ತಿದೆ. Forest Department is there. ನಿಜವಾಗಿಯೂ, ಯಾರು ಇಲ್ಲೀಗಲ್ ಆಗಿ ಇನ್‌ವಾಲ್ವ್ ಆಗುತ್ತಾದೆಂಬ ಸತ್ಯಾಂಶವನ್ನು ಹೇಳಬೇಕಲ್ಲವೇ. ಇಡೀ ಹಳ್ಳಿಯವರೆಲ್ಲಾ ಷಿಫ್ಟ್ ಮಾಡಿಕೊಳ್ಳಿ, ನೀವೆಲ್ಲಾ ತಪ್ಪು ಮಾಡಿದ್ದೀರಿ ಎಂದರೆ, You are not giving an opportunity for them i.e., freedom of living in this state. You are not controlling. But, ನಕ್ಸಲೈಟ್ಸ್ ಮೇಲೆ ಸಿಂಪಥಿ ಇದೆಯೇ ಇಲ್ಲವೇ ಎಂಬ ಬಗ್ಗೆ ನನ್ನ ಅಭಿಪ್ರಾಯ ಅಲ್ಲ. Who are the real Naxalites? Call them and speak to them as to what is their demand ನಮಗೆ ಲ್ಯಾಂಡ್ ಇಲ್ಲ ಸ್ವಾಮಿ, ಊಟಕ್ಕೆ ವ್ಯವಸ್ಥೆ ಇಲ್ಲಸ್ವಾಮಿ, ಅದರಿಂದ ನಾನು ಹೋರಾಟ ಮಾಡುತ್ತೇನೆಂದರೆ, provide. ಅದನ್ನೂ ತೆಗೆದುಕೊಂಡು ಇರತಕ್ಕ ಜಮೀನನ್ನು ಕಂಟ್ರೋಲ್ ಮಾಡಬೇಕು ಎಂದು ಹೇಳಿದರೆ, it is arrogancy. It shows his power. ಸಿಂಪಥಿ ಒಂದು ಕಡೆ, ಸಿಂಪಥಿ ಎಂದು ಹೇಳಿಕೊಂಡೇ ಒಬ್ಬ ಹೇಳುತ್ತಾನೆ. ಕೈಯಿಲ್ಲದವನು ರೌಡಿ ನಂಬರ್ 'ಒನ್' ಕೈಯಿಲ್ಲ, ಒಂದು ಕೈಯಲ್ಲಿ ಗನ್ ಇಟ್ಟುಕೊಂಡು ಹೊಡೆಯುತ್ತಾನೆ. ಪಾಪ ಅವನಿಗೆ ಕೈ ಇಲ್ಲವೆಂದು ಹೇಳುತ್ತೀರಾ? That person is there. He is in the rowdy list. ಅವನಿಗೆ ಒಂದು ಕೈ ಇಲ್ಲ, ಏತಕ್ಕೆ ಇಲ್ಲ. ಅವನ ಕೈಯನ್ನು ಕತ್ತರಿಸಿರುವುದು. ಆದ್ದರಿಂದ, ಅವನು ಒಂದು ಗ್ಯಾಂಗ್ ಇಟ್ಟುಕೊಂಡು ಗನ್‌ನಲ್ಲಿ ಹೊಡೆಯುತ್ತಿದ್ದಾನೆ. ಅವನು ಹೋಗಿ, ನೋಡಿ ನಾನು ಹೊಡೆಯುವುದಕ್ಕಾಗುತ್ತದೆಯೇ, ನನಗೆ ಕೈ ಇಲ್ಲವೆಂದರೆ, ಪಾಪ ಅವನ ಮೇಲೆ ಏಕೆ ಸುಳ್ಳು ಹೇಳುತ್ತೀರಿ ಎಂದು ಹೇಳುತ್ತೀರಾ? These are all government duty. We are supporting you. In what way? ಈಗ ಪೊಲೀಸ್ ಆಫೀಸರ್ಸ್ ಮೇಲೆ ನಾವು ಪೂರ್ತಿ ಚಾರ್ಜಸ್ ಮಾಡುವುದಕ್ಕಾಗುವುದಿಲ್ಲ. ನನಗೂ ಭಯ. They are waiting eagerly. ಇವರು ಅಲ್ಲಿ ಏನೇನೋ ಭಾಷಣ ಮಾಡಲಿಲ್ಲವೇ, ಇವರ ಮೇಲೆ ಫಿಕ್ಸ್ ಮಾಡಿಬಿಡಿ ಎಂದು ಹೇಳಿದರೆ, ನಾನೇನು ಎಂದು ಹೇಳಿದರೆ, ನಾನೇನು ಮಾಡುವುದಕ್ಕಾಗುತ್ತದೆ? ಕೊನೆಗೆ ನಾನು ಜಡ್ಜ್ ಹತ್ತಿರ ಹೋಗಿ ನಾನು ಅದನ್ನು ಪ್ರೂವ್ ಮಾಡಬೇಕು. ಆಮೇಲೆ ಅದೊಂದು ಐದು ವರ್ಷ ಆಗುತ್ತೆ. Mental torture. ಕೊನೆಗೆ ನಾನು ಏನಾಗುತ್ತೇನೆಯೋ. depressed ಒಂದು ನಾಲ್ಕೈದು ಸಾರಿ ಈ ರೀತಿ ಆದರೆ, I will become a Naxalite. ನಕ್ಸಲೈಟ್ಸ್‌ಗೆ ಇರುವ ಗೌರವ, ಅದರಲ್ಲಿ ಯಾರು ಪವರ್‌ಫುಲ್ ಆಗಿದ್ದಾರೆ, ಅವನಿಗಿರತಕ್ಕ ಗೌರವ ಈಗ ಮಂತ್ರಿಗಳಿಗೂ ಇರುವುದಿಲ್ಲ.

ಅವರು ಬಂದರೆ, ಅಷ್ಟು ಗೌರವ ಕೊಡುತ್ತಾರೆ. These things government should take very carefully. ಏನು ಮುಖ್ಯಮಂತ್ರಿಗಳು ಹೇಳಿದರು, ಅವರನ್ನು ಕರೆದು ಮಾತನಾಡುತ್ತೇನೆಂದು, ಅದು ಸತ್ಯಾಂಶದಿಂದ ಹೇಳಿದ ಮಾತುಗಳೇ. You have to speak to them. You have to give an opportunity for them. ಏನು ಅವರ ಡಿಮಾಂಡ್, ಅದು ಮುಖ್ಯಮಂತ್ರಿಗಳಿಗೆ ಗೊತ್ತಾಗಬೇಕು. ಮುಖ್ಯಮಂತ್ರಿ ಹತ್ತಿರ ಆ ಮೀಡಿಯೇಟರುಗಳು ಏನು ಮಾಡುತ್ತಾರೆ, ಸ್ವಾಮಿ ; ಇವನು ನಾಲ್ಕೈದು ಕೊಲೆ ಮಾಡಿಬಿಟ್ಟಿದ್ದಾನೆ, ಕೊಲೆ ಮಾಡುವುದಕ್ಕೆ ಇವನೂ ಹೋಗಿದ್ದಾನೆ. ಅದರಿಂದ ತಪ್ಪಿಸಿಕೊಳ್ಳುವುದಕ್ಕೆ ಅವನು ಸೇಫ್ಟಿಯಾಗಿದ್ದಾನೆ. Because of his efficiency he is doing that. ಆದರೆ ಹೆಸರು ಏನು ಬರುತ್ತದೆ. ಇವನು ಮಾಡಿಬ್ಬಾನೆ ಎಂದು ಆಗುತ್ತದೆ. How do we know? In the name of encounter, ಇನ್ನೋಸೆಂಟ್‌ಗಳನ್ನು ಶೂಟ್ ಮಾಡಿದರೆ ಏನಾಗುತ್ತದೆ? ಅವರು ಅವರ ಜೊತೆಯಲ್ಲಿ ಹೋಗಿದ್ದಾರೆ ಸ್ವಾಮಿ. To escape his skin, they put the blame on that side. There fore, you find out. It is not only in Karnataka. Universally it is there. In Andhra Pradesh, what happened? ಫಾರ್ಮರ್ ಚೀಫ್ ಮಿನಿಸ್ಟರ್‌ಗೆ ಏನು ಮಾಡಿದರು? ಬಾಂಬ್ ಇಟ್ಟಿದ್ದರು. ಯಾರು ಇಟ್ಟಿದ್ದರು? ಪರ್‌ಪಸ್ ಆಗಿ ಮಾಡಿದ್ದರಾ. ಇಲ್ಲ ಇನ್ನೋಸೆಂಟ್ ಆಗಿ ಮಾಡಿದ್ದರಾ? ಇಲ್ಲಾ ಪಬ್ಲಿಕ್‌ಸಿಟಿಗೆ ಮಾಡಿದ್ದರಾ? That examination, we are not bothering. It may affect an ordinary person or it may affect our Chief Minister also.. Call them. Speak to them. Be firm. But, ಕಾನ್‌ಷಿಯಸ್ ಇರಬೇಕು. ಅಧಿಕಾರಿಗಳು ಕಾನ್‌ಷಿಯಸ್ ಇದ್ದರೆ ಸತ್ಯವಾಗಲೂ ನಕ್ಸಲೈಟ್ಸ್ ಬೆಳೆಯುವುದಿಲ್ಲ. You don't have that consicence. ಕಾನ್‌ಷಿಯಸ್ ಕೆಲಸ ಮಾಡಬೇಕು. ಒಂದು ಸಿಂಪಲ್ ಸ್ಮಾಲ್ ವರ್ಕ್‌ಗೆ ಹೋದರೆ 20 ಸಲ ಹೋಗಬೇಕು ನಾವು ಗುಲಾಮ್ ಸೆಲ್ಯೂಟ್ ಹೊಡೆಯಬೇಕು. So, the Chief Minister should give more attention to the Legislators. ಲೆಜಿಸ್‌ಲೇಟರ್ ಯಾರಾದರೂ ಒಂದು ಚಾರ್ಜ್ ತೆಗೆದುಕೊಂಡು ಬಂದರೆ ಆ ಅಧಿಕಾರಿ ಮೇಲೆ You must suspend them and throw them out. ಆಗ ಅವರಿಗೆ ಭಯ ಆಗುತ್ತದೆ. ಅವರಿಗೇನೆಂದರೆ ಬಿಡ್ರಿ ಈ ಎಂ.ಎಲ್.ಎ. ಬಿಟ್ಟರೆ ನನಗೆ ಹತ್ತು ಎಂ.ಎಲ್.ಎ. ಗೊತ್ತಿದೆ. ನನಗೆ ಮಂತ್ರಿ ಗೊತ್ತಿದೆ ಎಂಬ ಅಹಂಕಾರ. They are negligent only. To-day extra rowdyism, extra-ordinary rowdyism, powerful rowdyism is there. ಇದೆಲ್ಲಾ ಬೆಳೆಸುವುದೇ, to be frank, majority of the police officers No dobut, no doubt. ನೀವು ಅವರಿಗೆ ಕೊಡಿ, ಅವನು ಸುಳ್ಳು ಹೇಳುತ್ತಾನೆ ನಿಮ್ಮ ಶಾಸಕರೇ ಸ್ಮಗಲಿಂಗ್‌ನಲ್ಲಿದ್ದಾನೆ ಸಾರ್ ಅಂತಾರೆ. You have Intelligence. You find out from your Intelligence, whether it is true or not. If he gives false information, you neck him out. Number of graduates are there.

Number of students are there. Number of qualified people are there in this country, in this state. No, there is no part. ನಾವು ಅದು ಮಾಡುವುದಿಲ್ಲ. They are taking advantage. ಈಗ ನಾನು ಏನಾದರೂ ಜೋರಾಗಿ ಹೇಳಿಬಿಟ್ಟರೆ ಒಂದು ಅಧಿಕಾರಿ ಮೇಲೆ ಅಥವಾ ನಾನು ಕಂಪ್ಲೇಂಟ್ ಮಾಡಿದರೆ ಸಿ.ಎಂ.ಹತ್ತಿರ, ಸಿ.ಎಂ. ಅದರ ಡಿಟೇಲ್ಸ್‌ನ್ನು ಕೇಳುತ್ತಾರೆ ಏನ್ರಿ ಅದರ ವಿಚಾರಣೆ ಮಾಡಿ ಕೊಡಿ ಅಂತ. ಅವರು ಐ.ಪಿ.ಎಸ್. ಆಫೀಸರ್ ಏನು ಇನ್‌ಫರ್ಮೇಷನ್ ಕೊಡುತ್ತಾರೋ ಅದನ್ನೇ ನಮ್ಮ ಸಿ.ಎಂ. ಕೊಡುವುದು, ಸಿ.ಎಂ. ಏನು ಮಾಡುತ್ತಾರೆ, ಇಲ್ರಿ ರಾಜೇಂದ್ರನ್ ನೀವು ತಪ್ಪು ಮಾಡಿದ್ದೀರಿ, ಇಲ್ಲಾ ರೀ ನಮಗೆ ರಿಪೋರ್ಟ್ ಬಂದಿದೆ ಅನ್ನುತ್ತಾರೆ. No, it is not. You should have 90% faith about your legislators. If your legislator is giving wrong information to you, if your legislator is doing wrong things to you, then you take action on them also. ಆದ್ದರಿಂದ ನಕ್ಸಲೈಟ್ಸ್, really they are depressed people, no doubt. What for they are depressed? there is no proper food for them. No land is available. No house is available. 10 ಜನ ರಿಯಲಿಟಿಕ್ ಆಗಿ ಫೈಟ್ ಮಾಡಿದರೆ ಯಾವನೋ ಒಂದು ಎರಡು ಜನ ನಿಜವಾಗಲೂ ಕ್ರಿಮಿನಲ್ ಆಕ್ಟಿವಿಟೀಸ್ ಮಾಡಬಹುದು, ಆದರೆ majority of naxalites are fighting for the right cause. ಕೆಲವು ಸಂದರ್ಭದಲ್ಲಿ ನನಗೂ ಮನಸ್ಸಿನಲ್ಲಿ ಬರಬಹುದು ಛೇ,ಛೇ ಪಾಲಿಟಿಕ್ಸ್‌ಗಿಂತ ನಕ್ಸಲೈಟ್ಸ್ ಆಗಬೇಕಪ್ಪ ಅವತ್ತೇ ಈ ಅಧಿಕಾರಿಗಳಿಗೆ ಒಳ್ಳೆಯ ಪಾಠ ಸಿಕ್ಕುವುದು ಅಂತ it is in my mind. ಅದು ಮನಸ್ಸಿನ ಮೇಲೆ ಬಂದರೆ, you cannot predict. Definitely I may go there also. ಕಾರಣ ಏನು? Depressed. ಆ ಡಿಪ್ರೆಸ್ಡ್‌ಗೆ ಕಾರಣ ಏನು? ಅಧಿಕಾರಿಗಳು ಅವರವರ ಕೆಲಸಗಳನ್ನು ಇನ್‌ಟೈಮ್‌ಗೆ ಮಾಡಿದರೆ, there will not be Naxalites. ಅವರು ವೈರ್ ಹಾಕಿಕೊಳ್ಳುವುದಕ್ಕೆ ಪರ್ಮೀಶನ್ ಕೊಡುವುದು. ಅವರು ಬಾಂಬ್ ಹಾಕುವುದಕ್ಕೂ ಪರ್ಮೀಶನ್ ಕೊಡುವುದು. ಎಲ್ಲಾ ಪೂರ್ತಿ ಸೆಕ್ಯುರಿಟಿ ಚೆನ್ನಾಗಿದೆ ಅಂತ ಹೇಳುವುದು. ಇಷ್ಟೆಲ್ಲಾ ಅವನು ಹಾಕಿದ್ದಾನೆ ಎಲ್ಲಿ ನಿಮ್ಮ ಸೆಕ್ಯುರಿಟಿ ಚೆನ್ನಾಗಿದೆ? You think about it. ನಾವು ಬಹಳ ಸ್ಟ್ರಿಕ್ಟ್ ಆಗಿದ್ದೇವೆ. ಎಲ್ಲಾ ವಾಚ್ ಮಾಡಿದ್ದೇವೆ? ಎಲ್ಲಿ ವಾಚ್ ಮಾಡಿದ್ದೀರಿ? ಅವನು ಎಲ್ಲಾ ಬಾಂಬ್ ಹಾಕಿ ಡಮಾರ್ ಎಂದು ಶಬ್ದ ಬರುವ ಟೈಮ್‌ನಲ್ಲಿ ಎಲ್ಲಾ ಸೆಕ್ಯುರಿಟಿ ರೌಂಡ್ ಮಾಡುವುದು. What is the use? ಆದ್ದರಿಂದ, it is not only in the forest, even in the local areas also, in the name of Naxalites or Dadas, that is there. ಇನ್ ಸೈಡ್ ಆಫ್ ದಿ ಫಾರೆಸ್ಟ್ ಅಂದರೆ ಅವರು ನಕ್ಸಲೈಟ್ಸ್ ಆಗುತ್ತಾರೆ. If they come outside the forest, ಅವರು ರೌಡಿ ನಂಬರ್ ಒನ್ ಆಗುತ್ತಾರೆ. ಅಷ್ಟೇ ಬೇರೆ ಏನೂ ಇಲ್ಲ. ಆದ್ದರಿಂದ ನಕ್ಸಲೈಟ್ಸ್‌ಗೆ ಏನೇನು ಪರಿಹಾರ ಮಾಡಬೇಕೋ ಮಾಡಲಿಕ್ಕೆ ಚೀಫ್ ಮಿನಿಸ್ಟರ್ ಅವರನ್ನು ಕರೆದು ಮಾತನಾಡಿ; You give a reformed life to them. give a renascence to them. Give a re-birth to them. Definitely,

they will co-operate with you. ಚರಿತ್ರೆಯಲ್ಲಿ ನಿಮ್ಮ ಹೆಸರು ಇರುತ್ತದೆ. ನಕ್ಸಲೈಟ್ಸ್‌ನ್ನು ಕನ್‌ವಿನ್ಸ್ ಮಾಡಿ ಈಗ ನಮ್ಮ ಪುರಾಣ ಕಥೆಗಳಲ್ಲಿ ಬಹಳ ದೊಡ್ಡ ರೌಡಿಯಾಗಿರುವವರು ವಾಲ್ಮೀಕಿಯಾಗಿರುವವರು, ಬಹಳ ಕೆಟ್ಟ ಕೆಲಸ ಮಾಡಿ ಆಗ ರಾಮಾಯಣ ಬರೆದಿದ್ದು ಈ ಪುರಾಣ ಕಥೆಗಳು ಹೇಳುವುದಕ್ಕಿಂತ try this present Purana. Call all the Naxalites. Ask their demands. Give your suggestions. If they convert, give life to them. If they do not convert, take action according to the law. Law will take its own course always. ಅದರ ಉಪಯೋಗ ಆಮೇಲೆ ಮಾಡಿ. ಇವರನ್ನು ಖಂಡಿತವಾಗಿ ಮುಖ್ಯಮಂತ್ರಿಯವರು ಕರೆದು ನೀವು ಮಾತನಾಡಿ. ಅವರಿಗೆ ಒಂದು ಒಳ್ಳೆಯ ಲೈಫ್ ಕೊಡಬೇಕು ಎಂದು it is my suggestion which I am giving on the floor of the House. I thank the chair for giving this opportunity, and conclude.

† **ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು)** : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಾನೂನು ಸುವ್ಯವಸ್ಥೆ ಬಗ್ಗೆ ಸಾಕಷ್ಟು ವಿವರವಾದ ಚರ್ಚೆ ನಡೆದಿದೆ. ಬಹಳಷ್ಟು ಜನ ಹಿಂದಿನಿಂದ ಸರ್ಕಾರವನ್ನು ಸಮರ್ಥನೆ ಮಾಡಿಕೊಳ್ಳುತ್ತಿದ್ದವರು ಹೇಳುತ್ತಿದ್ದುದು ಏನೆಂದರೆ ಈ ಸರ್ಕಾರದ ಕಾಲ್ಗುಣ, ಮುಖ್ಯಮಂತ್ರಿಗಳ ಕಾಲ್ಗುಣ ಬಹಳ ಚೆನ್ನಾಗಿದೆ, ಇವರು ಮುಖ್ಯಮಂತ್ರಿಯಾದ ನಂತರ ಬಹಳ ಚೆನ್ನಾಗಿ ಮಳೆ ಬೆಳೆ ಆಯಿತು, ಒಳ್ಳೆಯ ಬೆಳೆ ಆಯಿತು, ವೀರಪ್ಪನ್ ಹತ್ಯೆ ಕೂಡ ಆಯಿತು. ಅಂತ ಹೇಳಿ, ಆದರೆ ಇವತ್ತು ಈ ರಾಜ್ಯದಲ್ಲಿ ತಲೆದೋರಿರತಕ್ಕಂಥ ಕಾನೂನು ಸುವ್ಯವಸ್ಥೆಗೆ ಯಾರ ಕಾಲ್ಗುಣ ಕಾರಣ ಅಂತ ಹೇಳಿ ಯಾರೂ ಸಮರ್ಥನೆ ಮಾಡಿಕೊಳ್ಳುತ್ತಿಲ್ಲ, ಇದಕ್ಕೆ ಕಾರಣ ಏನು ಅಂತ ಹೇಳಿ. ಇವತ್ತು 2003 ರಿಂದ 2004ರವರೆಗೂ 6617 ರಷ್ಟು ಮಹಿಳೆಯರ ಮೇಲೆ ದೌರ್ಜನ್ಯವಾಗಿದೆ ಅಂತ ಹೇಳಿ ಪೊಲೀಸ್ ಇಲಾಖೆ ವರದಿ ಹೇಳುತ್ತದೆ. ಬೆಂಗಳೂರು ಒಂದರಲ್ಲಿಯೇ ಎರಡು ವರ್ಷದಲ್ಲಿ 718 ಕೊಲೆ, 619 ದರೋಡೆ 456 ಸರ ಅಪಹರಣ, 1079 ಹಗಲು ಹೊತ್ತಿನಲ್ಲಿ ಕಳ್ಳತನ, 4452 ರಾತ್ರಿ ಹೊತ್ತಿನಲ್ಲಿ ಕಳ್ಳತನ, 8343 ವಾಹನಗಳ ಕಳವು ನಡೆದಿದೆ ಅಂತ ಹೇಳಿ ಪೊಲೀಸ್ ಕೇಸ್ ದಾಖಲಾಗಿರತಕ್ಕಂಥ ವರದಿ ಇವತ್ತು ಹೇಳುತ್ತಿದೆ. ಹಾಗಾಗಿ ಮಾನ್ಯ ಸಭಾಧ್ಯಕ್ಷರೇ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಎನ್ನತಕ್ಕಂಥಾದ್ದು ಇವತ್ತು ಸಂಪೂರ್ಣ ನೆಲ ಕಚ್ಚಿ ಕುಸಿದು ಹೋಗಿದೆ. ಇವತ್ತು ರಿಯಲ್ ಎಸ್ಟೇಟ್ ಮಾಫಿಯಾ ನಾವೇನು ಮುಂಬೈನಲ್ಲಿ ಕೇಳುತ್ತಿದ್ದೆವು ಅದು ಇವತ್ತು ಬೆಂಗಳೂರಿಗೆ ಕಳೆದ ಮೂರು ವರ್ಷದಿಂದ ಕಾಲಿಟ್ಟು ಈಗ ಒಂದು ರೀತಿಯಲ್ಲಿ ವಿಜೃಂಭಿಸುವಂತಹ ಸ್ಥಿತಿಯಲ್ಲಿದೆ. ಯಾರು ಯಾವಾಗ ಬೇಕಾದರೂ ಅಪಹರಣ ಮಾಡಿಕೊಂಡು ಹೋಗುತ್ತಾರೆ ಬ್ಲಾಕ್‌ಮೇಲ್ ಮಾಡುತ್ತಾರೆ, ಹಣ ಕೀಳುತ್ತಾರೆ, ಮತ್ತು ಭೂಗತ ಜಗತ್ತು ಪರೋಕ್ಷವಾಗಿ ಈ ರಿಯಲ್ ಎಸ್ಟೇಟ್ ಮಾಫಿಯಾವನ್ನು ಕರ್ನಾಟಕದಲ್ಲಿ ಬೆಂಗಳೂರಿನಲ್ಲಿ ನಿಯಂತ್ರಿಸುತ್ತಿದೆ ಅಂತ ಹೇಳಿದರೆ ತಪ್ಪಿಲ್ಲ. ಇದಲ್ಲದೇ ಇವತ್ತು ಹೊಸ ಹೊಸ ಗೇಮ್‌ಗಳು ಆವಿಷ್ಕಾರಗೊಂಡಿವೆ. ಅವೆಲ್ಲಾ ಕ್ರಿಮಿನಲ್‌ಗಳಿಗೆ ಒಂದು ರೀತಿ ಪರೋಕ್ಷವಾಗಿ ಅವರ ಒಂದು ಚಟುವಟಿಕೆಗಳ ತಾಣವಾಗಿ ಪರಿವರ್ತನೆಯಾಗುತ್ತಿವೆ. ಅದೇನೋ ಸಿಲ್ಲಿಗೇಮ್ ಅಂತೆ. ಡಿಲ್ಲಿಗೇಮ್ ಅಂತೆ, ಚಕ್ರದ ಗೇಮ್ ಅಂತೆ, ವಿಕೃತ ಹಮಾಮ್ ಬಾತ್‌ಗಳು ಮತ್ತು ಅದಲ್ಲದೇ ವೇಶ್ಯಾವಾಟಿಕೆ ಕೇಂದ್ರಗಳು, ಮಟ್ಕಾ, ಲೈವ್ ಬ್ಯಾಂಡ್, ಇವೆಲ್ಲದರ

ಹಿಂದುಗಡೆ ಯಾರು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಬೇಕು ಆ ಅಧಿಕಾರಿಗಳು ಮತ್ತು ಕೆಲವು ರಾಜಕಾರಣಿಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪಾಲುದಾರಿಕೆ ಹೊಂದಿ ಕಾರಣ ಆಗುತ್ತಾ ಅಪರಾಧಿ ಲೋಕದ ತಾಣವನ್ನಾಗಿ ರಾಜ್ಯವನ್ನು ಪರಿವರ್ತನೆ ಮಾಡಲಿಕ್ಕೆ ಕಾರಣೀಭೂತರಾಗುತ್ತಿದ್ದಾರೆ. ಇದಲ್ಲದೇ ಸುದೈವವೋ ದುರ್ದೈವವೋ ನಾವು ಕೇಳಿದ್ದೆವು, ಒಂದು ಸತ್ಯ ಹರಿಶ್ಚಂದ್ರನ ನಾಟಕ ಮಹಾತ್ಮ ಗಾಂಧೀಜಿಯವರ ಜೀವನದ ಮೇಲೆ ಪರಿಣಾಮ ಬೀರಿ ಆತ ಸತ್ಯಸಂದನಾಗಲಿಕ್ಕೆ ಕಾರಣವಾಯಿತು ಅಂತ ಹೇಳಿ. ದಿನಾ ರಾತ್ರಿ ಆ ಕ್ರೈಮ್ ಸ್ಟೋರಿ, ಮತ್ತೆ ಕ್ರೈಮ್ ಡೈರಿ ಸೀರಿಯಲ್‌ಗಳು ಅದೆಷ್ಟು ಜನ ಈ ರೀತಿ ಕ್ರಿಮಿನಲ್ಸ್‌ಗಳನ್ನು ತಯಾರು ಮಾಡುತ್ತಿದೆ ಅಂತ ಹೇಳಿ. ಒಂದು ನಾಟಕ ಅಷ್ಟು ಪರಿವರ್ತನೆ ಮಾಡಲು ಕಾರಣವಾಗುವುದಾದರೆ ಈ ಕ್ರೈಮ್ ಡೈರಿ ಮತ್ತು ಕ್ರೈಮ್ ಸ್ಟೋರಿಗಳನ್ನು ನೋಡತಕ್ಕಂಥ ಜನಸಾಮಾನ್ಯರ ಮೇಲೆ ಯಾವ ಮಟ್ಟದ ಕ್ರಿಮಿನಲ್ ಚಟುವಟಿಕೆ ಬೆಳೆಸತಕ್ಕಂಥ ವಾತಾವರಣ ಆಗುತ್ತಿದೆ? ಇಷ್ಟೆಲ್ಲಾ ಆಗುತ್ತಿದ್ದರೂ ಕೂಡ ಇದನ್ನು ನಿಯಂತ್ರಿಸತಕ್ಕಂಥ ಯಾವುದೇ ರೀತಿಯ ಚಟುವಟಿಕೆ ಕಾರ್ಯಕ್ರಮ ಇಲ್ಲಿ ಹಾಕಿಕೊಳ್ಳುತ್ತಿಲ್ಲ. ಇದು ಒಂದು ರೀತಿ ಕ್ರಿಮಿನಲ್‌ಗಳ ತಾಣವಾಗಿ ಪರಿವರ್ತನೆಯಾಗುತ್ತಿದೆ. ನಕ್ಸಲೈಟ್ಸ್ ಚಟುವಟಿಕೆ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯಿತು. ದುರ್ದೈವದ ಸಂಗತಿ ಅಂದರೆ ನಾನು ಅಂದುಕೊಂಡಿದ್ದೆ ನಮ್ಮೆಲ್ಲಾ ಹಿರಿಯರಿಂದ ನಮಗೆ ಸಾಕಷ್ಟು ಮಾರ್ಗದರ್ಶನ ಸಿಗುತ್ತದೆ ಅಂತ ಅಂದುಕೊಂಡಿದ್ದೆವು. ಆದರೆ ಇದೊಂದು ರೀತಿ ಬಹಳಷ್ಟು ಜನ ಮಾತನಾಡುತ್ತಾ ಮಾತನಾಡುತ್ತಾ ಪರೋಕ್ಷವಾಗಿ ನಕ್ಸಲೈಟ್ಸ್ ಚಟುವಟಿಕೆಗಳನ್ನು ಸಮರ್ಥನೆ ಮಾಡತಕ್ಕಂಥ ವಾದವನ್ನೇ ಮುಂದಿಟ್ಟು ಬಹುಶಃ ಮುಂದಿನ ದಿನಗಳಿಗೆ ನಿಮಗೇನಾದರೂ ಪರಿಹಾರ ಆಗಬೇಕು ಅಂದರೆ ಬಂದೂಕು ಹಿಡಿಯಿರಿ ಎನ್ನುವಂತಹ ಪ್ರೇರಣೆ ಕೊಡುತ್ತಿದ್ದಾರೋ ಏನೋ ಎನ್ನುವಂತಹ ಭೀತಿ ನನಗೆ ಅನಿಸಿತು. ನಕ್ಸಲೈಟ್ಸ್ ಅಂದರೆ ಅದು ಒಂದು ರೀತಿ ಸಾಮಾಜಿಕ ಸಿದ್ಧಾಂತದ ಹೆಸರಿನಲ್ಲಿ ಸಿಹಿ ಗುಳಿಗೆಯಲ್ಲಿ ಸಿಹಿ ಲೇಪನದ ಅಡಿಯಲ್ಲಿ ಭಯೋತ್ಪಾದನೆ ಮಾಡುತ್ತಿರತಕ್ಕಂಥ ಒಂದು ಭಯೋತ್ಪಾದಕರೇ ಹೊರತು ಇನ್ನು ಸಾಮಾಜಿಕ ಸಾಮರಸ್ಯ, ದಲಿತ ಬಡವ, ಇವೆಲ್ಲವೂ ಕೂಡ ಒಂದು ಮುಖವಾಡಗಳು ಮಾತ್ರ ವಸ್ತು ಸ್ಥಿತಿಯ ಮುಖವಾಡಗಳು. ನಾನು ಚಿಕ್ಕಮಗಳೂರಿನ ಮಲೆನಾಡು ಭಾಗದಿಂದ ಬಂದವನು. ಅಲ್ಲಿ ನಮ್ಮ ಭಾಗದಲ್ಲಿ ಹೇಳಿಕೊಳ್ಳತಕ್ಕಂಥ ಸಮಸ್ಯೆಗಳು ನಿರ್ಮಾಣವಾಗಿದ್ದವು ಎನ್ನುವಂತಾದ್ದು ಇಲ್ಲ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಒಕ್ಕಲೆಬ್ಬಿಸುತ್ತಾರೆ ಎನ್ನುವಂತಹ ಭೀತಿ ತಲೆದೋರಿದ್ದು ನಿಜ. ಆದರೆ ಸರ್ಕಾರ ಮಧ್ಯೆ ಪ್ರವೇಶ ಮಾಡಿ ಯಾರನ್ನೂ ಬಲಾತ್ಕಾರವಾಗಿ ಒಕ್ಕಲೆಬ್ಬಿಸುವುದಿಲ್ಲ ಪ್ಯಾಕೇಜ್ ಘೋಷಣೆ ಮಾಡಿ ಯಾರು ಪ್ಯಾಕೇಜನ್ನು ಒಪ್ಪಿಕೊಳ್ಳುತ್ತಾರೆ ಅವರು ಬೇಕಾದರೂ ಹೋಗಬಹುದು, ಎನ್ನುವಂತಹ ಮಾತನ್ನು ಹೇಳಿದ ನಂತರವೂ ಕೂಡ ಮತ್ತೆ ಅದು ನಕ್ಸಲೈಟರಿಗೆ ತಾಣವಾಗಿ ಬೆಳೆಯುತ್ತಿದೆ ಅಂದರೆ ಇದರಲ್ಲಿ ಸಮಸ್ಯೆ ಮುಖ್ಯ ಕಾರಣವಲ್ಲ. ಅಲ್ಲಿರತಕ್ಕಂಥ ಅರಣ್ಯ ಮತ್ತು ನಾಲ್ಕು ಜಿಲ್ಲೆಗಳ ಗಡಿ ಭಾಗ, ಅಡಗಿಕೊಳ್ಳುವುದಕ್ಕೆ ತಮ್ಮ ಅಡ್ಡ ನಿರ್ಮಾಣಕ್ಕೆ ತಮ್ಮ ಒಂದು ಆಕಾಡವನ್ನು ಬೆಳೆಸಿಕೊಳ್ಳುವುದಕ್ಕೆ ಆ ಒಂದು ನಕ್ಸಲ್ ದಂಡಕಾರಣ್ಯ ರಾಷ್ಟ್ರದ ಸ್ಥಾಪನೆಗೆ ಅದೊಂದು ರೀತಿ ಕೋಟೆಯಾಗುತ್ತದೆ ಎನ್ನುವ ಕಾರಣದಿಂದ ಚಿಕ್ಕಮಗಳೂರನ್ನು ತಮ್ಮ ಕೋಟೆ ಮಾಡಿಕೊಳ್ಳುವುದಕ್ಕೆ ಇವತ್ತು ನಕ್ಸಲೀಯರು ಅಲ್ಲಿ ತಲೆ ಎತ್ತಿದ್ದಾರೆ. ಅದು ಸಾಮಾಜಿಕ ಕಾರಣದಿಂದ ಇನ್ನೊಂದು ಕಾರಣದಿಂದ ಬಂದಿದ್ದಾರೆ ಎಂಬುದು ತಪ್ಪು ಮಾಹಿತಿಯಾಗುತ್ತದೆ, ಯೋಚನೆ ಮಾಡಬೇಕು. ಇವತ್ತು ಬರೀ ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ ರಾಜ್ಯಕ್ಕೆ ಮಾತ್ರ ಇದು ಸೀಮಿತವಾಗಿ ಬೆಳೆದು ಬಂದಿದೆ ಎಂದಲ್ಲ. ಪಕ್ಕದ ನೇಪಾಳದಿಂದ

† ಮಾನ್ಯ ಸದಸ್ಯರು ಭಾಷಣವನ್ನು ಪರಿಷ್ಕರಿಸಿರುತ್ತಾರೆ.

ಹಿಡಿದು ರಾಷ್ಟ್ರದ 15ಕ್ಕೂ ಹೆಚ್ಚು ರಾಜ್ಯಗಳಲ್ಲಿ, 153ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ, ಈ ಒಂದು ನಕ್ಸಲ್ ಚಟುವಟಿಕೆ ಇವತ್ತು ಪ್ರಾರಂಭವಾಗಿದೆ. ಹಾಗಾಗಿ ಸರ್ಕಾರವು ಇದನ್ನು ಸಾಮಾಜಿಕ ಸಮಸ್ಯೆ ಎಂದು ಮಾತ್ರ ಪರಿಗಣಿಸದೆ ಇದೊಂದು ರಾಷ್ಟ್ರವಿರೋಧಿ ಕೃತ್ಯ, ಭಯೋತ್ಪಾದನಾ ಚಟುವಟಿಕೆ ಎಂದು ಪರಿಗಣಿಸಬೇಕು. ಹೇಳುವಾಗೆಲ್ಲಾ ನಮ್ಮ ಹಿರಿಯರಾದ ಮಾನ್ಯ ರಮೇಶ್‌ಕುಮಾರ್ ಮತ್ತಿತರರು ಮಾತನಾಡುತ್ತಿದ್ದರು. ಅದು ಹೇಗಿತ್ತೆಂದರೆ, ರಾವಣ ಬಹಳ ದೈವ ಭಕ್ತ, ನಿಜ. ರಾವಣ ದೈವಭಕ್ತ ನಲ್ಲವೆಂದು ಯಾರೂ ಎರಡನೇ ಮಾತನಾಡುತ್ತಿಲ್ಲ. ಆದರೆ ರಾಮ ರಾವಣರ ಯುದ್ಧ ಏತಕ್ಕೆ ಆಯಿತು, ಎಂದು ನಾವು ಅಪರಾಧದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಸೈದ್ಧಾಂತಿಕವಾಗಿ ಹೋರಾಟ ಮಾಡುತ್ತೇವೆಂದು ಎಕೆ 47 ಹಿಡಿದು ಕಾನೂನು ಸುವ್ಯವಸ್ಥೆಗೆ ಭಂಗ ತರುವುದು ಯಾವ ಸೈದ್ಧಾಂತಿಕ ಹೋರಾಟ ಎಂಬುದನ್ನು ಆಲೋಚನೆ ಮಾಡಬೇಕಾಗುತ್ತದೆ. ಇದರ ಅಡಿಯಲ್ಲಿ, ಸಾಮಾಜಿಕ ಸಮಸ್ಯೆಯ ನೆಪದಲ್ಲಿ ತಾವು ಮಾಡುವ ಅಪರಾಧಗಳನ್ನು ಮುಚ್ಚಿ ಹಾಕಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ರಾಜಕೀಯವಾಗಿ ಅಧಿಕಾರ ಗಳಿಸುವುದು ಕೂಡ ಈ ಕೋವಿ ಹಿಡಿದು ಹೋರಾಟ ಮಾಡುವವರ ಧ್ಯೇಯವಾಗಿದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅದನ್ನು ಬಲವಾಗಿ ನಂಬಿಕೊಂಡೆ, ಅವರಿಗೆ ಯಾವುದೇ ಶಾಂತಿ ಸಂಧಾನ ಬೇಕಾಗಿಲ್ಲ. ಎಕೆ 47 ಬಳಸಿ ಭಯೋತ್ಪಾದನೆ ಮಾಡುವುದೇ ಅವರ ಗುರಿಯಾಗಿದೆ. Political power grows out of the barrel of a gun.

ಈ ಬೆಳವಣಿಗೆಯನ್ನು ಸರ್ಕಾರ ರಾಜ್ಯದ ಕಾನೂನು ಸುವ್ಯವಸ್ಥೆಗೆ ಒದಗಿರುವ ಆಪತ್ತು ಎಂದು ಪರಿಗಣಿಸಬೇಕು. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಇದೊಂದು ತಾತ್ಕಾಲಿಕ ಸಮಸ್ಯೆ ಎಂದು ಪರಿಗಣಿಸುವುದಾದರೆ, ಶಿವನಿಂದ ಮೂರು ವರಗಳನ್ನು ಪಡೆದ ಭಸ್ಮಾಸುರನ ಅಂತ್ಯಕ್ಕೆ ಶಿವಪಟ್ಟಂತ ಕಷ್ಟವನ್ನು ಸರ್ಕಾರ ಪಡಬೇಕಾಗುತ್ತದೆ, ಆದಾಗದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕು. ನಕ್ಸಲೈಟ್ ಚಟುವಟಿಕೆಯಿಂದಾಗಿ ಈ ದೇಶದಲ್ಲಿ 2004 ರವರೆಗೆ ಸುಮಾರು ಇಪ್ಪತ್ತೆರಡು ಸಾವಿರ ನಾಗರೀಕರ ಹತ್ಯೆ, 515 ಪೊಲೀಸರ ಹತ್ಯೆ, 16927 ಜನರು ಮಿಸ್ ಆಗಿ ನಕ್ಸಲೈಟ್ ಚಟುವಟಿಕೆಯಲ್ಲಿ ಸೇರಿಕೊಂಡಿದ್ದಾರೆ. 1994–2000 ಈ ಆರು ವರ್ಷಗಳ ಅವಧಿಯಲ್ಲಿ 1042 ಜನ ಹತ್ಯೆಯಾಗಿದ್ದಾರೆ 1991–2001 ಈ ಹತ್ತು ವರ್ಷಗಳಲ್ಲಿ 4847 ಮಹಿಳೆಯರ ಮೇಲೆ ದೌರ್ಜನ್ಯದ ಪ್ರಕರಣಗಳಾಗಿವೆ. ಈ ನಕ್ಸಲರಿಗೆ ವಿದೇಶಿ ಭಯೋತ್ಪಾದನಾ ಸಂಘಟನೆಗಳಾದ ಐಎಸ್‌ಐ, ಅಲ್‌ಖೈದಾ, ಎಲ್‌ಟಿಟಿಇ ಮುಂತಾದವುಗಳಿಂದ ಶಸ್ತ್ರಾಸ್ತ್ರ ಪೂರೈಕೆಯಾಗುತ್ತಿದೆ ಎಂದು ಕೇಂದ್ರ ಗುಪ್ತಚಾರ ಇಲಾಖೆಯ ಮಾಹಿತಿ ಇದೆ. ಇದೆಲ್ಲಾ ಇದ್ದಾಗ್ಯೂ ಇದೊಂದು ಸಾಮಾಜಿಕ ಸಮಸ್ಯೆ ಹಿನ್ನೆಲೆಯಲ್ಲಿ ನಡೆಯುತ್ತಿರುವ ಚಳುವಳಿ ಎಂದು ಸರ್ಕಾರ ಸುಮ್ಮನೆ ಕುಳಿತರೆ ಅದೊಂದು ರಾಷ್ಟ್ರ ವಿರೋಧಿ ಕ್ರಮವಾಗುತ್ತದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಇದನ್ನು ಹತ್ತಿಕ್ಕಲು ತೀವ್ರವಾದ ಕ್ರಮಗಳನ್ನು ತೆಗೆದುಕೊಂಡು, ಕಾನೂನು ಸುವ್ಯವಸ್ಥೆಯನ್ನು ಕಾಪಾಡಬೇಕಾದ್ದು ಅದರ ಕರ್ತವ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ದೇಶದಲ್ಲಿ ಕಾನೂನು ಸುವ್ಯವಸ್ಥೆಗೆ ಭಂಗವನ್ನುಂಟು ಮಾಡುವುದರ ಮೂಲಕ ಪರ್ಯಾಯ ಪ್ರಜಾಪ್ರಭುತ್ವ ವ್ಯವಸ್ಥೆ ತರುವ ನೆಪದಲ್ಲಿ ಅಪರಾಧ ಮಾಡುತ್ತಿರುವುದನ್ನು ಯಾರು ಸಮರ್ಥಿಸಲು ಆಗುವುದಿಲ್ಲ. ನಕ್ಸಲರು ನಡೆಸುತ್ತಿರುವ ಚಟುವಟಿಕೆಗಳಿಗೆ ವಿವಿಧ ರೀತಿಯ ವಿಶ್ಲೇಷಣೆಗಳನ್ನು ಕೊಡಲಾಗುತ್ತಿದೆ. ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಹೇಳಿದಂತೆ, ನಕ್ಸಲ್ ಚಟುವಟಿಕೆ ಅದೊಂದು ಉಗ್ರವಾದಿ

ಚಟುವಟಿಕೆ ಎಂದು ಸರ್ಕಾರ ಪರಿಗಣಿಸಬೇಕು. ಹಿಟ್ಲರ್ ಮಹಾಶಯ, ತನ್ನ ಸಿದ್ಧಾಂತಕ್ಕೆ ವಿರುದ್ಧವಾಗಿರುವವರೆಲ್ಲಾ ಸಾಯುವುದಕ್ಕೆ ಅರ್ಹರೆಂದು ಪರಿಗಣಿಸಿ ಗ್ಯಾಸ್ ಛೇಂಬರ್‌ಗೆ ವಿರೋಧಿಗಳನ್ನು ತಳ್ಳಿ ಕೊಂದಂತೆ ಈ ನಕ್ಸಲ್‌ರ ವಾದ ಇರುತ್ತದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಅದನ್ನು ಹತ್ತಿಕ್ಕಲು ಉಗ್ರಕ್ರಮಗಳನ್ನು ತೆಗೆದುಕೊಳ್ಳಬೇಕು. ಕರ್ನಾಟಕ ವಿಮೋಚನಾ ರಂಗ ಇತ್ಯಾದಿ ಹೆಸರಿನಲ್ಲಿ ಏನು ಚಟುವಟಿಕೆ ಇವತ್ತು ರಾಜ್ಯದಲ್ಲಿ ನಡೆಯುತ್ತಿದೆ, ಅದೆಲ್ಲಾ ಪೀಪಲ್ಸ್ ವಾರ್ ಗ್ರೂಪ್‌ನ ಮತ್ತೊಂದು ಮುಖವಾಗಿದೆಯೇ ಹೊರತು ಮತ್ತೇನೂ ಅಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಸಾಮಾಜಿಕ ಸಮಸ್ಯೆಯನ್ನು ಮುಂದಿಟ್ಟುಕೊಂಡು ಎಕೆ 47 ಕೈಯಲ್ಲಿ ಹಿಡಿದುಕೊಂಡು ಹೊಸ ರಾಜಕೀಯ ಆಯಾಮ ನಿರ್ಮಾಣ ಮಾಡುವ ಕ್ರಮವನ್ನು ಯಾವ ರಾಜ್ಯ ಸರ್ಕಾರದ ಕಾನೂನು ಸುವ್ಯವಸ್ಥೆಯು ಒಪ್ಪುವಂತಹದ್ದಲ್ಲ. ಇಂತಹ ಸಂದರ್ಭದಲ್ಲಿ ಪೋಲೀಸ್ ಇಲಾಖೆ ತುಂಬಾ ಚುರುಕಾಗಿ ಕೆಲಸ ಮಾಡಬೇಕಾಗುತ್ತದೆ ಅದಕ್ಕೆ ರಾಜಕೀಯ ಇಚ್ಛಾಶಕ್ತಿಯೂ ಬೇಕಾಗುತ್ತದೆ. ಗದ್ದರ್‌ರವರು ಮಾನ್ಯ ಮುಖ್ಯಮಂತ್ರಿಯವರ ಮನೆಯ ಮುಂದೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಮುಖ್ಯಮಂತ್ರಿಗಳಾಗಿ ನಡೆದುಕೊಂಡ ರೀತಿ ಸಮರ್ಥನೀಯವಲ್ಲ. ಗದ್ದರ್‌ರವರು ಸರ್ಕಾರಕ್ಕೆ ಧಮಕಿ ಹಾಕುವ ರೀತಿಯಲ್ಲಿ ಮಾತನಾಡಿದ್ದಾರೆ. ಇದರ ಪರಿಣಾಮ ವೆಂಕಟಮ್ಮನಹಳ್ಳಿಯ ಪೋಲೀಸರ ಹತ್ಯೆಗೆ ಕಾರಣವಾಯಿತೆಂದು ನಾನು ನೇರವಾಗಿ ಹೇಳುತ್ತೇನೆ. ವೈಯಕ್ತಿಕ ಅಭಿಪ್ರಾಯ ಏನೇ ಇದ್ದರೂ ಸರ್ಕಾರದ ಚುಕ್ಕಾಣಿ ಹಿಡಿದಾಗ ರಾಜ್ಯದ ಹಿತವನ್ನು ಗಮನದಲ್ಲಿಟ್ಟುಕೊಂಡು ನಡೆದುಕೊಳ್ಳಬೇಕಾಗುತ್ತದೆ. ಹಾಗಾಗಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ನಿರ್ಭೀತಿಯಿಂದ ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಚಿಕ್ಕಮಗಳೂರಿನಲ್ಲಿ ಕಾನೂನು ಯಾವುದನ್ನು ನಿಯಂತ್ರಿಸಬೇಕೋ ಅದು ಆಗುತ್ತಿಲ್ಲ, ಬೇಲಿಯೇ ಎದ್ದು ಹೊಲ ಮೇಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಚಿಕ್ಕಮಗಳೂರಿನಲ್ಲಿ ರಸ್ತೆ ವಿಸ್ತರಣೆಯಾಯಿತು ಆ ರಸ್ತೆ ವಿಸ್ತರಣೆಯ ಸಂಬಂಧವಾಗಿ ಯಾವುದೇ ರೀತಿಯ ಕಾನೂನು ನಿಯಮಗಳನ್ನು ಅನುಸರಿಸಲಿಲ್ಲ. ಒಬ್ಬ ಶಾಸಕನಾಗಿ ರಸ್ತೆ ಅಗಲೀಕರಣಕ್ಕೆ ನನ್ನ ವಿರೋಧವಿರಲಿಲ್ಲ. ಆದರೆ ಜಿಲ್ಲಾ ನ್ಯಾಯಾಲಯ, ಜಿಲ್ಲಾ ಮ್ಯಾಜಿಸ್ಟ್ರೇಟರು ಅವರು ಗುಂಡಾಗಳ ರೀತಿಯಲ್ಲಿ ವರ್ತನೆ ಮಾಡುವುದಕ್ಕೆ ನನ್ನ ವಿರೋಧವಿತ್ತು. ಯಾವುದನ್ನೇ ಮಾಡುವುದಾದರೆ ಕಾನೂನಿನ ಪ್ರಕಾರ ಮಾಡಿ ಎಂದು ಹೇಳಿದ್ದೆ. ಮಾನ್ಯ ಸಭಾಧ್ಯಕ್ಷರೆ, ಶ್ರೀಮತಿ ಇಂದಿರಾಗಾಂಧಿಯವರನ್ನು ಹತ್ಯೆ ಮಾಡಿದವರನ್ನೂ ಕೂಡ ಹತ್ತು ವರ್ಷ ವಿಚಾರಣೆ ನಡೆಸಿ ಆಮೇಲೆ ಗಲ್ಲಿಗೇರಿಸುವಂತಹ ತೀರ್ಪನ್ನು ಕೊಟ್ಟು ತೀರ್ಪು ಬಂದ ನಂತರವೂ ಕೂಡ ಜಾರಿಗೊಳಿಸುವುದಕ್ಕಿಂತ ಮುಂಚೆ, ಅವರಿಗೊಂದು ಮೇಲ್ಮನವಿಯನ್ನು ಸಲ್ಲಿಸುವುದಕ್ಕೆ ಅವಕಾಶ ಕೊಟ್ಟಿತ್ತು. ಚಿಕ್ಕಮಗಳೂರಿನಲ್ಲಿ 125,100,80 ವರ್ಷಗಳಿಂದ ಏನು 1964 ರ ಮುನಿಸಿಪಲ್ ಕಾಯಿದೆ ಜಾರಿಗೆ ಬರುವುದಕ್ಕಿಂತ ಮುಂಚಿತವಾಗಿ ಮನೆಯನ್ನು ಕಟ್ಟಿಕೊಂಡಿದ್ದಂತಹ ಜನರನ್ನು, ಯಾವುದೇ ರೀತಿಯ ಕಾನೂನನ್ನು ಅನುಸರಿಸದೆ ಬುಲ್ಡೋಜರ್ ತೆಗೆದುಕೊಂಡು ಬಂದು, ಇವತ್ತು ಅವರ ಮನೆಗಳನ್ನು ಹೊಡೆದು ನರಕ ಮಾಡಲಾಗಿದೆ. ಇಡೀ ಚಿಕ್ಕಮಗಳೂರು ಸ್ಮಶಾನವಾಗಿದೆ. ಯಾವುದೇ ಕಾನೂನಿನ ನಿಯಮಗಳನ್ನು ಇಲ್ಲಿ ಅನುಸರಿಸಿಲ್ಲ. ಬುಲ್‌ಡೋಜ್ ಮಾಡಿ 86ಕ್ಕೂ ಹೆಚ್ಚು ಕುಟುಂಬಗಳು ಜೀರೋ ಆಗಿವೆ. ಅವರಿಗೆ ಏನೂ ಇಲ್ಲ ನಾಲ್ಕಡಿ ಜಾಗಾನೂ ಇಲ್ಲ, ಅವರ ಹತ್ತಿರ 100, 125, 25,

50 ವರ್ಷಗಳ ದಾಖಲೆ ಇದೆ. ಆ ದಾಖಲೆ ಇದ್ದರೂ ಯಾವುದೇ ರೀತಿಯ ಕೋರ್ಟ್ ಹಿಯರಿಂಗ್ ಮಾಡಲು ತಯಾರಿಲ್ಲ. ಒಬ್ಬ ಶಾಸಕನಾಗಿ ಅವರ ಅಹವಾಲಿಗೆ ಬೆಲೆ ಕೊಟ್ಟು ನಾನು ಜಿಲ್ಲಾಧಿಕಾರಿಗಳ ಹತ್ತಿರ ಹೋಗಿ ಕೇಳಿದೆ, ನೋಡಿ ಇಂಡಿವಿಜ್ಯುವಲ್ ಹಿಯರಿಂಗ್ ಮಾಡಿದ್ದೀರಾ ಆದೇಶ ಎಲ್ಲಿದೆ ತೋರಿಸಿ ಅಂತ ಕೇಳಿದರೆ ನಾನು ಚೇಂಬರಿನಲ್ಲಿ ಕೂತಿದ್ದೇನೆ ಅವರು ಒಬ್ಬರಿಗೊಬ್ಬರು ನಾಪತ್ತೆಯಾಗುತ್ತಾರೆ, ನಾನು ಚೇಂಬರಿನಲ್ಲಿದ್ದಾಗಲೀ ಬುಲ್‌ಡೋಜ್ ಮಾಡಲು ಆದೇಶ ಕೊಟ್ಟು ಅಲ್ಲಿಗೆ ಕಳುಹಿಸುತ್ತಾರೆ. ಅಂದರೆ ಎಲ್ಲಿ ಕಾನೂನು ಅನುಸರಿಸಬೇಕೋ ಅಲ್ಲಿ ಅನುಸರಿಸುವುದಿಲ್ಲ. ಯಾರು ಮುಗ್ಧ ನಾಗರೀಕರಿದ್ದಾರೆ ಅವರಿಗೆ ಈ ಕಾನೂನಿನಡಿಯಲ್ಲೇ ದುರುಪಯೋಗ ಮಾಡಿಕೊಂಡು ಬೇಲಿಯೇ ಎದ್ದು ಹೊಲ ಮೇಯುವಂತಹ ಪರಿಸ್ಥಿತಿ ಚಿಕ್ಕಮಗಳೂರಿನಲ್ಲಿ ನಿರ್ಮಾಣವಾಗಿದೆ. ಮಾನ್ಯ ಮುಖ್ಯಮಂತ್ರಿಗಳೇ, ತಾವು ದಯಮಾಡಿ ಗಮನಿಸಿ; ಚಿಕ್ಕಮಗಳೂರಿಗೆ ನೀವು ಯಾವುದೇ ರೀತಿಯ ತನಿಖೆ ಏರ್ಪಡಿಸಿ. ರಸ್ತೆ ವಿಸ್ತರಣೆ ನೆಪದಲ್ಲಿ ನಿಮ್ಮ ಅಧಿಕಾರಿಗಳು ಮಾಡಿರುವ ಗೂಂಡಾಗಿರಿಯನ್ನು ಪ್ರತ್ಯಕ್ಷ ಕಾಣಿ. ನೀವು ಯಾವುದೇ ರೀತಿಯ ತನಿಖೆ ಮಾಡಿಸಿ, ಆ ತನಿಖೆಯಲ್ಲಿ ಅವರು ನಿಯಮ ಪಾಲಿಸಿರುವುದು ನಿಜವಾಗಿದ್ದರೆ ನಾನು ನನ್ನದೇ ತಪ್ಪು ಅಂತ ಒಪ್ಪಿಕೊಳ್ಳುತ್ತೇನೆ. ನಿಯಮವನ್ನು ಪಾಲಿಸದೇಹೋಗಿದ್ದರೆ ಇವತ್ತು ಜನರ ಹಕ್ಕನ್ನು ನೀವು ರಕ್ಷಿಸಬೇಕಾಗಿದೆ. ಪ್ರಜಾಪ್ರತಿನಿಧಿಯಾಗಿ ನಾನು ಈ ವ್ಯವಸ್ಥೆಯ ಭಾಗವೆಂದು ಭಾವಿಸಿದ್ದೇನೆ. ಆದರೆ ಶಾಸಕನಾದ ನನ್ನ ಮಾತು ಕೇಳಲೂ ನಿಮ್ಮ ಅಧಿಕಾರಿಗಳು ತಯಾರಿರಲಿಲ್ಲ. ಒಂದು ರೀತಿ ಅಪಮಾನ ಮಾಡುವ ಕೆಲಸ ಮಾಡಿದರು. ಒಂದು ರೀತಿ ಗೂಂಡಾಗಿರಿ ಮಾಡತಕ್ಕ ಕೆಲಸ ಮಾಡಿದರು. ನನ್ನ ಜೊತೆ ಚರ್ಚೆಗೂ ತಯಾರಿಲ್ಲದೆ ಎಲ್ಲವನ್ನು ಕತ್ತಲಲ್ಲಿಟ್ಟು ಜನರ ಬದುಕನ್ನು ಇವತ್ತು ನಾಶ ಮಾಡಿದ್ದಾರೆ. 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪಿಯುಸಿ ಡಿಗ್ರಿ ಪರೀಕ್ಷೆ ಬರೆಯಬೇಕಾದವರಿಗೆ ನಾಲ್ಕೈದು ದಿವಸದಿಂದ ಕರೆಂಟಿರಲಿಲ್ಲ. ಕುಡಿಯುವುದಕ್ಕೆ ನೀರಿಲ್ಲ. ನಿಮ್ಮ ನಗರಸಭೆ ಮಾಡಿದ ಕೃತ್ಯದಿಂದ ಕುಡಿಯಲು ನೀರಿಲ್ಲ. ಹೆಣ್ಣು ಮಕ್ಕಳು ಅಳುತ್ತಾ ಹೇಳುತ್ತವೆ ನಮ್ಮ ಪರೀಕ್ಷೆ ಮುಂದೂಡಿಸಿ ನಾವು ಮೊಂಬತ್ತಿ ಹಿಡಿದು ಓದೋಣ ಅಂದರೆ ನಮ್ಮಪ್ಪ ಅಮ್ಮ ಕಷ್ಟ ಪಡುತ್ತಿರುವುದು ಮನೆ ಬಿದ್ದು ಹೋಗಿರುವುದು ಕಣ್ಮುಂದೆ ಬರುತ್ತದೆ, ನಾವು ಓದುವುದಕ್ಕಾಗುತ್ತಿಲ್ಲ, ಪರೀಕ್ಷೆ ಮುಂದೂಡಿಸಿ ನಮ್ಮ ಲೈಫ್ ಹಾಳಾಯಿತು ಅಂತ ಕಣ್ಣೀರು ಹಾಕುತ್ತಾರೆ. ಈ ರೀತಿ ಏಕಾಏಕಿ ತೆಗೆದುಕೊಂಡಿರುವ ನಿರ್ಧಾರ, ಬದುಕನ್ನು ನಾಶ ಮಾಡಿರುವಂತಹ ಆ ನಿರ್ಧಾರದ ಬಗ್ಗೆ ತಾವು ತನಿಖೆ ಮಾಡಿಸಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಬೇಕು. ಮತ್ತು ಯಾರು ದಾಖಲೆ ಸರಿಯಾಗಿ ಹೊಂದಿದ್ದಾರೆ, ನಾನು ಎನ್‌ಕ್ರೋಚ್ ಮಾಡಿದವರಿಗೆಲ್ಲಾ ಪರಿಹಾರ ಕೊಡಿ ಅನ್ನುವುದಿಲ್ಲ ಆದರೆ ಯಾರು ಎಲ್ಲವನ್ನೂ ಕಾಯಿದೆ ಪ್ರಕಾರ ನಿರ್ಮಾಣ ಮಾಡಿಕೊಂಡಿದ್ದಾರೆ ಅವರ ಕಟ್ಟಡ ಹೊಡೆದಿರುವವರಿಗೆ ಪರಿಹಾರ ಕೊಟ್ಟು ಅವರ ಬದುಕು ಸರಿ ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕು ಅಂತ ವಿನಂತಿ ಮಾಡುತ್ತಾ, ತಾವು ಲೈವ್‌ಬ್ಯಾಂಡನ್ನು ನಿಷೇಧಿಸಿದಿರಿ. ಹಾಗೇ ಕ್ರೈಂ ಸ್ಟೋರಿ ಕ್ರೈಂ ಡೈರಿಗಳಿಂದ ಇನ್ನಷ್ಟು ಅಪರಾಧೀಕರಣ ಜಾಸ್ತಿಯಾಗುತ್ತಿದೆ, ಕುಮ್ಮಕ್ಕು ಸಿಗುತ್ತಿದೆ ಅದನ್ನು ನಿಷೇಧಿಸಬೇಕು. ಪೋಲೀಸ್ ಇಲಾಖೆಗೆ ಒಂದು ರೀತಿ ಸ್ವಾಯತ್ತತೆ ಕೊಡುವುದರ ಮೂಲಕ ಅಂದರೆ ಅವರೇನು ಬೇಕಾದರೂ ಮಾಡಲಿ ಅಂತ ಅಲ್ಲ, ಹೆಚ್ಚು ರಾಜಕೀಯ ಹಸ್ತಕ್ಷೇಪ ಇಲ್ಲದಂತೆ ಇವತ್ತಿನ ಅಗತ್ಯತೆಗೆ ತಕ್ಕಂತೆ ಪೋಲೀಸ್ ಇಲಾಖೆಯನ್ನು ಆಧುನೀಕರಣಗೊಳಿಸಿ ಆ ಮೂಲಕ ಈ ರಾಜ್ಯ ಅಪರಾಧಿಗಳ ತಾಣ ಆಗದಂತೆ ತಾವು ನೋಡಿಕೊಳ್ಳಬೇಕು ಅಂತ ವಿನಂತಿ ಮಾಡಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಕೆ.ಎಂ.ತಿಮ್ಮರಾಯಪ್ಪ (ಪಾವಗಡ) : ಮಾನ್ಯ ಅಧ್ಯಕ್ಷರೆ, ಈ ದಿನ ಕಾನೂನು ಸುವ್ಯವಸ್ಥೆ ಮತ್ತು ನಕ್ಸಲೀಯರ ಸಮಸ್ಯೆ ವಿಚಾರವಾಗಿ ಏನು ಸುದೀರ್ಘ ಚರ್ಚೆಯಾಗುತ್ತಿದೆ ಸದನದಲ್ಲಿ ಅದರಲ್ಲಿ ವಿಶೇಷವಾಗಿ ನನ್ನ ತಾಲ್ಲೂಕು ಪಾವಗಡ, ಅದರಲ್ಲಿನ ವೆಂಕಟಮ್ಮನಹಳ್ಳಿಯ ಘಟನೆ ಬಗ್ಗೆ ಎಲ್ಲ ಸದಸ್ಯರು ಸದನದ ಮುಂದೆ ಅಲ್ಲಿ ನಡೆದಿರುವ ಘಟನೆಗಳನ್ನು ಎಲ್ಲ ವಿವರಗಳನ್ನು ನೀಡಿದ್ದಾರೆ. ಈ ಒಂದು ಸನ್ನಿವೇಶದಲ್ಲಿ ನಾನು ಆ ಭಾಗದ ಶಾಸಕನಾಗಿ ನನ್ನ ತಾಲ್ಲೂಕಿನ ನಕ್ಸಲೀಯ ಇತರ ಸಮಸ್ಯೆಗಳ ಬಗ್ಗೆ ಈ ಸದನದ ಮುಂದೆ ತರಲು ಇಚ್ಛೆ ಪಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ಪಾವಗಡ ತಾಲ್ಲೂಕಿನಲ್ಲಿ ಮೂಲತಃ ನಕ್ಸಲೀಯರು ಯಾರೂ ಇಲ್ಲ.ಎಂದು ನನಗೆ ಗೊತ್ತು. ಕಾರಣ ಇಷ್ಟೆ : ಇದು ಆಂಧ್ರಪ್ರದೇಶದಿಂದ ಕಳೆದ 30–35 ವರ್ಷಗಳಿಂದಲೂ ನನ್ನ ತಾಲ್ಲೂಕಿನ ಬಡಜನರ ಸಮಸ್ಯೆಗಳ ವಿಚಾರದಡಿ ಅವರ ಬೇಡಿಕೆಗಳನ್ನು ಈಡೇರಿಸುತ್ತೇವೆ ಅಂತ ಬಂದು ನನ್ನ ತಾಲ್ಲೂಕನ್ನು ಅಡಗುತಾಣ ಮಾಡಿಕೊಳ್ಳಲು ಅವರು ಹೊರಟಿರುವ ಈ ಸನ್ನಿವೇಶದಲ್ಲಿ ಅನೇಕ ಜನ ಅನುಕೂಲಗಳಿಗಾಗಿ ಅವರ ಮಾತಿನ ಮೋಡಿಗಾಗಿ ನಮಗೆಲ್ಲ ಸೌಲಭ್ಯಗಳನ್ನು ಸರ್ಕಾರ ಕೊಡುವುದಕ್ಕೆ ಆಗುವುದಿಲ್ಲ ಇವರು ಮೂಲಭೂತ ಸೌಕರ್ಯ ಒದಗಿಸುತ್ತಾರೆ ಎಂಬ ದೃಷ್ಟಿಯಲ್ಲಿ ಪ್ರೇರೇಪಿಸುವ ವಿಚಾರಗಳಿಗೆ ಬಲಿಯಾಗುವ ಸನ್ನಿವೇಶದಲ್ಲಿ ಜನರ್ಯಾರೂ ಅವರಿಗೆ ಪ್ರೇರೇಪಣೆ ಕೊಡುವುದಿಲ್ಲ ನಮ್ಮ ಸರ್ಕಾರ, ನಾವು ಅಲ್ಲಿನ ಮೂಲಭೂತ ಸಮಸ್ಯೆಗಳ ಬಗ್ಗೆ ಕಿಂಚಿತ್ತೂ ಯೋಚಿಸದೆ ನಮ್ಮ ಸರ್ಕಾರಗಳು ಅವರನ್ನು ವಂಚಿಸುತ್ತಾ ಬಂದಿವೆ. ನನ್ನ ತಾಲ್ಲೂಕಿನಲ್ಲಿ ರಸ್ತೆಗಳಿರಬಹುದು ಪ್ರಸೂತಿ ಗೃಹಗಳಿರಬಹುದು ಆಸ್ಪತ್ರೆ ಶಾಲಾ ಕಾಲೇಜು ಇರಬಹುದು ಯಾವೂ ಸುಸ್ಥಿತಿಯಲ್ಲಿಲ್ಲ. ಅಲ್ಲಿ ವಾಸ ಮಾಡುವ ಬಡವರಿಗೆ ಕುಡಿಯಲು ನೀರಿಲ್ಲ ವಾಸಿಸಲು ಮನೆ ಇಲ್ಲ ಈಗಾಗಲೇ ಕೊಟ್ಟಿರುವಂತಹ ಅನೇಕ ಮನೆಗಳು ಆಡಳಿತ ವ್ಯವಸ್ಥೆ ಸರಿಯಿಲ್ಲದೆ ಅನೇಕ ಮನೆಗಳು ಉಳ್ಳವರ ಪಾಲಾಗಿ ಬಡವರಿಗೆ ಅನಾನುಕೂಲವಾಗಿವೆ. ನಾನು ಶಾಸಕನಾಗಿ ಬಂದ ಮೇಲೆ ನಮ್ಮ ತಾಲ್ಲೂಕಿನ ಜ್ವಲಂತ ಸಮಸ್ಯೆಗಳನ್ನೆಲ್ಲಾ ಅದು ನಕ್ಸಲೀಯ ಸಮಸ್ಯೆ ಇರಬಹುದು ನಕ್ಸಲೀಯ ಸಮಸ್ಯೆಗೆ ಪ್ರೇರೇಪಣೆ ಕೊಡುವ ಜನರಿರಬಹುದು ಅಂಥವರ ಎಲ್ಲಾ ವಿಚಾರವನ್ನೂ ಸರ್ಕಾರದ ಗಮನಕ್ಕೆ ತಂದಿದ್ದೇನೆ. ನನ್ನ ತಾಲ್ಲೂಕಿನಲ್ಲಿ ಶೇಕಡ 75 ಭಾಗ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಹಿಂದುಳಿದ ವರ್ಗಗಳಿಂದ ಕೂಡಿದೆ ಅಲ್ಲಿ ಭೂರಹಿತರು ಅನೇಕರಿದ್ದಾರೆ. ಅಲ್ಲಿ ವಾಸಿಸಲು ಜೀವನ ಸಾಗಿಸಲು ತುಂಬ ಕಷ್ಟ ಇದೆ. ನನ್ನ ತಾಲ್ಲೂಕಿನಲ್ಲಿ ಕೇವಲ 5 ತಿಂಗಳ ಕೃಷಿ ಚಟುವಟಿಕೆ ಬಿಟ್ಟರೆ ಉದ್ಯೋಗಕ್ಕಾಗಿ ಬೇರೆ ಯಾವುದೇ ದಾರಿ ಇಲ್ಲ. ಅಲ್ಲಿ ಅನೇಕ ಸಮಸ್ಯೆಗಳಿವೆ. ಜನರು ಗೊಂದಲಕ್ಕೀಡಾಗಿದ್ದಾರೆ. ವೆಂಕಟಮ್ಮನಹಳ್ಳಿಯ ನಕ್ಸಲೀಯರ ಬಗ್ಗೆ ಎಲ್ಲ ಜನರು ಪತ್ರಿಕೆಗಳಲ್ಲಿ ಬಂದಿರುವ ಹಿನ್ನೆಲೆಯಲ್ಲಿ ವೆಂಕಟಮ್ಮನಹಳ್ಳಿಯಲ್ಲಿ ಯಾರೂ ನಕ್ಸಲೀಯರಿಲ್ಲ, ಅದು ಗಡಿಭಾಗ ವಾಗಿರುವುದರಿಂದ ಅವರಿಗೆ ಬೇಕಾದ ಸವಲತ್ತುಗಳಿಗಾಗಿ ಆ ಜನತೆಯನ್ನು ರಾತ್ರಿ 10–40ರ ವೇಳೆಯಲ್ಲಿ ಮಾವೋವಾದಿಗಳು ನಾವು ಬರುತ್ತಾ ಇದ್ದೇವೆ ದಯವಿಟ್ಟು ನೀವ್ಯಾರೂ ಹೊರಗಡೆ ಬರಬೇಡಿ, ನಾವು ಬರುತ್ತಿರುವುದು ಕೇವಲ ಗುಂಡುಗಳಿಗಾಗಿ ಯಾರನ್ನೂ ಹಿಂಸಿಸಲು ನಾವು ಬರುತ್ತಿಲ್ಲ ಅಂತ ಹೇಳಿ ಯಾರೂ ಹೊರಗೆ ಬರದ ಸನ್ನಿವೇಶ ಅಲ್ಲಿ ಸೃಷ್ಟಿ ಮಾಡಿ ಪೋಲೀಸರ ಅಡಗುತಾಣದ ಮೇಲೆ ಅಟ್ಯಾಕ್ ಮಾಡಿ ಅವರ ಶಸ್ತ್ರಾಸ್ತ್ರಗಳನ್ನು ಕೊಂಡೊಯ್ದಿರುವ ವ್ಯವಸ್ಥೆ ಇದು. ಮತ್ತೆ ಅಲ್ಲಿನ ಜನರಿಗೆ ದೊಡ್ಡ ಆಘಾತ ಕಾದಿದೆ ನಾವೆಲ್ಲ ನಕ್ಸಲೀಯರ ಬಗ್ಗೆ ಸಹಾನುಭೂತಿ ಪರವಾಗಿದ್ದೇವೆ ಎಂದು ಪೋಲೀಸರು ಭಾವನೆ ಇಟ್ಟುಕೊಂಡು ನಮ್ಮನ್ನು ವಿಚಾರಣೆ ನಡೆಸಲು ಬರುತ್ತಾರೆ ನಮಗೆ ತುಂಬಾ ಭಯವಾಗುತ್ತಿದೆ ನಮಗೆ ಯಾವ ರೀತಿಯಲ್ಲೂ ಅವರ ಜೊತೆ ಸಂಪರ್ಕವಿಲ್ಲ ವಿನಾಕಾರಣ ನಮಗೆ

ತೊಂದರೆ ಕೊಡುತ್ತಾರೆ ಎಂಬ ಹಿನ್ನೆಲೆಯಲ್ಲಿ ಅಲ್ಲಿನ ಜನ ಘಟನೆ ನಡೆದ 15 ದಿನದಲ್ಲಿ ಹೊರಗಡೆ ಬರಲಿಲ್ಲ.

(ಮಾನ್ಯ ಶ್ರೀ ಅರಗ ಜ್ಞಾನೇಂದ್ರ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ರೈತರಿರಬಹುದು ಕೂಲಿ ಕಾರ್ಮಿಕರಿರಬಹುದು ಹೊರಗೆ ಬಂದು ಸುಸೂತ್ರವಾಗಿ ತಿರುಗಾಡಲೂ ಸಹ ಕಷ್ಟವಾಗಿತ್ತು. ಅಂತಹ ಹಿನ್ನೆಲೆಯಲ್ಲಿ ಮಾಧ್ಯಮಗಳಲ್ಲಿ ಬಂದ ವರದಿ ಹಿನ್ನೆಲೆಯಲ್ಲಿ ನಾವೂ ಸಹ ಆ ಸ್ಥಳಕ್ಕೆ ಭೇಟಿ ನೀಡಿ ಆ ಘಟನೆ ಹಿಂದಿನ ದಿವಸ ನಾನು ಆ ಸ್ಥಳಕ್ಕೆ ಹೋಗಿದ್ದೆ ಅಲ್ಲಿನ ಸಮಸ್ಯೆಗಳನ್ನು ಕೂಲಂಕಷವಾಗಿ ನಾನು ಗಮನಿಸಿ ಸಂಬಂಧಪಟ್ಟ ಅಧಿಕಾರಿಗಳ ಮತ್ತು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಬರೀ ವೆಂಕಟಮ್ಮನಹಳ್ಳಿ ಸಮಸ್ಯೆ ಒಂದೇ ಅಲ್ಲ. ತಾಲ್ಲೂಕಿನ ಎಲ್ಲಾ ಸಮಸ್ಯೆಗಳನ್ನೂ ನಮ್ಮ ಅಭಿವೃದ್ಧಿ ಆಯುಕ್ತರಾದ ಚಿರಂಜೀವಿ ಸಿಂಗರ ಗಮನಕ್ಕೆ ತಂದಿದ್ದೇವೆ. ನನ್ನ ತಾಲ್ಲೂಕಿಗೆ ಭೇಟಿ ನೀಡಲು ಅವರನ್ನು ನಾನು ಕೇಳಿದಾಗ ಅವರು ಭೇಟಿ ಕೊಟ್ಟಿದ್ದರು. ಒಟ್ಟಿನಲ್ಲಿ ವೆಂಕಟಮ್ಮನಹಳ್ಳಿಯ ಘಟನೆ ನನ್ನ ತಾಲ್ಲೂಕಿನಲ್ಲಿ ಅದು ದೊಡ್ಡ ದುರಂತ ಅಂತ ನಾವು ಭಾವಿಸಿ ಅಲ್ಲಿನ ಜನರಿಗೆ ಈಗ ಪೊಲೀಸರಿಂದ ಆಗುವ ವಿಚಾರಣೆಯಲ್ಲಿ ಅವರು ತುಂಬಾ ಹೆದರಿ ಅಲ್ಲಿ ಜೀವನ ಮಾಡುವುದೇ ದುಸ್ತರವಾಗಿರುವ ಹಿನ್ನೆಲೆಯಲ್ಲಿ ಸರ್ಕಾರ ತಪ್ಪಿತಸ್ಥರನ್ನು ಕೂಲಂಕಷವಾಗಿ ಪರಿಶೀಲಿಸಲು ವ್ಯವಸ್ಥೆ ಮಾಡಿ ಇಡೀ ಊರಿನ ಜನರೆಲ್ಲಾ ಆ ಘಟನೆಗೆ ಸಂಬಂಧ ಇರುವವರು ಅಂತ ಯಾರೂ ಭಾವಿಸಬಾರದು. ಅಲ್ಲಿ ಯಾರೂ ಸಹ ಅಂಥವರಿಲ್ಲ. ಹೊರಗಡೆ ಬಂದಿರುವ ಜನ ಅವರ ಆಶ್ರಯವನ್ನು ಪಡೆಯಲಿಕ್ಕೂ ಸಹಾ ಅವರು ಹೋಗಿಲ್ಲ. ಅವರು ಬಂದು ಕ್ಷಣ ಮಾತ್ರದಲ್ಲಿ ಯಾರೂ ತಾವು ಹೊರಗಡೆ ಬರಬೇಡಿ ಎಂದು ಹೇಳಿದ ನಿದರ್ಶನದಲ್ಲಿ ಇಡೀ ವ್ಯವಸ್ಥೆಯಲ್ಲಿ ಪೊಲೀಸರು ಒಂದು ತಪ್ಪನ್ನು ಅರ್ಥ ಮಾಡಿಕೊಂಡಿದ್ದಾರೆ. ಈ ಊರಿನ ಜನರಿಗೆ ಈ ಒಂದು ಘಟನೆಯ ಹಿನ್ನೆಲೆಯೂ ಗೊತ್ತಿದೆ ಎನ್ನುವ ಭಾವನೆ ಅವರಲ್ಲಿದೆ. ದಯವಿಟ್ಟು ತಾವು ಆ ರೀತಿ ಯಾರೂ ಭಾವಿಸಬಾರದು. ಸರ್ಕಾರ ಈ ಬಗ್ಗೆ ಆ ಒಂದು ಗ್ರಾಮದ ಬಡ ಕೂಲಿ ಕಾರ್ಮಿಕರಾಗಿರಬಹುದು, ರೈತರಾಗಿರಬಹುದು. ಅಲ್ಲಿ ಯಾರೂ ಮೂಲ ನಕ್ಸಲೈಟ್‌ಗಳು ಇಲ್ಲ ಎಂದು ಭಾವಿಸಿ ನನಗೂ ಸಹಾ ಆ ಒಂದು ಊರಿನ ಎಲ್ಲಾ ಹಿನ್ನೆಲೆ ಗೊತ್ತಿದೆ. ಸರ್ಕಾರ ಕೂಡಲೇ ಆ ದಿಕ್ಕಿನಲ್ಲಿ ಯಾವುದೇ ಜನರಿಗೂ ಅನ್ಯಾಯವಾಗದಂತೆ ತಾವು ನೋಡಿಕೊಳ್ಳಬೇಕು. ಆ ಜನರಿಗೆ ಒಂದು ಧೈರ್ಯ ಮತ್ತು ಸ್ಥೈರ್ಯವನ್ನು ತುಂಬಿ ಅಲ್ಲಿಗೆ ಅಧಿಕಾರಿಗಳನ್ನು ಕಳುಹಿಸಿ ಅಲ್ಲಿನ ಸಮಸ್ಯೆಗಳ ಬಗ್ಗೆ ಮತ್ತು ಆ ಜನರಿಗೆ ಆಗಿರುವ ನೋವು ನಲಿವಿನ ಬಗ್ಗೆ ಸರ್ಕಾರ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಬೇಕೆಂದು ಕೇಳುತ್ತಾ ಮತ್ತೆ ನಮ್ಮ ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಒಂದು ಮಾತನ್ನು ಹೇಳಿದರು. ಯಾರೂ ಜನಪ್ರತಿನಿಧಿಗಳು ಅಲ್ಲಿಗೆ ಹೋಗಿಲ್ಲ, ಸರ್ಕಾರದ ಪರವಾಗಿ ಯಾರೂ ಹೋಗಿಲ್ಲವೆಂದು ಹೇಳಿದರು. ಅವತ್ತಿನ ಒಂದು ಸನ್ನಿವೇಶದಲ್ಲಿ ಆ ಘಟನೆ ನಡೆದ ಬೆಳಿಗ್ಗೆ ಆರುಕಾಲು ಗಂಟೆಯಲ್ಲಿ ನಾನು ಪಾವಗಡಕ್ಕೆ ಬಂದೆ. ಆ ಘಟನೆ ಬಗ್ಗೆ ನನಗೆ ಗೊತ್ತೇ ಇರಲಿಲ್ಲ. ಕೂಡಲೇ ನಾನು ಆಸ್ಪತ್ರೆಗೆ ಧಾವಿಸಿ ಇಬ್ಬರು ಪೊಲೀಸ್ ಪೇದೆಗಳು ಅಲ್ಲಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಅವರನ್ನು ವಿಚಾರ ಮಾಡಲಾಗಿ ನಮಗೆ ಯಾವುದೇ ರೀತಿ ಪ್ರಾಣಕ್ಕೆ ತೊಂದರೆ ಇಲ್ಲ ಈಗಾಗಲೇ ತೊಂದರೆಯಾಗಿರುವವರು ಇಷ್ಟು ಜನರು ಸತ್ತು ಹೋಗಿದ್ದಾರೆ ಮತ್ತು ಇಬ್ಬರು-ಮೂವರು ಜನ ಈಗಾಗಲೇ ರಾತ್ರಿಯೇ ಆಸ್ಪತ್ರೆಗೆ ಹೋಗಿದ್ದಾರೆ, ನಮಗೇನೂ ತೊಂದರೆ ಇಲ್ಲವೆಂದು ಹೇಳಿದರು. ಈ ಘಟನೆಯ ಬಗ್ಗೆ ನಾವು ವಿಷಾದವನ್ನು ವ್ಯಕ್ತಪಡಿಸುವುದರ ಜೊತೆಗೆ

ಅವರ ಒಂದು ಯೋಗಕ್ಷೇಮವನ್ನು ವಿಚಾರಿಸಿ ಅವರಿಗೆ ಧೈರ್ಯವನ್ನು ತುಂಬಿದ್ದೇವೆ. ಜೊತೆಗೆ ನಮ್ಮ ಸರ್ಕಾರದಿಂದ ಬಂದ ಸಚಿವರು ಮಾನ್ಯ ಚನ್ನಿಗಪ್ಪನವರೂ ಸಹಾ ಬಂದರು. ಅವರು ಬಂದ ಸಂದರ್ಭದಲ್ಲಿ ಅಲ್ಲಿ ಡಿಐಜಿ ಅವರು ಮತ್ತು ಇನ್ನಿತರೆ ಪೊಲೀಸ್ ಅಧಿಕಾರಿಗಳು ಈ ಸನ್ನಿವೇಶದಲ್ಲಿ ಅಲ್ಲಿ ಯಾರೂ ಸಹಾ ದಯವಿಟ್ಟು ಭೇಟಿ ನೀಡಬೇಡಿ, ಅಲ್ಲಿ ಲ್ಯಾಂಡ್ ಮೆನ್ಸ್ ಇದ್ದಾರೆ, ಇನ್ನು ಅನೇಕ ಬೇರೆ ಬೇರೆಯಾದ ಬಾಂಬ್‌ಗಳನ್ನು ಇಟ್ಟಿರುವ ಸನ್ನಿವೇಶವನ್ನು ಅಲ್ಲಿ ಅಲ್ಲಿ ನಾವು ಪತ್ತೆ ಹಚ್ಚುತ್ತಿದ್ದೇವೆ. ಕೂಡಲೇ ದಯವಿಟ್ಟು ಯಾರೂ ಹೋಗಬೇಡಿ ಎಂದು ಅವರು ನಮಗೆ ಸೂಚನೆಯನ್ನು ಕೊಟ್ಟರು. ಆ ಸೂಚನೆಯ ಹಿನ್ನೆಲೆಯಲ್ಲಿ ಸಚಿವರು ಮತ್ತು ನಾವ್ಯಾರೂ ಹೋಗಲಿಕ್ಕೆ ಆಗಲಿಲ್ಲ. ತದನಂತರ ಬಂದ ಪತ್ರಿಕೆಗಳಲ್ಲಿ ಬಂದ ಅನೇಕ ಸುದ್ದಿಗಳು ಅಲ್ಲಿ ಆ ಗ್ರಾಮದ ಜನತೆಗೆ ಬಂದಿರುವ ನೋವು ನಲಿವುಗಳ ಬಗ್ಗೆ ಸ್ಪಂದಿಸುವುದಕ್ಕೋಸ್ಕರ ನಾನು ಕೂಡ ಒಂದು ವಾರದ ನಂತರ ಹೋಗಿ ಆ ಗ್ರಾಮದ ಜನತೆಯೊಂದಿಗೆ ಕೂತು ಅಲ್ಲಿನ ಸಮಸ್ಯೆ ಬಗ್ಗೆ ಚರ್ಚಿಸಿ ವಿಚಾರಗಳನ್ನೆಲ್ಲಾ ತಿಳಿದು ಬಂದಿದ್ದೇನೆ. ಸರ್ಕಾರ ನನ್ನ ತಾಲ್ಲೂಕಿನ ಸಮಸ್ಯೆಗಳ ಜೊತೆಗೆ, ಆ ಗ್ರಾಮದ ಸಮಸ್ಯೆಗಳ ಜೊತೆಗೆ ಎಲ್ಲವನ್ನೂ ಒಟ್ಟಾರೆ ಸೇರಿಸಿ ನನ್ನ ತಾಲ್ಲೂಕಿನಲ್ಲಿ ಈಗೇನು ಸುಮಾರು 18 ಬೇಡಿಕೆಗಳನ್ನು ನಾನು ಈಗಾಗಲೇ ಸರ್ಕಾರಕ್ಕೆ ಒಂದು ಪಟ್ಟಿಯನ್ನು ಮಾಡಿ ಸಲ್ಲಿಸಿದ್ದೇನೆ. ಆ 18 ಬೇಡಿಕೆಗಳಲ್ಲಿ ಅನೇಕ ಪ್ರಾಮುಖ್ಯವಾದ ಬೇಡಿಕೆಗಳು ತುಂಬಾ ಇದ್ದಾವೆ. ಅದರಲ್ಲಿ ಆಸ್ಪತ್ರೆಗಳ ವಿಚಾರ, ಮತ್ತೆ ರಸ್ತೆಗಳ ವಿಚಾರ, ಕುಡಿಯುವ ನೀರಿನ ವಿಚಾರ, ವಸತಿ ಯೋಜನೆಗಳ ವಿಚಾರ, ಇನ್ನು ಪಡಿತರ ವ್ಯವಸ್ಥೆಯಲ್ಲಿ ಆಗಿರುವ ಲೋಪದೋಷಗಳ ವಿಚಾರ, ಅವುಗಳನ್ನು ಈಗಾಗಲೇ ಸರ್ವೆ ಮುಖಾಂತರ ಸರಿಪಡಿಸುವುದಕ್ಕೆ ನಮ್ಮ ಸರ್ಕಾರ ಹೊರಟಿದೆ. ಕೂಡಲೇ ಅವರಿಗೆ ಏನು ಈಗಾಗಲೇ ಪಡಿತರ ಚೀಟಿಗಳು ಸಿಗದೇ ಇರತಕ್ಕ ಅನೇಕ ಬಡ ಕುಟುಂಬಗಳಿಗೆ ಅವುಗಳನ್ನು ಒದಗಿಸಬೇಕೆಂದು ನಾನು ಈ ಸದನದ ಮೂಲಕ ಸರ್ಕಾರವನ್ನು ಕೋರುತ್ತೇನೆ. ನನ್ನ ತಾಲ್ಲೂಕಿಗೆ ಏನು ಹಿಂದೆ 1989ರಿಂದ ಏನು ನಕ್ಸಲೈಟ್ ಪ್ರಭಾವ ನನ್ನ ತಾಲ್ಲೂಕಿಗೆ ಅಂಟಿಕೊಂಡಿದೆ, ಆ ಪ್ರಭಾವದ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ದಿವಂಗತ ವೀರೇಂದ್ರ ಪಾಟೀಲರ ಕಾಲದಲ್ಲಿ ಫಾಡರ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಎಂದು ಹೇಳಿ ಅದನ್ನು ಜಾರಿಗೆ ತಂದು 1989 ರಿಂದೀಚೆಗೆ ಸುಮಾರು 91 ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟು ವಿಶೇಷವಾದ ಕಾರ್ಯಕ್ರಮಗಳನ್ನು ಅಲ್ಲಿ ಜಾರಿ ಮಾಡಿಸಿದ್ದರು. ಅಲ್ಲಿಗೆ ಅವು ನಿಂತುಹೋದ ಸನ್ನಿವೇಶದಲ್ಲಿ ಈಗ ಇನ್ನು ಬೃಹದಾಕಾರ ಸಮಸ್ಯೆಗಳು ತಲೆದೋರಿದೆ. ಈಗ ಅಲ್ಲಿ ಬಡತನ ರೇಖೆಗಿಂತ ಕೆಳಗಡೆ ಇರುವ ರೈತರಿಗೆ ಭೂ ರಹಿತ ಕೃಷಿ ಕಾರ್ಮಿಕರಿಗೆ ಅಲ್ಲಿ ಭೂಮಿ ಕೊಡುವ ಒಂದು ವ್ಯವಸ್ಥೆ ಈಗಾಗಲೇ ನಮ್ಮ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವತಿಯಿಂದ ಭೂ ಒಡೆತನದ ಯೋಜನೆಯಲ್ಲಿ ಅಲ್ಲಿ ಭೂಮಿಯನ್ನು ಕೊಡಲಿಕ್ಕೆ ಅನೇಕ ರೈತರು ಮುಂದೆ ಬಂದಿದ್ದಾರೆ. ದಯವಿಟ್ಟು ನಮ್ಮ ತಾಲ್ಲೂಕಿಗೆ ಆ ಒಂದು ಯೋಜನೆಯ ಅಡಿಯಲ್ಲಿ ಹೆಚ್ಚಿನ ಸೌಲಭ್ಯವನ್ನು ಕೊಡಿಸಬೇಕೆಂದು ಈ ಸದನದ ಮೂಲಕ ನಾನು ಸರ್ಕಾರವನ್ನು ಕೋರುತ್ತಾ ನನ್ನ ತಾಲ್ಲೂಕಿನ ಜ್ವಲಂತ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಬೇಕೆಂದು ಎಂದು ಹೇಳುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಛೇರ್ಮನ್‌ರವರೆ, ಈ ನಕ್ಸಲೈಟ್ಸ್ ಸಮಸ್ಯೆ ಬಗ್ಗೆ ಈಗಾಗಲೇ ಬಹಳಷ್ಟು ಸದಸ್ಯರು ಮಾತನಾಡಿದ್ದಾರೆ. ವೆಸ್ಟ್ ಬೆಂಗಾಲ್‌ನಲ್ಲಿ 1965ರಲ್ಲಿ ಏನು ಕಮ್ಯುನಿಸ್ಟ್ ಸರ್ಕಾರ ಬಂತು, ಆ ನಂತರ ಅಲ್ಲಿ ನಕ್ಸಲ್‌ಬಾರಿ ಒಂದು ಗ್ರಾಮದಿಂದಲೇ ಇದು ಕನ್‌ಫ್ರಂಟೇಷನ್ ಪ್ರಾರಂಭವಾಯಿತು. ಕಮ್ಯುನಿಸ್ಟ್ ಸರ್ಕಾರ ಮತ್ತು ಅದೇ ಕಮ್ಯುನಿಸ್ಟ್ ಪಕ್ಷದ

ಕೆಲವು ಎಕ್ಸ್ಟ್ರಿಮಿಸ್ಟ್ ಜನರಿದ್ದರು. ವ್ಯವಸ್ಥೆಯ ಬಗ್ಗೆ ಕನ್‌ಫ್ರಂಟೇಷನ್ ಸ್ಟಾರ್ಟ್ ಆಯಿತು. ಬರು ಬರುತ್ತಾ ಅದು ಹೆಚ್ಚು ಪ್ರಭಾವ ಅವರು ಬೆಳೆದಿದ್ದು ಆಂಧ್ರಪ್ರದೇಶದಲ್ಲಿ. ಏನು ಭಾರತ ಸ್ವಾತಂತ್ರ್ಯವಾಗುವುದಕ್ಕೆ ಮೊದಲು ಆ ನಂತರ ಕೂಡ ತೆಲಂಗಾಣದಲ್ಲಿ ಕಮ್ಯುನಿಸ್ಟ್ ಚಳುವಳಿ ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಅವರು ಕೆಲವೊಂದು ಕಡೆ ಅವರದೇ ಒಂದು ಪ್ಯಾರಲಲ್ ಗೌರ್ನಮೆಂಟನ್ನು ನಡೆಸುತ್ತಿದ್ದರು. ಈಗಲೂ ಕೂಡ ಕೆಲವು ಜಿಲ್ಲೆಗಳಲ್ಲಿ ಆಂಧ್ರಪ್ರದೇಶದಲ್ಲಿ ಅಲ್ಲಲ್ಲಿ ಸರ್ಕಾರವನ್ನು ನಡೆಸುತ್ತಿದ್ದಾರೆ. ಕೆಲವೊಂದು ಕಡೆ ಸರ್ಕಾರ ಎಷ್ಟು ಯಾವ ರೀತಿ ನಡೆಸುತ್ತಾರೋ ಅದಕ್ಕಿಂತಲೂ ಚಲೋ ಅವರು ಕೆಲವು ಕಡೆ ನಡೆಸುತ್ತಿದ್ದಾರೆ. ಇದರ ಅರ್ಥ ನಾವು ಅದನ್ನು ಜಸ್ಟಿಫೈ ಮಾಡುತ್ತಿಲ್ಲ. ಆದರೆ ಈ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಕೆಲವು ಫಿಲಾಸಫಿ ಮಾರ್ಕಿಸ್ಟ್ ಫಿಲಾಸಫಿ, ಮಾವೋ ಫಿಲಾಸಫಿ ಕೆಲವು ಯುವಕರು ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಸಾಮಾಜಿಕ ವ್ಯವಸ್ಥೆಯನ್ನು ನೋಡಿ ಅದರ ವಿರುದ್ಧ ಬಂದೇಳುತ್ತಾರೆ. ಕೆಲವರು ಎಮೋಷನಲ್ ಆಗುತ್ತಾರೆ. ಆದುದರಿಂದಲೇ ಜಯಪ್ರಕಾಶ್ ನಾರಾಯಣರೂ ಕೂಡ ಅವರ ಬಗ್ಗೆ ಅವರ ಕಾರ್ಯ ವೈಖರಿಗಳ ಬಗ್ಗೆ ಅವರು ಜಸ್ಟಿಫೈ ಮಾಡಿಲ್ಲ. ಆದರೆ ಅವರ ಭಾವನೆಗಳಿಗೆ ಅವರೂ ಕೂಡ ಈ ದೇಶದ ದೊಡ್ಡ ರಾಷ್ಟ್ರಭಕ್ತರು ಎಂದು ಹೇಳಿದ್ದಾರೆ. ಅದರಲ್ಲಿ ಕೆಲವು ಮಿಸ್–ಯೂಸ್ ಮಾಡುವ ಎಲಿಮೆಂಟ್ಸ್‌ಗಳೂ ಇವೆ. ನಕ್ಸಲೈಟ್ಸ್ ಮೂವ್‌ಮೆಂಟ್ ಸಾಮಾಜಿಕ ವ್ಯವಸ್ಥೆಯನ್ನು ಬದಲಾವಣೆ ಮಾಡುತ್ತೇವೆ, ಸಮಾನತೆ ತರುತ್ತೇವೆ ಎಂದು ಹೇಳಿ ಕೆಲವು ಕಡೆ ಲೂಟಿ ಮಾಡುವ ಎಲಿಮೆಂಟ್ಸ್‌ಗಳೂ ಇದ್ದಿರಬಹುದು. ಕೆಲವು ಅವರ ಆರ್ಗನೈಸೇಷನ್ಸ್ ನಡೆಸುವ ಸಲುವಾಗಿ ಇಲ್ಲೀಗಲ್ ಆಗಿ ಯಾರು ಹಣವನ್ನು ಸಂಪಾದಿಸುತ್ತಾರೋ ಅಂಥವರಲ್ಲಿ ಅವರಿಗೆ ಥ್ರೆಟನಿಂಗನ್ನು ಕೊಟ್ಟು ಹೆದರಿಸಿ ಅವರಿಂದ ಹಣವನ್ನೂ ಕೂಡ ತೆಗೆದುಕೊಳ್ಳುತ್ತಾರೆ. ಇದು ಎಲ್ಲಾ ಇದೆ. ಆದರೆ ಆಂಧ್ರಪ್ರದೇಶದಲ್ಲಿ ಎಷ್ಟು ಅವರು ಆರ್ಗನೈಸ್ ಇದ್ದಾರೆ, ಆದರೆ ನಮ್ಮಲ್ಲಿ ಇರಲಿಲ್ಲ. ಅಲ್ಲಿ ನೂರಾರು ಕೊಲೆಗಳಾಗಿವೆ. ಎಷ್ಟೋ ಕಡೆ ಅವರೇ ಜಮೀನನ್ನು ಹಂಚಿಬಿಟ್ಟಿದ್ದಾರೆ. ಜಮೀನುದಾರರು ಅಲ್ಲಿಂದ ಓಡಿಹೋಗಿದ್ದಾರೆ. ಕೆಲವು ಹಳ್ಳಿಗಳಲ್ಲಿ ಅವರೇ ಸರ್ಕಾರವನ್ನು ನಡೆಸುತ್ತಾರೆ. ಇಷ್ಟು ದೊಡ್ಡ ಸಮಸ್ಯೆ ನಮ್ಮಲ್ಲಿ ಇರಲಿಲ್ಲ. ಯಾವುದೋ ಒಂದು ಫಿಲಾಸಫಿ ಎಲ್ಲೋ ಬಂದು ಹಿಡಿದುಕೊಟ್ಟು ಎಲ್ಲಿಯೋ ಯೂಸೇ ಮಾಡುವುದು ಜೀವಗಳನ್ನು ತೆಗೆದುಕೊಳ್ಳುವಂಥ ಸಮಸ್ಯೆಯೇನೂ ಇರಲಿಲ್ಲ. ಆದರೆ ಇಲ್ಲಿ ಕೆಲವು ಯುವಕರಿಗೆ ಪೋಲೀಸರಿಂದ ಫೈರಿಂಗನ್ನು ಮಾಡಿ ಎನ್‌ಕೌಂಟರ್ ಎಂದು ಅದಕ್ಕೆ ಹೆಸರನ್ನು ಕೊಟ್ಟು ಅವರನ್ನು ಹತ್ಯೆ ಮಾಡಲಾಯಿತು. ಇದು ಹೆಚ್ಚು ಬೆಳೆಯುತ್ತಿದೆ. ನಕ್ಸಲೈಟ್ ಬಗ್ಗೆ ಹೆಚ್ಚು ಸಹಾನುಭೂತಿ ಬೆಳೆಯುತ್ತಿದೆ. ಅದನ್ನು ಬಹಳ ಬುದ್ಧಿವಂತಿಕೆಯಿಂದ ಸರ್ಕಾರ ಟ್ಯಾಕಲ್ ಮಾಡಬಹುದಾಗಿತ್ತು. ಅವರನ್ನು ಹಿಡಿಯಬಹುದಾಗಿತ್ತು. ಅರೆಸ್ಟ್ ಮಾಡಬಹುದಾಗಿತ್ತು. ಬೇರೆ ರೀತಿಯಿಂದ ಕಾನೂನು ರೀತಿಯಿಂದ ಅವರನ್ನು ಒಳಗಡೆ ಹಾಕಬಹುದಾಗಿತ್ತು. ಅದೇನೂ ಮಾಡಲಾರದೆ ಸಿಕ್ಕಾಪಟ್ಟೆ ಏಕ್‌ದಂ ಫೈರಿಂಗನ್ನು ಮಾಡಿ ಅವರನ್ನು ಹೊಡೆದು ಮಾಡುವ ಅವಶ್ಯಕತೆ ಇರಲಿಲ್ಲ. ಇದು ಸಮಸ್ಯೆ ಇದೆ. ಈ ರೀತಿ ಬಂದೂಕಿನಿಂದ ನಕ್ಸಲೈಟ್ಸ್ ಈ ದೇಶದಲ್ಲಿ ಸಮಾಜವಾದ ತರುವುದು ಅಥವಾ ಈ ವ್ಯವಸ್ಥೆ ಬದಲಾವಣೆ ಮಾಡುವುದು ಅವರಿಂದಲೂ ಸಾಧ್ಯವಿಲ್ಲ. ಅಥವಾ ನೀವು ಅದನ್ನು ಬಂದೂಕಿನಿಂದಲೇ ತಡೆಗಟ್ಟುವುದೂ ಸಾಧ್ಯವಿಲ್ಲ. ಕೆಲವು ಸಲ ವಿಶ್ವಾಸಕ್ಕೆ ತೆಗೆದುಕೊಳ್ಳ ಬೇಕಾಗುತ್ತದೆ. ಕೆಲವು ಸಲ ಅವರನ್ನು ಕಾನೂನು ರೀತ್ಯಾ ಅವರಿಗೆ ಕಾರುಬಾರು ಮಾಡಿ ಆ ಕೆಲಸವನ್ನು ಬಂದ್ ಮಾಡಿಸಬೇಕಾಗುತ್ತದೆ. ಅದನ್ನು ಮಾಡಲಾರದೆ ಈಗ ಕೆಲವು ಅಧಿಕಾರಿಗಳು

ಬಂದೂಕಿನಿಂದಲೇ ಅವರನ್ನೆಲ್ಲಾ ತಣ್ಣಗೆ ಮಾಡುತ್ತೇವೆಂದು ಹೇಳುತ್ತಾರೆ. ಅದು ಸಾಧ್ಯ ಇಲ್ಲ. ಕರ್ನಾಟಕದಲ್ಲಿ ಇದು ಆಗಲಾರದ ಹಾಗೆ ಅಂಥ ಅಧಿಕಾರಿಗಳನ್ನು ಕಂಟ್ರೋಲ್ ಮಾಡಬೇಕು. ಇಲ್ಲದಿದ್ದರೆ ಅಧಿಕಾರಿಗಳು ಪೊಲೀಸ್‌ನವರು ಡೀಮೋರಲೈಸ್ ಆಗುತ್ತಾರೆ ಅದರ ಸಲುವಾಗಿ ಅವರು ಮಾಡಿದ್ದಕ್ಕೆಲ್ಲಾ ಜಸ್ಟಿಫೈ ಮಾಡುತ್ತಾ ಹೋಗುವುದು ಸರ್ಕಾರದ ತಪ್ಪು ನೀತಿ. ಹೀಗೆ ಮಾಡಿ ಸಿಕ್ಕಾಪಟ್ಟೆ ಕರ್ನಾಟಕದಲ್ಲಿ ಮತ್ತೆ ಅನ್ಯಾಯವನ್ನು ಮಾಡಬಹುದು. ಆ ದೃಷ್ಟಿಯಿಂದ ಕೆಲವರನ್ನು ಕಂಟ್ರೋಲ್ ಮಾಡುವ ಅವಶ್ಯಕತೆ ಇದೆ. ಇದಕ್ಕೆ ಮಾನವೀಯ ದೃಷ್ಟಿಯಿಂದ ಮತ್ತೆ ಬೇರೆ ಬುದ್ಧಿವಂತಿಕೆಯಿಂದ ಇದಕ್ಕೆ ಟ್ಯಾಕಲ್ ಮಾಡಿದರೆ ಈ ಸಮಸ್ಯೆ ಬಗೆಹರಿಯುತ್ತದೆ. ಎರಡೂ ಕಡೆ ಬಂದೂಕಿನಿಂದಲೇ ಸಮಸ್ಯೆಯೇನೂ ಬಗೆಹರಿಯುವುದಿಲ್ಲ. ಆ ದೃಷ್ಟಿಯಿಂದ ಸರ್ಕಾರ ಇದರ ಬಗ್ಗೆ ಪೊಲೀಸ್‌ನವರಿಗೆ ಅಥವಾ ಆ ಅಧಿಕಾರಿಗಳಿಗೆ ಸಿಕ್ಕಾಪಟ್ಟೆ ಅಧಿಕಾರವನ್ನು ಕೊಟ್ಟು ಇದನ್ನು ಕ್ರಷ್ ಮಾಡುವುದು ತಪ್ಪು. ಅದರ ಜೊತೆಗೆ ಮಾತು ಆಡುವುದಕ್ಕೆ ಸರ್ಕಾರ ತಯಾರಿರಬೇಕು. ಮಾತನ್ನು ಆಡಬೇಕು. ಕನ್‌ಫ್ರಂಟೇಷನ್‌ಗೆ ಇಳಿಯಬಾರದು. ಬೇರೆ ರೀತಿಯಿಂದ ಹರ್‍ಯಾಸ್‌ಮೆಂಟ್ ಕೊಟ್ಟಿರುವುದೂ ನಡೆದಿದೆ. ವರವರರಾವ್ ಆಯಿತು ಅಥವಾ ಗದ್ದಾರ್ ಆಯಿತು. ಅವರೂ ಕೂಡ ಒಳ್ಳೆಯ ರೀತಿಯಿಂದ ಮಾತನಾಡಿ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನ ಮಾಡಬೇಕು ಎಂಬುದು ನನ್ನ ವಿನಂತಿ.

† **ಶ್ರೀ ಎ. ಸುನೀಲ್ ಕುಮಾರ್ (ಕಾರ್ಕಳ)** : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವಂತಹ ಈ ಹಿನ್ನೆಲೆಯಲ್ಲಿ ಒಂದೆರಡು ಸಂಗತಿಗಳನ್ನು ಪ್ರಸ್ತಾವನೆ ಮಾಡಲು ಅವಕಾಶ ಕೊಟ್ಟಂತಹ ನಿಮಗೆ ಧನ್ಯವಾದಗಳನ್ನು ಹೇಳುತ್ತೇನೆ. ನಕ್ಸಲೀಯ ಚಟುವಟಿಕೆ ಕುರಿತಂತೆ ಸಾಕಷ್ಟು ಜನ ಹಿರಿಯರು ಸಾಕಷ್ಟು ಸಂಗತಿಗಳನ್ನು ಈಗಾಗಲೇ ಸರ್ಕಾರದ ಗಮನಕ್ಕೆ ತಂದಿದ್ದಾರೆ. ನೇರವಾಗಿ ನಕ್ಸಲೀಯ ಚಟುವಟಿಕೆಯಿಂದ ನನ್ನ ಕ್ಷೇತ್ರದಲ್ಲಿ ವೈಯಕ್ತಿಕವಾಗಿ 7 ಪಂಚಾಯತಿಗಳಲ್ಲಿ ತೊಂದರೆ ಆಗಿದೆ. ನಕ್ಸಲೀಯ ಚಟುವಟಿಕೆಯಿಂದಾಗಿ ಜನರು ಇವತ್ತು ಭಯಭೀತರಾಗಿ ಜನಜೀವನವನ್ನು ನಡೆಸುವಂತಹ ದುಸ್ಥಿತಿಗೆ ಕಾರಣವಾಗಿದೆ. ನಕ್ಸಲೀಯ ಚಟುವಟಿಕೆ ನಡೆಯುತ್ತಿರುವಂತಹ ಆರಂಭದ ದಿನಗಳಲ್ಲಿ, 2001ನೇ ಇಸವಿಯಲ್ಲಿಯೇ ಚಿಕ್ಕಮಗಳೂರಿನ ಜಿಲ್ಲಾಡಳಿತಕ್ಕೆ ನಾವು ತಿಳಿಸಿದ್ದೆವು. ಪಶ್ಚಿಮ ಘಟ್ಟದ ಈ ಮಲೆನಾಡಿನ ಭಾಗದಲ್ಲಿ ನಕ್ಸಲೀಯ ಚಟುವಟಿಕೆಗಳು ನಡೆಯುತ್ತಿವೆ, ಇದನ್ನು ನಿಯಂತ್ರಿಸಬೇಕು ಎನ್ನುವಂತಹ ಮುನ್ಸೂಚನೆಯನ್ನು 2001ರಲ್ಲಿಯೇ ಅವತ್ತಿನ ಜಿಲ್ಲಾಡಳಿತಕ್ಕೆ ನಾವು ಕೊಟ್ಟಿದ್ದೆವು. ಆದರೆ ಆವತ್ತು ಸರ್ಕಾರ ಯಾವುದೇ ರೀತಿಯಾದಂತಹ ಒಂದು ಕ್ರಮವನ್ನು ಆಗಲೀ ಅಥವಾ ಇದರ ಬಗ್ಗೆ ಒಂದು ಆಸಕ್ತಿಯನ್ನು ತೋರಿಸದೇ ಇರುವಂತಹ ಪರಿಣಾಮವಾಗಿ ಇವತ್ತು ಬಹಳ ದೊಡ್ಡ ಪ್ರಮಾಣದಲ್ಲಿ ಪಶ್ಚಿಮ ಘಟ್ಟದ ಮಲೆನಾಡಿನ ಭಾಗದಲ್ಲಿ ನಕ್ಸಲೀಯ ಚಟುವಟಿಕೆ ಬೆಳೆಯುತ್ತಿದೆ. ನಕ್ಸಲೀಯ ಚಟುವಟಿಕೆಯನ್ನು ಹತ್ತಿಕ್ಕುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿದೆ ಎನ್ನುವಂತಹ ಮಾತನ್ನು ನಾನು ಒಪ್ಪುವುದಕ್ಕೆ ಹೋಗುವುದಿಲ್ಲ. ಸರ್ಕಾರದ ನಿಲುವಿನಲ್ಲಿ ವ್ಯತ್ಯಾಸಗಳು ಪದೇ ಪದೇ ಆಗುತ್ತಿರುವುದರಿಂದ ನಕ್ಸಲೀಯ ಚಟುವಟಿಕೆಯನ್ನು ಇವತ್ತು ಪರಿಣಾಮಕಾರಿಯಾಗಿ ಹತ್ತಿಕ್ಕಲಿಕ್ಕೆ ಆಗುತ್ತಿಲ್ಲ. ಎನ್‌ಕೌಂಟರ್ ಆದಂತಹ ಸಂದರ್ಭದಲ್ಲಿ ಪೊಲೀಸ್ ಇಲಾಖೆಯನ್ನು ಬೆನ್ನು ತಟ್ಟುವಂತಹ ಕೆಲಸವನ್ನು ಸರ್ಕಾರ ಮಾಡ ಬೇಕಾಗಿತ್ತು. ಅದನ್ನು ಮಾಡದೇ ಇರುವಂತಹ ಪರಿಣಾಮವಾಗಿ ಇವತ್ತು ಬಹಳ ದೊಡ್ಡ ಪ್ರಮಾಣದಲ್ಲಿ ನಕ್ಸಲೀಯ ಚಟುವಟಿಕೆ ಇಡೀ ರಾಜ್ಯದಲ್ಲಿ ಬೆಳೆಯುತ್ತಿದೆ. ಸಾಕಷ್ಟು ಜನ ಹೇಳಿದರು. ನಕ್ಸಲೀಯ ಚಟುವಟಿಕೆ ಬೆಳೆಯುತ್ತಿರುವಂತಹ ಹಿನ್ನೆಲೆಯಲ್ಲಿ ಚಿಕ್ಕಮಗಳೂರಿನಲ್ಲಿ ಕುದುರೆಮುಖ ರಾಷ್ಟ್ರೀಯ

ಉದ್ಯಾನವನದ ಹೋರಾಟ, ಅಲ್ಲಿರುವಂತಹ ಗಿರಿಜನರ ಹೋರಾಟ, ಇತ್ಯಾದಿ ಸಂಗತಿಗಳನ್ನು ಸಾಕಷ್ಟು ಜನ ಮಾತನಾಡುತ್ತಾ ಹೋದರು. ನಾನು ಈ ಸಂದರ್ಭದಲ್ಲಿ ನಿಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿರುವಂತಹದು, ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಹೋರಾಟವೇ ಬೇರೆ. ಅಲ್ಲಿರುವಂತಹ ಗಿರಿಜನರ ಸಮಸ್ಯೆಯೇ ಬೇರೆ. ನಕ್ಸಲೀಯ ಸಮಸ್ಯೆಯೇ ಬೇರೆ. ಗಿರಿಜನರ ಸಮಸ್ಯೆಗೂ ನಕ್ಸಲೀಯರ ಸಮಸ್ಯೆಗೂ ಯಾವುದೇ ರೀತಿಯ ಸಂಬಂಧ ಇಲ್ಲ. ಆ ಎರಡೂ ಸಮಸ್ಯೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಸರ್ಕಾರ ಇವತ್ತು ನೋಡಬೇಕು. ಗಿರಿಜನರ ಸಮಸ್ಯೆಯಿಂದ ಅಥವಾ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಹೋರಾಟದಿಂದ ನಕ್ಸಲೀಯರ ಸಮಸ್ಯೆ ಆರಂಭವಾಯಿತು ಎನ್ನುವುದಕ್ಕೆ ಯಾವುದೇ ಆಧಾರ ಇಲ್ಲ. ಅಥವಾ ಅದು ಯಾವುದೇ ಕಾರಣಕ್ಕೂ ಸತ್ಯವಲ್ಲ. ಅವೆರಡೂ ಸಮಸ್ಯೆಗಳು ಇವತ್ತು, ಬೇರೆ ಬೇರೆಯಾಗಿ ಕೆಲಸವನ್ನು ಮಾಡುತ್ತಿದೆ. ಆಂಧ್ರಪ್ರದೇಶದಲ್ಲಿ ನಕ್ಸಲೀಯ ಚಟುವಟಿಕೆ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿರುವಂತಹ ಸಂದರ್ಭದಲ್ಲಿ ಆ ಇಡೀ ನಕ್ಸಲೀಯ ಚಟುವಟಿಕೆಗಳಿಗೆ ಒಂದು ಆಶ್ರಯ ತಾಣ ಆಗಬೇಕು ಎನ್ನುವಂತಹ ಹಿನ್ನೆಲೆಯಲ್ಲಿ ಆಂಧ್ರದಿಂದ ಸಾಕಷ್ಟು ಜನ ನಕ್ಸಲೀಯರು ಇವತ್ತು ಪಶ್ಚಿಮ ಘಟ್ಟದಲ್ಲಿ ತಮ್ಮ ಆಶ್ರಯ ತಾಣಗಳನ್ನು ಕಂಡುಕೊಳ್ಳುತ್ತಿದ್ದಾರೆ. ಅದನ್ನು ಮಾನ್ಯ ಶ್ರೀರಾಮರೆಡ್ಡಿಯವರು ಬಹಳ ಚೆನ್ನಾಗಿ ಉಲ್ಲೇಖ ಮಾಡಿದರು. ಇವತ್ತು ಬಹಳ ಮುಖ್ಯವಾಗಿ ನನಗೆ ದುಃಖ ಮತ್ತು ವಿಚಿತ್ರ ಎನಿಸುತ್ತಿರುವುದು ನಕ್ಸಲೀಯರ ಸಮಸ್ಯೆ ಇವತ್ತು ಸಾಮಾಜಿಕ ಸಮಸ್ಯೆ ಎಂದು ಹೇಳಿರುವುದು. ಸರ್ಕಾರ ಮತ್ತು ಮುಖ್ಯಮಂತ್ರಿಗಳಾದಿಯಾಗಿ ನಕ್ಸಲೀಯ ಸಮಸ್ಯೆ ಅದೊಂದು ಸಾಮಾಜಿಕ ಸಮಸ್ಯೆ ಎಂದು ಹೇಳಿ ಬಹಳ ದೊಡ್ಡ ಪ್ರಮಾಣದಲ್ಲಿ ಪ್ರಚಲಿತದಲ್ಲಿ ಮಾತನಾಡುತ್ತಿರುವಂತಹದ್ದು. ನಕ್ಸಲೀಯ ಚಟುವಟಿಕೆ ಯಾವತ್ತು ಆರಂಭ ಆಯಿತೋ, ಅವತ್ತಿನಿಂದ ಇಲ್ಲಿಯತನಕ ಯಾವುದೇ ಒಂದೇ ಒಂದು ಭಾಗದಲ್ಲಿ ನಕ್ಸಲೀಯರ ಗುಂಪು ಒಂದೇ ಒಂದು ಸಾಮಾಜಿಕ ಆಂದೋಲನವನ್ನು ಇಲ್ಲಿಯ ತನಕ ಮಾಡಲೇ ಇಲ್ಲ. ಬಂದೂಕಿನ ಮುಖಾಂತರ ಅಧಿಕಾರವನ್ನು ಪಡೆಯುತ್ತೇವೆ ಎಂದು ಹೇಳಿ ಹೊರಟಂತಹ ಜನರಿಗೆ ಅದೊಂದು ಸಾಮಾಜಿಕ ಸಮಸ್ಯೆ ಎಂದೇಕೆ ಪರಿಗಣಿಸುತ್ತೀರಿ? ಇಲ್ಲಿಯತನಕ 15 ರಾಜ್ಯಗಳಲ್ಲಿ 153 ಜಿಲ್ಲೆಗಳಲ್ಲಿ ವ್ಯಾಪಕವಾಗಿ ಕೆಲಸ ಮಾಡುತ್ತಿರುವಂತಹ ನಕ್ಸಲೀಯ ಚಟುವಟಿಕೆಗಳು ಸಾಮಾಜಿಕವಾದಂತಹ ಯಾವುದೇ ಚಳುವಳಿಗಳಾಗಲೀ, ಸಾಮಾಜಿಕವಾದಂತಹ ಯಾವುದೇ ಸಮಸ್ಯೆಗಳಿಗೆ ಇವತ್ತಿನತನಕ ಫಲಿತಾಂಶವನ್ನು ಕಂಡುಕೊಳ್ಳಲಿಲ್ಲ. ಅಂತಹ ಒಂದು ಪ್ರಜಾಪ್ರಭುತ್ವದ ವಿರೋಧಿಯಾದಂತಹ, ಭಯೋತ್ಪಾದನೆಯಿಂದ ಕೂಡಿರುವಂತಹ ಈ ಸಿದ್ಧಾಂತ, ಇದೊಂದು ಸಾಮಾಜಿಕ ಸಿದ್ಧಾಂತ, ಇದೊಂದು ಸಾಮಾಜಿಕ ಹೋರಾಟ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಏಕೆ ಈ ಹಿನ್ನೆಲೆಯಲ್ಲಿ ಹೇಳುತ್ತಿದ್ದಾರೆಂಬುದು ನಮಗೆ ಅರ್ಥ ಆಗುತ್ತಿಲ್ಲ. ಒರಿಸ್ಸಾ ಮತ್ತು ಬಿಹಾರದಲ್ಲಿ ನಾವು ರಸ್ತೆಯನ್ನು ಪರಿವರ್ತನೆ ಮಾಡುತ್ತೇವೆ. ರಸ್ತೆಯನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿ, ರಸ್ತೆ ರಿಪೇರಿಯನ್ನು ಮಾಡುತ್ತಿದ್ದಂತಹ ಕೂಲಿ ಕಾರ್ಮಿಕರನ್ನು ಆ ಎರಡೂ ರಾಜ್ಯದಲ್ಲಿ ಅಪಹರಣ ಮಾಡಿದಂತಹ ಕೆಲಸಗಳನ್ನು ನಕ್ಸಲೀಯರು ಮಾಡಿದ್ದಾರೆ. ಒಂದು ಸಾಮಾಜಿಕ ಬದಲಾವಣೆ ಮಾಡುತ್ತೇವೆ, ಅಭಿವೃದ್ಧಿ ಮಾಡುತ್ತೇವೆಂದು ಹೇಳಿ ಹೊರಟಂತಹ ಕೂಲಿ ಕಾರ್ಮಿಕರನ್ನು ಆ ಒರಿಸ್ಸಾ ಮತ್ತು ಬಿಹಾರದಲ್ಲಿ ಅಪಹರಣ ಮಾಡಿದಂತಹ ಉದಾಹರಣೆಗಳು ನಮಗೆ ಇತ್ತೀಚಿನ ದಿನಗಳಲ್ಲಿ ಕಾಣುತ್ತಿದೆ. ಹಾಗಾಗಿ ಅವರನ್ನು ಯಾವುದೇ ಹಂತದಲ್ಲಿ ಮಾತುಕತೆಗೆ ಕರೆಯುತ್ತೇವೆ, ಅವರ ಜೊತೆಗೆ ಮಾತುಕತೆಯನ್ನು ಮಾಡುತ್ತೇವೆ ಎನ್ನುವಂತಹ ಮಾತುಗಳಲ್ಲಿ

† ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸಿರುತ್ತಾರೆ.

ಇವತ್ತು ಯಾವುದೇ ಸತ್ಯಾಂಶ ಇಲ್ಲ. ಇತ್ತೀಚಿನ ಗ್ರಾಮ ಪಂಚಾಯತಿ ಚುನಾವಣೆ ಆದಂತಹ ಸಂದರ್ಭದಲ್ಲಿ ಕಾರ್ಕಳದ ನನ್ನ 7 ಪಂಚಾಯತಿ ಕ್ಷೇತ್ರಗಳಲ್ಲಿ ನಕ್ಸಲೀಯರ ಗುಂಪುಗಳು ಮನೆ-ಮನೆಗೆ ಬಂದು ಹೇಳಿ ಹೋಗಿದ್ದರು. ಈ ಬಾರಿಯ ಗ್ರಾಮ ಪಂಚಾಯತಿಯ ಚುನಾವಣೆಯನ್ನು ಬಹಿಷ್ಕರಿಸಬೇಕು ಎಂದು ಹೇಳಿ ಹೋಗಿದ್ದರು. ಪ್ರಜಾಪ್ರಭುತ್ವದಲ್ಲಿ ಚುನಾವಣೆ ಇವತ್ತು ನಮಗೆ ಬಹಳ ಪ್ರಮುಖವಾದಂತಹ ಅಂಗ. ಆ ಚುನಾವಣೆಯನ್ನೇ ಬಹಿಷ್ಕರಿಸಬೇಕು ಎಂದು ಹೇಳಿದಂತಹ ವ್ಯಕ್ತಿಗಳ ಜೊತೆ ಮಾತುಕತೆಯನ್ನು ಮಾಡುತ್ತೇವೆ ಎಂದು ಹೊರಟಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ. ಪ್ರಜಾಪ್ರಭುತ್ವದಲ್ಲಿ ಯಾರಿಗೆ ನಂಬಿಕೆ ಇಲ್ಲ. ಯಾರಿಗೆ ಮಾತುಕತೆಯಲ್ಲಿ ನಂಬಿಕೆ ಇಲ್ಲ, ಅಂತಹವರ ಜೊತೆಗೆ ನಾನು ಮಾತುಕತೆಯನ್ನು ಮಾಡುತ್ತೇನೆ. ಅದೊಂದು ಸಾಮಾಜಿಕ ಸಮಸ್ಯೆ ಎಂದು ಹೇಳಿ ಇವತ್ತು ಸರ್ಕಾರ ಹೇಳುತ್ತಿದೆ. ಆಂಧ್ರ ಪ್ರದೇಶದಲ್ಲಿ ನೂತನ ಸರ್ಕಾರ ಬಂದ ನಂತರ ನಕ್ಸಲೀಯರನ್ನು ಮಾತುಕತೆಗೆ ಆಹ್ವಾನ ಮಾಡಿದ್ದರು. ಆ ನಕ್ಸಲೀಯರನ್ನು ಮಾತುಕತೆಗೆ ಆಹ್ವಾನ ಮಾಡಿದಾಗ ಅಲ್ಲಿರುವಂತಹ ನಕ್ಸಲೀಯ ಮುಖಂಡರು ಕೊಟ್ಟಂತಹ ಹೇಳಿಕೆ ಏನು ಎಂದರೆ, ನಾವು ಮಾತುಕತೆಗೆ ಸಿದ್ಧ ಆದರೆ ಇದು ನಮ್ಮ ಕಾರ್ಯತಂತ್ರದ ಭಾಗ ಎಂದು ಹೇಳುತ್ತಲೇ, ಶಸ್ತ್ರಗಳನ್ನು ಇಟ್ಟುಕೊಂಡೇ ಮುಖ್ಯಮಂತ್ರಿಗಳ ಜೊತೆಗೆ ಮಾತುಕತೆಗೆ ಹೋದಂತಹ ಉದಾಹರಣೆ ಆಂಧ್ರ ಪ್ರದೇಶದಲ್ಲಿ ನಮಗೆ ಸಿಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವದ ಬಗ್ಗೆ ಯಾವುದೇ ನಂಬಿಕೆಯನ್ನು ಇಡದಿರುವಂತಹ ಜನ, ಯಾವುದೋ ಚೀನಾದಿಂದ ಬಂದಂತಹ, ಇನ್ಯಾವುದೋ ಭಯೋತ್ಪಾದಕ ಸಂಘಟನೆಗಳಿಂದ ಬಂದಂತಹ, ಬಂದೂಕುಗಳನ್ನು ಇಟ್ಟುಕೊಂಡೇ ಕಾಡುಗಳಲ್ಲಿ ಓಡಾಟ ಮಾಡುತ್ತಿರುವಂತಹ ಜನರ ಜೊತೆಗೆ ನಾನು ಮಾತುಕತೆಯನ್ನು ಮಾಡುತ್ತೇನೆ, ಅದು ಒಂದು ಸಾಮಾಜಿಕ ಸಮಸ್ಯೆ ಎಂದು ಸರ್ಕಾರ ಹೇಳುತ್ತಿದೆ ಎಂದರೆ ಇವತ್ತು ಇಡೀ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ನಾನು ಅಂದುಕೊಳ್ಳುತ್ತೇನೆ. ಇವತ್ತು ಬರ್ಕಣದಲ್ಲಿ ಕಳೆದ ಎರಡು ತಿಂಗಳುಗಳ ಹಿಂದೆ ಒಂದು ಎನ್‌ಕೌಂಟರ್ ಆಗುವಂತಹ ಒಂದು ಪ್ರಯತ್ನ ನಡೆಯಿತು. ಆ ಬರ್ಕಣದ ಗುಂಡಿನ ಚಕಮಕಿಯಲ್ಲಿ ನಕ್ಸಲೀಯರ ಅಡಗುತಾಣದಲ್ಲಿ ಇವತ್ತು ಸಿಕ್ಕಿದ್ದು ಏನು? ಸಾಮಾಜಿಕ ಆಂಧೋಲನ, ಸಾಮಾಜಿಕ ಸಮಸ್ಯೆ ಎಂದು ಸರ್ಕಾರ ಹೇಳುತ್ತಿರುವುದರಿಂದ ಅವತ್ತು ಸಿಕ್ಕಂತಹ ಘಟನೆಗಳನ್ನು ನೆನಪು ಮಾಡಿಕೊಳ್ಳಬೇಕು. ಅವತ್ತು ಮಾತುಕತೆ ಆದಂತಹ ಸಂದರ್ಭದಲ್ಲಿ ನಕ್ಸಲೀಯರ ಅಡಗು ತಾಣದಲ್ಲಿ ಸಿಕ್ಕಿದ್ದು, ಯಾವುದೋ ಸ್ತ್ರೀಯರ ಜೊತೆಗೆ ಓಡಾಟ ಮಾಡುತ್ತಿರುವಂತಹ ಸಂದರ್ಭಗಳಲ್ಲಿ ಗರ್ಭಧಾರಣೆಯನ್ನು ಮುಂದೂಡಬೇಕು ಎನ್ನುವ ಕಾರಣಕ್ಕೋಸ್ಕರ ಇರತಕ್ಕ ಮಾತ್ರೆಗಳು ಅಲ್ಲಿ ಸಿಕ್ಕಿತು. ಭಯಾನಕವಾದಂತಹ ಬಂದೂಕುಗಳು, ಮತ್ತು ನೆಲ ಬಾಂಬುಗಳು ಅಲ್ಲಿ ಸಿಕ್ಕಿದ್ದವು. 300 ಚದರ ಮೀಟರ್ ಇರುವಂತಹ ಕಟ್ಟಡಗಳನ್ನು ಧ್ವಂಸ ಮಾಡುವಂತಹ ಅತ್ಯಾಧುನಿಕವಾದಂತಹ ಶಸ್ತ್ರಾಸ್ತ್ರಗಳು ಅಲ್ಲಿ ಸಿಕ್ಕಿದೆ ಎನ್ನುವಂತಹ ವರದಿಯನ್ನು ಪೊಲೀಸ್ ಇಲಾಖೆ ಕೊಟ್ಟಿತು. ಈ ರೀತಿ ಗರ್ಭಧಾರಣೆಯನ್ನು ಮುಂದೂಡುವಂತಹ ಮಾತ್ರೆಗಳು, ನಿರೋಧ್‌ಗಳನ್ನು ಇಟ್ಟುಕೊಂಡಿರುವಂತಹ, ಅಡಗು ತಾಣಗಳನ್ನು ಹೊಂದಿದ ನಕ್ಸಲೀಯರ ಬಗ್ಗೆ ಇವತ್ತು ಸರ್ಕಾರ ಸಾಮಾಜಿಕ ಸಮಸ್ಯೆ ಎಂದು ಹೇಳಲಿಕ್ಕೆ ಹೊರಟಿದೆ. ಹಾಗಾಗಿ ಇವತ್ತು ಯಾವ ರೀತಿಯಲ್ಲಿ ಹಿಂಸೆಗಳನ್ನು ಪ್ರಚೋದಿಸಿದ್ದರು? ಕಳೆದ 15 ರಾಜ್ಯಗಳಲ್ಲಿ, ಇತ್ತೀಚಿನ ವರ್ಷಗಳಲ್ಲಿ ಪ್ರಚೋದಿಸಿದ್ದರು ಎನ್ನುವುದಕ್ಕೆ ಪತ್ರಿಕೆಯಲ್ಲಿ ಬಂದಂತಹ ಒಂದೇ ಒಂದು ತುಣುಕನ್ನು ಮಾತ್ರ ನಾನು ಉಲ್ಲೇಖ ಮಾಡುತ್ತಿದ್ದೇನೆ. ಏಕೆಂದರೆ ಆ ರೀತಿ

ಹಿಂಸೆಯನ್ನು ಪ್ರಚೋದನೆ ಮಾಡಿ ಇಡೀ ಬಡ ಜನರನ್ನು ದಿಕ್ಕು ತಪ್ಪಿಸುತ್ತಿರುವಂತಹ ಹಿಂಸೆಯನ್ನೇ ಒಂದು ಪ್ರವೃತ್ತಿ ಮಾಡಿಕೊಂಡಿರುವಂತಹ ಜನಾಂಗದ ಜೊತೆಗೆ ಮಾತುಕತೆ ಮಾಡುತ್ತೇವೆ ಎಂದು ಹೇಳಿ ಸರ್ಕಾರ ಏನು ಹೊರಟಿದೆ, ಪಕ್ಕದ ಎರಡು ಮೂರು ರಾಜ್ಯಗಳಲ್ಲಿ ಯಾವ ರೀತಿ ಹಿಂಸೆ ಮಾಡಿದ್ದರು ಎನ್ನುವುದಕ್ಕೆ ಪತ್ರಿಕೆಯಲ್ಲಿ ಒಂದೇ ಒಂದು ತುಣುಕು ಬಂದಿದೆ. ಅದನ್ನು ಉಲ್ಲೇಖ ಮಾಡುತ್ತಿದ್ದೇನೆ ಅಷ್ಟೇ. "ಚಂದ್ರಾಚಲಂನಲ್ಲಿ ಜೀಪ್ ಒಂದರಲ್ಲಿ ಪ್ರಯಾಣಿಸುತ್ತಿದ್ದ ಮಾರ್ಕಿಸ್ಟ್ ಚಿಂತಕರನ್ನು ನಕ್ಸಲೀಯರು ಅಡ್ಡಗಟ್ಟಿದರು. ಅದರಲ್ಲಿದ್ದಂತಹ ಶಾಸಕ ಕೆ.ಬೊಕ್ಕಿ, ಬಿ.ಚಂದ್ರ ಮತ್ತು ಭೀಷ್ಮ ರಾವ್ ಅವರನ್ನು ಹೊರಗೆಳೆದರು. ಭೀಷ್ಮ ರಾವ್ ಅವರ ಕೈ ಮತ್ತು ಕಾಲುಗಳನ್ನು ಗರಗಸದಿಂದ ಕೊಯ್ದರು. ಅವರು ರಕ್ತ ಸ್ರಾವದಿಂದ ಸಾವನ್ನಪ್ಪಿದ್ದು ನೋಡಿ ನಕ್ಸಲೀಯರು ಆನಂದಿಸಿದರು." ಎಂದು ಹೇಳಿ ಒಂದು ಪತ್ರಿಕೆ ಇತ್ತೀಚೆಗೆ ನಡೆದಂತಹ ಘಟನೆಯನ್ನು ಉಲ್ಲೇಖ ಮಾಡುತ್ತದೆ. ಈ ರೀತಿ ಹಿಂಸೆಯನ್ನು ಅತ್ಯಂತ ಬಹಳ ದೊಡ್ಡ ಪ್ರಮಾಣದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮಾಡುತ್ತಿರುವಂತಹ ಜನರ ಜೊತೆಗೆ ನಾನು ಮಾತುಕತೆ ಮಾಡುತ್ತೇನೆ. ಅದೊಂದು ಸಾಮಾಜಿಕ ಸಮಸ್ಯೆ ಎಂದು ಸರ್ಕಾರ ಹೇಳಲಿಕ್ಕೆ ಹೊರಟಿದೆ: ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ವಿನಂತಿಯನ್ನು ಮಾಡುವಂತಹದ್ದು ಏನು ಅಂದರೆ ನಕ್ಸಲೀಯರ ಜೊತೆಗೆ ಯಾವುದೇ ಮಾತುಕತೆಯನ್ನು ಮಾಡುವಂತಹ ಅಗತ್ಯ ಇಲ್ಲ. ಬದಲಾಗಿ ಇವತ್ತು ನಕ್ಸಲೀಯ ಪ್ರಭಾವಗಳು ಯಾವ್ಯಾವ ಪ್ರದೇಶಗಳಿಗೆ ಒಳಗಾಗಿವೆ? ಅಲ್ಲಿರುವಂತಹ ಜನ ಪ್ರತಿನಿಧಿಗಳನ್ನು, ಅಲ್ಲಿ ಯಾವ ಸಮಸ್ಯೆಗಳು ಆಗಿವೆ ಎನ್ನುವಂತಹ ಬಗ್ಗೆ ಒಮ್ಮೆಯೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಮಾತುಕತೆಗೆ ಕರೆಯಲಿಲ್ಲ. ಇವತ್ತು ನಕ್ಸಲೀಯ ಚಟುವಟಿಕೆ ಬೆಳೆಯುತ್ತಿರುವಂತಹ ಶೃಂಗೇರಿ ಇರಬಹುದು, ಮೂಡಿಗೆರೆ, ಕಾರ್ಕಳ, ಹೊಸನಗರ ಅಥವಾ ಕುಂದಾಪುರ, ತೀರ್ಥಹಳ್ಳಿ. ಈ ಭಾಗದ ಯಾವುದೇ ಜನಪ್ರತಿನಿಧಿಗಳನ್ನು ಅಲ್ಲಿ ಯಾವ ಸಮಸ್ಯೆ ಇವತ್ತು ನಿರ್ಮಾಣ ಆಗಿದೆ? ಇಷ್ಟು ಉಲ್ಬಣ ಆಗಲಿಕ್ಕೆ ಕಾರಣ ಏನು ಎನ್ನುವಂತಹ ಯಾವುದೇ ಸಂಗತಿಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿರುವ ಜನ ಪ್ರತಿನಿಧಿಗಳ ಜೊತೆ ಮಾತುಕತೆ ಮಾಡಲಿಲ್ಲ. ಪ್ರತ್ಯಕ್ಷವಾಗಿ ನಕ್ಸಲೀಯ ಚಟುವಟಿಕೆಯ ಜೊತೆಗೆ ನಾವು ಕೆಲಸವನ್ನು ಮಾಡುತ್ತಿದ್ದೇವೆ. ಅವರ ವಿರುದ್ಧ ಹೋರಾಟ ಮಾಡುವಂತಹ ಶಾಸಕರು ನಾವಿದ್ದೇವೆ. ಇವರನ್ನು ಕರೆಸಿ ಮಾತುಕತೆ ಮಾಡುವಂತಹ, ಅವರ ಸಮಸ್ಯೆಗಳನ್ನು ಕೇಳುವಂತಹ ಪ್ರಯತ್ನವನ್ನು ಇಲ್ಲಿಯವರೆಗೂ ಮಾನ್ಯ ಮುಖ್ಯಮಂತ್ರಿಗಳು ಮಾಡಲೇ ಇಲ್ಲ. ನಾನು ಈ ಸದನದಲ್ಲಿ ಹೇಳುತ್ತಿದ್ದೇನೆ. ಎನ್‌ಕೌಂಟರ್ ಕಳೆದ ವರ್ಷ ಏನಾಯಿತು? ಮೊನ್ನೆ ಮೆಣಸಿನಹಾಡಿನಲ್ಲಿ ನಡೆದಂತಹ ಎನ್‌ಕೌಂಟರ್ ಈ ಎನ್‌ಕೌಂಟರನ್ನು ಸಮರ್ಥಿಸಲೇಬೇಕು. ಪೊಲೀಸರನ್ನು ಬೆನ್ನು ತಟ್ಟುವಂತಹ ಕೆಲಸವನ್ನು ನಾವು ಮಾಡಲೇ ಬೇಕು. ಇವತ್ತು ಮಾನ್ಯ ಗದ್ದಾರ್ ಅವರು ಬಂದಂತಹ ಸಂದರ್ಭದಲ್ಲಿ ಇದಕ್ಕೆ ಗುಂಡಿನ ಮುಖಾಂತರ ಉತ್ತರವನ್ನು ಕೊಡುತ್ತೇವೆ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳ ಮನೆಯಿಂದ ಹೇಳಿ ಹೋಗುತ್ತಾರೆ ಎಂದಾದರೆ ನಾವೂ ಕೂಡ ನಕ್ಸಲೀಯರಿಗೆ ಇವತ್ತು ಗುಂಡಿನ ಮುಖಾಂತರವೇ ಉತ್ತರ ಕೊಡುತ್ತೇವೆ ಎನ್ನುವಂತಹ ಅತ್ಯಂತ ಪೌರುಷದ ಮಾತನ್ನು ಸರ್ಕಾರ ಹೇಳಬೇಕಾಗಿತ್ತು. ಅದರ ಬದಲಾಗಿ ಎನ್‌ಕೌಂಟರ್ ಆದಂತಹ ಸಂದರ್ಭದಲ್ಲಿ ಅದರಲ್ಲಿ ಸತ್ತಂತಹ ಭಯೋತ್ಪಾದಕ ನಕ್ಸಲೀಯನನ್ನು ಹುತಾತ್ಮ ಎಂದು ಚಿತ್ರಣ ಮಾಡಿದ್ದು. ಮೊನ್ನೆ ಎರಡು ಜನ ಸತ್ತು ಹೋದಂತಹ ಸಂದರ್ಭದಲ್ಲಿ ಅವರೂ ಕೂಡ ಇನ್ನ್ಯಾವುದೋ ಹುತಾತ್ಮರ ತರಹ ಹಾಡಿ ಹೊಗಳಿದಂತಹ ಸಂಗತಿಗಳನ್ನು ಮಾಡಿದಾಗ, ಸರ್ಕಾರ ಪೊಲೀಸರಿಗೆ ಬೆನ್ನು ತಟ್ಟುವಂತಹ ಕೆಲಸವನ್ನು

ಮಾಡಬೇಕಾಗಿತ್ತು. ಮಾನ್ಯ ಸಿ.ಟಿ. ರವಿ ಅವರು ಉಲ್ಲೇಖ ಮಾಡಿದರು. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯಿಂದ ಪೊಲೀಸರಿಗೆ ಎಷ್ಟು ಹತಾಶೆ ಆಯಿತು ಎಂದು ಹೇಳಿದರು. ಮೆಣಸಿನ ಹಾಡಿ ಘಟನೆ ಆಯಿತು. ಆ ಸಂದರ್ಭದಲ್ಲಿ ಅಲ್ಲಿಂದ ಓಡಿ ಬಂದ 6 ಜನ ನಕ್ಸಲರು ಕಾರ್ಕಳಕ್ಕೆ ಬಂದಿದ್ದಾರೆ ಎಂಬ ಸುದ್ದಿ ಬಂತು. ತಕ್ಷಣ ಅಲ್ಲಿನ ಸ್ಥಳೀಯರು ಬಂದು ನನಗೆ ಸುದ್ದಿ ಮುಟ್ಟಿಸಿದರು. ನಾನು ಅಂದಿನ ಪೊಲೀಸ್ ಮುಖ್ಯಾಧಿಕಾರಿಗಳನ್ನು ಉದ್ದೇಶಿಸಿ, ಯಾವ ಮನೆಯಲ್ಲಿ ಆರು ಜನ ನಕ್ಸಲೈಟರು ಬಂದು ಉಳಿದುಕೊಂಡಿದ್ದಾರೆ? ಎಷ್ಟೊತ್ತಿಗೆ ಬಂದು ಉಳಿದುಕೊಂಡಿದ್ದಾರೆ? ಆ ಸ್ಥಳಕ್ಕೆ ಯಾವ ರೀತಿ ತೆರಳಬೇಕೆಂಬ ಮಾರ್ಗದ ಸಮೇತ ವಿಳಾಸವನ್ನು ಅವರಿಗೆ ನೀಡಿದೆ. ಆದರೆ, ಈ ನಿಟ್ಟಿನಲ್ಲಿ ಅಂದಿನ ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಕಾರಣವೇನೆಂದರೆ, ಅವೊತ್ತಿನ ಎನ್‌ಕೌಂಟರ್ ಅನ್ನು ಸಮರ್ಥಿಸಿಕೊಳ್ಳುವುದಕ್ಕೆ ಬದಲು ಪೊಲೀಸರ ಮಾನಸಿಕ ಸ್ಥೈರ್ಯ ಕುಗ್ಗಿಸುವ ಪ್ರಯತ್ನ ಸರ್ಕಾರದಿಂದ ಆಗಿಹೋಗಿತ್ತು ! ಈದು ಎನ್‌ಕೌಂಟರ್ ನಡೆದ ಸಂದರ್ಭದಲ್ಲಿ ಅಲ್ಲಿನ ಪೊಲೀಸ್ ಮುಖ್ಯಾಧಿಕಾರಿಗಳನ್ನೇ ಅಪರಾಧಿ ಎನ್ನುವ ರೀತಿಯಲ್ಲಿ ಚಿತ್ರಿಸಲಾಯಿತು. ಹೀಗಾಗಿ, ಇನ್ನೊಂದು ಹೊಸ ಸಾಹಸ ಮಾಡಬೇಕೆನ್ನುವ ಉತ್ಸಾಹ ಅಂದಿನ ಪೊಲೀಸ್ ಮುಖ್ಯಾಧಿಕಾರಿಗಳಿಗೆ ಇರಲಿಲ್ಲ. ಅಕಸ್ಮಾತ್ ಎನ್‌ಕೌಂಟರ್‌ಗೆ ಸಂಬಂಧಿಸಿದಂತೆ ಸರ್ಕಾರ ಅವರ ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದರೆ, ಮತ್ತೊಮ್ಮೆ ಆರು ಜನ ನಕ್ಸಲೈಟ್ ಭಯೋತ್ಪಾದಕರನ್ನು ಕಾರ್ಕಳದಲ್ಲಿ ಹಿಡಿಯುವ ಪ್ರಯತ್ನವನ್ನು ಅಲ್ಲಿನ ಪೊಲೀಸ್ ಇಲಾಖೆಯವರು ಮಾಡುತ್ತಿದ್ದರೆಂಬ ಬಗ್ಗೆ ನನಗೆ ವಿಶ್ವಾಸವಿತ್ತು. ಆದರೆ, ಸರ್ಕಾರ ಈ ರೀತಿ ನಿಲುವು ತಳೆದ ಪರಿಣಾಮ ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ. ಈ ಸಂದರ್ಭದಲ್ಲಿ ನನಗನ್ನಿಸುವಂಥಾದ್ದುಃ ಪೊಲೀಸ್ ಇಂಟೆಲಿಜೆನ್ಸಿಯನ್ನು ಯಾವ ರೀತಿ ಪ್ರೋತ್ಸಾಹಿಸಬೇಕಿತ್ತೋ, ಆ ರೀತಿಯಲ್ಲಿ ಸರ್ಕಾರ ಪ್ರೋತ್ಸಾಹಿಸಲಿಲ್ಲ. ಪ್ರತಿನಿತ್ಯವೂ ನಕ್ಸಲೈಟ್ ಚಟುವಟಿಕೆ ನಡೆಯುತ್ತಿರುವ ಸಂದರ್ಭದಲ್ಲಿ ಬೇರೆ ಬೇರೆ ಹೇಳಿಕೆಗಳು ಬರುತ್ತಿವೆ. 'ಗಂಗಾಧರನ್' ಎನ್ನುವ ವ್ಯಕ್ತಿ ಹೇಳಿಕೆಗಳನ್ನು ಕೊಡುತ್ತಲೇ ಇದ್ದಾರೆ. ಇವೊತ್ತಿನ ತನಕವೂ ಗಂಗಾಧರನ್ ಎನ್ನುವ ವ್ಯಕ್ತಿ ಯಾರು ಎನ್ನುವ ಮಾಹಿತಿ ಸರ್ಕಾರದ ಬಳಿ ಇಲ್ಲವೆಂದು ನಾನು ಭಾವಿಸುತ್ತೇನೆ, ಏಕೆಂದರೆ, ಯಾರೋ ಒಂದಿಷ್ಟು ಜನರು ಇಷ್ಟು ದೊಡ್ಡ ಪ್ರಮಾಣದಲ್ಲಿ ಬಂದೂಕುಗಳನ್ನು ಹಿಡಿದುಕೊಂಡು ಕಾಡಿನಲ್ಲಿ ವಾಸಿಸುತ್ತಿದ್ದರೆ, ಇನ್ನೊಂದಿಷ್ಟು ಜನರು ಪರೋಕ್ಷವಾಗಿ ನಕ್ಸಲೈಟರಿಗೆ ಬೆಂಬಲ ನೀಡುತ್ತಾ ನಾಡಿನಲ್ಲಿ ವಾಸಿಸುತ್ತಿದ್ದಾರೆ. ಅವರನ್ನು ಗುರ್ತಿಸುವ ಕೆಲಸವನ್ನು ಸರ್ಕಾರ ಮಾಡಬೇಕಿತ್ತು, ಮಾಡಲಿಲ್ಲ.

ಆದಕಾರಣ, ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯಿಸುತ್ತಿರುವುದೇನೆಂದರೆ, ಮೆಣಸಿನ ಹಾಡ್ಯ ಘಟನೆ ಜರುಗಿದ ಸಂದರ್ಭದಲ್ಲಿ ಗದ್ದರ್ ನೇತೃತ್ವದಲ್ಲಿ ಸಾಕಷ್ಟು ಜನರು ಮುಖ್ಯಮಂತ್ರಿಗಳ ಮನೆ ಮುಂದೆ ಪ್ರತಿಭಟನೆ ನಡೆಸುವ ಮೂಲಕ ಎಚ್ಚರಿಕೆ ಕೊಟ್ಟರು. ಒಂದಷ್ಟು ಜನ ಪತ್ರಕರ್ತರು ಕೂಡ ಆ ಹೋರಾಟದಲ್ಲಿದ್ದರು. ಆ ಹೋರಾಟದಲ್ಲಿ ಪಾಲ್ಗೊಂಡ ಒಬ್ಬ ಮಹಿಳಾ ಪತ್ರಕರ್ತರ ಫೋಟೋ ಕೂಡ ನನ್ನ ಬಳಿ ಇದೆ. ತಮ್ಮ ಬಾಯಿಗೆ ಕಪ್ಪು ಬಟ್ಟೆ ಬಿಗಿದುಕೊಳ್ಳುವ ಮೂಲಕ ಒಬ್ಬ ಮಹಿಳಾ ಪತ್ರಕರ್ತರು ಹೋರಾಟದಲ್ಲಿ ಭಾಗವಹಿಸಿದ್ದರು. "ಗದ್ದರ್ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ" ಎಂದು ಸರ್ಕಾರ ಹೇಳಿತು. ಗದ್ದರ್ ಅವರನ್ನು ಇಲ್ಲಿಯವರೆಗೂ ಕರೆದುಕೊಂಡು ಬಂದು ಹೋರಾಟ ರೂಪಿಸಿ ಅವರ ಮುಖಾಂತರ ಹೇಳಿಕೆ ಕೊಟ್ಟ ನಮ್ಮ ರಾಜ್ಯದ ಒಬ್ಬ ಮಹಿಳಾ ಪತ್ರಕರ್ತರ ವಿರುದ್ಧ ಸರ್ಕಾರ ಇದುವರೆಗೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇಷ್ಟೆಲ್ಲಾ

ಆ ಕುರಿತಂತೆ ಪೊಲೀಸ್ ಇಲಾಖೆಗೆ ತಿಳಿಸಿದ್ದರೂ, ಈ ನಿಟ್ಟಿನಲ್ಲಿ ಸರ್ಕಾರ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಮಾತನಾಡುತ್ತಾ, 'ಕರ್ನಾಟಕ ವಿಮೋಚನ ರಂಗದ ನೇತೃತ್ವದಲ್ಲಿ ಇಷ್ಟೆಲ್ಲಾ ಕೆಲಸಗಳು ನಡೆಯುತ್ತಿದೆ' ಎಂದು ತಿಳಿಸಿದ್ದಾರೆ. ನಕ್ಸಲೈಟ್ ಚಟುವಟಿಕೆಯನ್ನು ಹತ್ತಿಕ್ಕಬೇಕಾದರೆ ಸರ್ಕಾರಕ್ಕೆ ಇಚ್ಛಾಶಕ್ತಿಯ ಅಗತ್ಯವಿದೆ. ಆ ಇಚ್ಛಾಶಕ್ತಿಯನ್ನು ಉಪಯೋಗಿಸಿಕೊಂಡು ಕರ್ನಾಟಕ ವಿಮೋಚನ ರಂಗವು ಇವೊತ್ತು ಬೇರೆ ಬೇರೆ ವಿಶ್ವವಿದ್ಯಾಲಯಗಳ ಮುಖಾಂತರ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ತನ್ನತ್ತ ಸೆಳೆಯುವ ಪ್ರಯತ್ನ ಮಾಡುತ್ತಿದೆ. ಈ ಕಾರಣಕ್ಕಾಗಿ ಕರ್ನಾಟಕ ವಿಮೋಚನ ರಂಗವನ್ನು ನಿಷೇಧಿಸಬೇಕು. ಪೊಲೀಸರಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸಿ ನಕ್ಸಲೈಟ್‌ಗಳನ್ನು ಹತ್ತಿಕ್ಕಲು ಮುಕ್ತ ಅವಕಾಶ ಕಲ್ಪಿಸಿಕೊಡಬೇಕು. ಈ ವಿಚಾರದಲ್ಲಿ ಯಾವುದೇ ರೀತಿಯಲ್ಲೂ ಮೂಗು ತೂರಿಸುವ ಪ್ರಯತ್ನವನ್ನು ಸರ್ಕಾರ ಮುಂದಿನ ದಿವಸಗಳಲ್ಲಿ ಮಾಡಬಾರದು. ಶಾಸಕನಾಗಿ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನಕ್ಸಲೈಟ್ ಪೀಡಿತ ಭಾಗದ ಜನರೊಂದಿಗೆ ನೇರವಾಗಿ ಮಾತುಕತೆ ನಡೆಸುತ್ತಿದ್ದೇನೆ. ದಕ್ಷ ಪೊಲೀಸ್ ಅಧಿಕಾರಿಗಳನ್ನು ಎಲ್ಲಾ ಸ್ಥಳಗಳಲ್ಲೂ ನೇಮಿಸಿದಲ್ಲಿ ನಕ್ಸಲೈಟರ ವಿರುದ್ಧ ಹೋರಾಟ ನಡೆಸುತ್ತಿರುವ ಅಲ್ಲಿನ ಜನರ ಮುಖಾಂತರ ನಕ್ಸಲೈಟರನ್ನು ನಿಶ್ಚಿತವಾಗಿಯೂ ಹಿಮ್ಮೆಟ್ಟಿಸಲು ನಮಗೆ ಸಾಧ್ಯವಾಗುತ್ತದೆ. ಹಾಗಾಗಿ, ನನ್ನ ಕ್ಷೇತ್ರದಲ್ಲಿ ನಕ್ಸಲೈಟ್ ಚಟುವಟಿಕೆ ತೀವ್ರವಾಗಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಅಲ್ಲಿನ 10–15 ಗ್ರಾಮಗಳಲ್ಲಿರುವ ಎಲ್ಲಾ ಮನೆಗಳಿಗೂ ವೈಯಕ್ತಿಕವಾಗಿ ಭೇಟಿ ಕೊಟ್ಟಿದ್ದೇನೆ. ತನ್ಮೂಲಕ ಅಲ್ಲಿನ ಎಲ್ಲಾ ಜನರಿಗೂ ವಿಶ್ವಾಸವಿಡುವ ಪ್ರಯತ್ನ ಮಾಡುತ್ತಿದ್ದೇವೆ. ಆದರೆ, ದಕ್ಷ ಪೊಲೀಸ್ ಅಧಿಕಾರಿಗಳನ್ನು ನೇಮಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ನಾವು ಪರಿಪರಿಯಾಗಿ ಬೇಡಿಕೊಂಡಿದ್ದರೂ ಇಲ್ಲಿಯ ತನಕವೂ ಒಬ್ಬ ದಕ್ಷ ಅಧಿಕಾರಿಯನ್ನು ನೇಮಿಸಲಿಲ್ಲ. ನಮ್ಮ ಭಾಗದಲ್ಲಿ ನೇಮಿಸಿರುವ ಪೊಲೀಸ್ ಅಧಿಕಾರಿಗಳು ನಕ್ಸಲೈಟ್‌ರೊಂದಿಗೆ ಕೈ ಜೋಡಿಸುವವರಾಗಿರುವುದರಿಂದ ಅವರನ್ನು ಬದಲಾಯಿಸಿದರೆ ನನ್ನ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಕ್ಸಲೈಟರನ್ನು ಹಿಮ್ಮೆಟ್ಟಿಸಲು ಸಾಮಾನ್ಯ ಜನರೊಂದಿಗೆ ಕಾರ್ಯತಂತ್ರ ರೂಪಿಸುತ್ತೇವೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ನೀಡಲು ಇಚ್ಛಿಸುತ್ತೇನೆ. ಇಚ್ಛಾಶಕ್ತಿಯ ಕೊರತೆಯಿಂದ ನಕ್ಸಲೈಟರನ್ನು ಹತ್ತಿಕ್ಕಲಿಲ್ಲವೆಂದರೆ, ಪಶ್ಚಿಮಘಟ್ಟದಲ್ಲಿ ಮುಂದಿನ ದಿನಗಳಲ್ಲಿ ಯಾವ ರೀತಿಯ ಅನಾಹುತವಾಗುತ್ತದೆಂದರೆ, ಇವೊತ್ತು ಅತ್ಯಂತ ಪ್ರಸಿದ್ಧ ಪ್ರವಾಸಿ ತಾಣಗಳಾಗಿರುವ ಶೃಂಗೇರಿ, ಹೊರನಾಡು, ಕಾರ್ಕಳದ ಗೊಮ್ಮಟೇಶ್ವರ ಬೆಟ್ಟ, ಚತುರ್ಮುಖ ಬಸದಿ, ಆ ಕಡೆಯ ಕೊಲ್ಲೂರು ಮೂಕಾಂಬಿಕೆ ದೇವಸ್ಥಾನ ಮತ್ತು ಈ ಕಡೆಯ ಉಡುಪಿಯ ಶ್ರೀ ಕೃಷ್ಣ ದೇಗುಲದ ಅಕ್ಕಪಕ್ಕದ ಪ್ರದೇಶಗಳಲ್ಲಿ ನಕ್ಸಲೈಟ್ ಚಟುವಟಿಕೆಗಳು ನಡೆಯುತ್ತಿವೆ. ಈ ರೀತಿ ಪ್ರಸಿದ್ಧ ಪ್ರವಾಸಿ ತಾಣಗಳು ಪ್ರವಾಸಿಗರಿಂದ ಸುತ್ತುವರೆದಿರುವ ಭಾಗಗಳಲ್ಲಿ ನಕ್ಸಲೈಟ್ ಚಟುವಟಿಕೆಗಳು ದೊಡ್ಡ ಪ್ರಮಾಣದಲ್ಲಿ ಜರುಗುತ್ತಿದ್ದರೂ ಈ ಬಗ್ಗೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುವುದಿಲ್ಲವೆಂದರೆ, ಮುಂದಿನ ದಿವಸಗಳಲ್ಲಿ ಪ್ರವಾಸಿಗರು ಈ ಭಾಗದ ಪ್ರದೇಶಗಳಲ್ಲಿ ನಿರ್ಭೀತಿಯಿಂದ ಓಡಾಡಲು ಸಾಧ್ಯವಾಗುವುದಿಲ್ಲ. ಆದುದರಿಂದ, ಸರ್ಕಾರ ಈ ನಿಟ್ಟಿನಲ್ಲಿ ವಿಶೇಷ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಆಗ್ರಹಿಸುತ್ತಾ, ಪೊಲೀಸ್ ಇಲಾಖೆಗೆ ಈ ಸಂಬಂಧ ಸಂಪೂರ್ಣ ಅಧಿಕಾರ ನೀಡಬೇಕೆಂಬ ಮಾತನ್ನು ಹೇಳಬಯಸುತ್ತೇನೆ.

ಕೊನೆಯದಾಗಿ, ಕಳೆದ ಒಂದು ವರ್ಷದ ಹಿಂದೆ ನನ್ನ ಮತಕ್ಷೇತ್ರದಲ್ಲಿ ಸುಚಿತಾ ಶೆಟ್ಟಿ ಎನ್ನುವ ಒಬ್ಬ ವಿದ್ಯಾರ್ಥಿನಿಯ ಕೊಲೆಯಾಯಿತು. ಕೊಲೆ ಪ್ರಕರಣದ ಬಗ್ಗೆ ಸಿ.ಓ.ಡಿ.ಯಿಂದ

ತನಿಖೆಯಾಗಿದ್ದರೂ ವಿದ್ಯಾರ್ಥಿನಿಯನ್ನು ಯಾರು ಅತ್ಯಾಚಾರ ಮಾಡಿ ಕೊಲೆ ಮಾಡಿದರೆಂಬ ಬಗ್ಗೆ ಸಂಬಂಧಪಟ್ಟ ಆರೋಪಿಗಳನ್ನು ಬಂಧಿಸಬೇಕೆಂದು ಸಾಕಷ್ಟು ಮನವಿಗಳನ್ನು ಸಲ್ಲಿಸಿ, ಹೋರಾಟಗಳನ್ನು ನನ್ನ ಕ್ಷೇತ್ರದ ಎಲ್ಲಾ ಭಾಗಗಳಲ್ಲೂ ನಡೆಸಲಾಯಿತು. ಇದು ನಡೆದು ಒಂದು ವರ್ಷ ಕಳೆದರೂ ದಿವಂಗತ ಸುಚಿತಾ ಶೆಟ್ಟಿಯ ಕೊಲೆ ಆರೋಪಿಗಳನ್ನು ಬಂಧಿಸುವ ಯಾವುದೇ ಕ್ರಮಗಳನ್ನು ಸರ್ಕಾರ ಇಲ್ಲಿಯವರೆಗೆ ಕೈಗೊಳ್ಳಲಿಲ್ಲ. ಇದರಿಂದಾಗಿ ಕ್ಷೇತ್ರದ ಜನರು ಇವೊತ್ತು ಪೋಲೀಸ್ ಇಲಾಖೆಯನ್ನು ಅನುಮಾನದಿಂದ ನೋಡುವ ಸ್ಥಿತಿ ನಿರ್ಮಾಣವಾಗಿದೆ. ಒಂದು ವರ್ಷದ ಹಿಂದೆ ಸುಚಿತಾ ಶೆಟ್ಟಿಯ ಕೊಲೆಯಾಗಿತ್ತೋ, ಅವರನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿದ್ದಾರೋ, ಈ ಸಂಬಂಧದ ಆರೋಪಿಗಳನ್ನು ಸರ್ಕಾರ ಇವೊತ್ತು ಬಂಧಿಸುವ ಮೂಲಕ ಪೋಲೀಸ್ ಇಲಾಖೆ ಮೇಲೆ ಜನರಿಗೆ ವಿಶ್ವಾಸವುಂಟು ಮಾಡಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಆಗ್ರಹಿಸುತ್ತಾ, ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಛೇರ್ಮನ್‌ರಿಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಪಾಪರೆಡ್ಡಿ (ರಾಯಚೂರು): ಮಾನ್ಯ ಛೇರ್ಮನ್‌ರವರೆ, ಕರ್ನಾಟಕದಲ್ಲಿ ಮೊತ್ತಮೊದಲ ಬಾರಿಗೆ ನಕ್ಸಲೈಟರು ಕಾಣಿಸಿಕೊಂಡದ್ದು ನನ್ನ ಮತಕ್ಷೇತ್ರವಾದ ರಾಯಚೂರಿನಲ್ಲಿ, ಅಲ್ಲಿ ಕಾಣಿಸಿಕೊಂಡ ನಕ್ಸಲೈಟ್ ಚಟುವಟಿಕೆ ಸುಮಾರು ಹತ್ತು ವರ್ಷಗಳ ಕಾಲ ನಡೆಯುತ್ತಾ ಬಂದಿದೆ. ಆ ಭಾಗದಲ್ಲಿ ಈ ಹಿಂದೆ ಅಲ್ಲಿದ್ದ ನಾಲ್ಕು ಜನ ನಕ್ಸಲೈಟರ ವಿರುದ್ಧ ಜರುಗಿದ ಒಂದು ಕಾರ್ಯಾಚರಣೆಯಲ್ಲಿ ಒಬ್ಬರು ಸತ್ತು ಮೂರು ಜನರು ಉಳಿದುಕೊಂಡರು. ಉಳಿದುಕೊಂಡಿರುವ ನಕ್ಸಲೈಟರು ಈಗ ಪಶ್ಚಿಮಘಟ್ಟದತ್ತ ಬರುತ್ತಿದ್ದಾರೆ. ನಕ್ಸಲೈಟ್ಸ್ ಚಟುವಟಿಕೆ ಬಗ್ಗೆ ಈಗ ತಾನೇ ಹಿರಿಯ ಮಾನ್ಯ ಸದಸ್ಯರು ಮಾತನಾಡುತ್ತಾ, "ಜನರನ್ನು ಸುಧಾರಿಸುವ ಸಲುವಾಗಿ ನಕ್ಸಲೈಟರು ಹೋರಾಟ ಮಾಡುತ್ತಿದ್ದಾರೆ" ಎಂದು ಏನು ಹೇಳಿದ್ದಾರೆ, ಆ ರೀತಿಯಲ್ಲಿ ಅವರು ಹೋರಾಟ ಮಾಡುತ್ತಿಲ್ಲ. ನನಗೆ ಗೊತ್ತಿರುವಂತೆ, ಆಗ ನಾನು ಕ್ಷೇತ್ರದ ಶಾಸಕನಾಗಿರಲಿಲ್ಲ. 'ಆರ್ಥಿಕ ಸ್ಥಿತಿ ಕೆಳಮಟ್ಟದಲ್ಲಿರುವ ಜನರಿಗೆ ಸಹಾಯ ಮಾಡುತ್ತೇವೆ' ಎಂದು ಹೇಳಿದ ರಮೇಶ್‌ಕುಮಾರ್ ಎಂಬ ಒಬ್ಬ ನಕ್ಸಲೈಟ್ ಇವೊತ್ತು ಜೈಲಿನಲ್ಲಿದ್ದಾರೆ. ಅವರು ಹಿಂದೊಮ್ಮೆ ನನಗೆ ಫೋನ್ ಮಾಡುವ ಮೂಲಕ ಜೀವ ಬೆದರಿಕೆ ಹಾಕಿದರು. ಕಾರಣ, "ನೀನು ನಿನ್ನ ಮತಕ್ಷೇತ್ರದ ಹಳ್ಳಿಗಳಲ್ಲಿ ತಿರುಗಾಡಬಾರದು, ತೊಂದರೆಯಲ್ಲಿರುವ ರೈತರಿಗೆ ಸಹಾಯ ಮಾಡಬಾರದು. ಸಹಾಯ ಮಾಡುವುದರಿಂದ ಆ ರೈತರು ಈಗ ನನ್ನ ಬಳಿ ಬರುತ್ತಿಲ್ಲ. ಈ ಕಾರಣಕ್ಕೋಸ್ಕರ ನೀನು ನಮಗೆ ಐವತ್ತು ಸಾವಿರ ರೂಪಾಯಿಗಳನ್ನು ಕೊಡಬೇಕು" ಎಂದಿದ್ದರು. ಅವರು ಈ ಬಗ್ಗೆ ಮೂರು ಸಲ ಫೋನ್ ಮಾಡಿ ಜೀವ ಬೆದರಿಕೆ ಹಾಕಿದರೂ ನಾನು ಅವರಿಗೆ ಅಂಜಿಕೊಳ್ಳಲಿಲ್ಲ. ಅದೇ ತರಹ ಅಲ್ಲಿ ಕಷ್ಟದಲ್ಲಿದ್ದ ಜನರಿಗೆ ಸಹಾಯ–ಸಹಕಾರ ನೀಡಿದೆ. ಅಲ್ಲೊಬ್ಬರು ದಕ್ಷ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಇದ್ದರು. ಅವರು ನಮಗೆ ಎಲ್ಲಾ ರೀತಿಯ ರಕ್ಷಣೆ ನೀಡುವ ಮೂಲಕ ಸಹಾಯ, ಸಹಕಾರವಿತ್ತರು. ಆ ಕಾರಣದಿಂದಾಗಿ ಅಲ್ಲಿದ್ದ ನಕ್ಸಲೈಟರನ್ನು ನಾನು ಎದುರಿಸಲು ಅನುಕೂಲವಾಯಿತು. ಈಗ ಹಳ್ಳಿಗಳು ಬಹಳಷ್ಟು ಉತ್ತಮ ರೀತಿಯಿಂದಿವೆ.

ಆದುದರಿಂದ, ಅಲ್ಲಿನ ನಕ್ಸಲೀಯ ಚಳವಳಿಗೂ ಪಶ್ಚಿಮಘಟ್ಟದಲ್ಲಿನ ನಕ್ಸಲೀಯ ಚಳವಳಿಗೂ ಸಂಬಂಧವಿದೆ. ನಮ್ಮ ಗಡಿ ಭಾಗದ ಎಲ್ಲಾ 31 ಹಳ್ಳಿಗಳೂ ನಕ್ಸಲೀಯರ ಪ್ರಭಾವ ಹೊಂದಿವೆ. ಅಲ್ಲಿನ ಹಳ್ಳಿಗಳು ಸುಧಾರಣೆಯಾಗುವ ದಿಸೆಯಲ್ಲಿ ಸುಮಾರು 15 ಕೋಟಿ ರೂಪಾಯಿಗಳ

ವೆಚ್ಚದಲ್ಲಿ ಒಂದು ಯೋಜನೆ ಹಮ್ಮಿಕೊಳ್ಳಬೇಕೆಂಬ ಪ್ರಸ್ತಾವವನ್ನು ಅಲ್ಲಿನ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆದರೆ, ಸದರಿ ಯೋಜನೆ ಇಲ್ಲಿಯವರೆಗೂ ಜಾರಿಯಾಗಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡಾಗ ನಕ್ಸಲೈಟ್ ಪೀಡಿತ ಭಾಗದ ಹಳ್ಳಿಗಳಲ್ಲಿರುವ ಜನರಿಗೆ ಒಂದು ಸಾವಿರ ಮನೆಗಳನ್ನು ಕಟ್ಟಿಕೊಟ್ಟರು. ಅದಾದ ನಂತರ ಮತ್ತೆ ಹೊಸದಾಗಿ ಮನೆಗಳನ್ನು ಕಟ್ಟಿಕೊಡಲಿಲ್ಲ, ಹಳ್ಳಿಯ ಅಭಿವೃದ್ಧಿಯೂ ಆಗಲಿಲ್ಲ. ಅಭಿವೃದ್ಧಿಯಾಗದ ಕಾರಣ ಅಲ್ಲಿನ ಜನರು ಅದೇ ಸ್ಥಿತಿಯಲ್ಲಿದ್ದಾರೆ. ಈ ನಕ್ಸಲೈಟರು ಜನರನ್ನು ಶೋಷಿಸುವುದಕ್ಕೆ ಇದ್ದಾರೆಯೇ ಹೊರತು ಅವರು ಜನರಿಗೆ ಸಹಾಯ ಮಾಡುವುದಕ್ಕಲ್ಲ. ತಮ್ಮ ಹೊಟ್ಟೆಪಾಡಿಗಾಗಿ, ತಮ್ಮ ವಿಚಾರಧಾರೆಗಾಗಿ ಅವರು ಹೋರಾಟ ನಡೆಸುತ್ತಿದ್ದಾರೆಯೇ ವಿನಾ ನಾವೇನಾದರೂ ಸುಧಾರಣೆ ಮಾಡಿದರೆ ಅವರು ವಿರೋಧಿಸುತ್ತಾರೆ. "ಈಗ ಹಳ್ಳಿಗಳು ಸುಧಾರಣೆಯಾಗದ ಕಾರಣಕ್ಕಾಗಿ ಸುಧಾರಿಸಲು ಅವರು ಬಂದಿದ್ದಾರೆ" ಎಂಬ ವಿಚಾರ ಹೇಳುತ್ತಿದ್ದಾರಲ್ಲ, ಇದು ಶುದ್ಧ ಸುಳ್ಳು. ಅವರು ಜನರನ್ನು ಶೋಷಿಸುವಂತಹವರು, ಶ್ರೀಮಂತರನ್ನು ಬೆದರಿಸಿ ರೊಕ್ಕ ವಸೂಲು ಮಾಡಿ ತಮ್ಮ ಉಪ ಜೀವನ ನಡೆಸುವಂತಹವರು. ರೈಫಲ್, ಪಿಸ್ತೂಲು ಮತ್ತು ಬಾಂಬುಗಳನ್ನು ಹಿಡಿದುಕೊಂಡು ಜನರನ್ನು ಹೆದರಿಸಿ ಅವರನ್ನು ಭಯಭೀತರನ್ನಾಗಿಸುವ ಮೂಲಕ ಅವರಿಂದ ತಮ್ಮ ಉಪ ಜೀವನ ನಡೆಸುತ್ತಿದ್ದಾರೆಯೇ ಹೊರತು ಅವರಿರುವುದು ಜನರ ಉದ್ಧಾರಕ್ಕಲ್ಲ. ಜನರಿಗೆ ಸಹಾಯವಾಗಬೇಕಾದರೆ, ಯಾವ್ಯಾವ ಹಳ್ಳಿಗಳಲ್ಲಿ ಮೂಲಭೂತ ಸೌಲಭ್ಯಗಳ ತೊಂದರೆ ಇದೆಯೋ, ಅಂತಹ ಹಳ್ಳಿಗಳಲ್ಲಿ ಸದರಿ ಸೌಲಭ್ಯಗಳನ್ನು ಕಲ್ಪಿಸಿಕೊಡುವುದರ ಜೊತೆಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಒದಗಿಸಿಕೊಡಬೇಕು. ಈ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟಾಗ ಮಾತ್ರ ಜನರು ಸುಧಾರಿಸುತ್ತಾರೆ. ಅಲ್ಲದೆ, ಅಲ್ಲಿನ ಕ್ಷೇತ್ರದ ಶಾಸಕರಿಗೆ ರಕ್ಷಣೆ ಒದಗಿಸಿಕೊಡುವ ಮೂಲಕ ಮೂಲಭೂತ ಸೌಲಭ್ಯಗಳಿಂದ ವಂಚಿತರಾದ ಹಳ್ಳಿಗಳ ಜನರಿಗೆ ಸೌಲಭ್ಯಗಳನ್ನು ಒದಗಿಸಿ ಹಳ್ಳಿಗಳನ್ನು ಸುಧಾರಿಸಲು ಅವರಿಗೆ ಅನುಕೂಲ ಮಾಡಿಕೊಡಬೇಕು. ಆ ಹಳ್ಳಿಯ ಜನರು ಸುಧಾರಿಸಬೇಕು, ಯಾವ ಜನರು ಕಷ್ಟದಿಂದ ಶೋಷಣೆಗೆ ಒಳಗಾಗಿದ್ದಾರೆ, ಯಾರು ಕಷ್ಟದಿಂದ ಇದ್ದಾರೆ ಅವರಿಗೆಲ್ಲಾ ಮೂಲಭೂತ ಸೌಕರ್ಯಗಳನ್ನು ಕೊಟ್ಟಾಗ ಈ ನಕ್ಸಲ್‌ಗಳು ಅಲ್ಲಿಂದ ಪಲಾಯನ ಮಾಡುತ್ತಾರೆ. ಅಲ್ಲಿರಲು ಸಾಧ್ಯವಿಲ್ಲ. ಎಲ್ಲಿ ಜನರು ಕಷ್ಟದಲ್ಲಿದ್ದಾರೆ ಅಂಥವರನ್ನು ಉಪಯೋಗ ಮಾಡಿಕೊಂಡು ಈ ಜನ ಇಂಥ ಎಲ್ಲಾ ಜನರಿಗೆ ಭಯಭೀತರನ್ನಾಗಿ ಮಾಡಿ ಆ ಜನರ ಶೋಷಣೆ ಮಾಡುತ್ತಾರೆ. ಯಾವ ಹಳ್ಳಿಗಳಲ್ಲಿ ನಕ್ಸಲೈಟ್ಸ್‌ನ ಪ್ರಭಾವವಿದೆ ಆ ಹಳ್ಳಿಗಳು ಸುಧಾರಣೆಯಾಗಬೇಕು, ಆ ಹಳ್ಳಿಯ ಜನರಿಗೆ ವ್ಯವಸ್ಥಿತವಾದಂಥ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಾನೂನು ವ್ಯವಸ್ಥೆಗಳು ಹದಗೆಟ್ಟುಹೋಗಿರುವ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ತಾವು ನಿಯಮ 69ರ ಅಡಿಯಲ್ಲಿ ಪರಿವರ್ತಿಸಿ ನಮಗೆಲ್ಲಾ ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ಧನ್ಯವಾದವನ್ನು ಸಲ್ಲಿಸುತ್ತಾ ಕಳೆದ ಸುಮಾರು ಹತ್ತು ತಿಂಗಳಿನಿಂದ ಹೊಸ ಸಮ್ಮಿಶ್ರ ಸರ್ಕಾರದ ಪ್ರಯೋಗ ರಾಜ್ಯದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವುದಕ್ಕೆ ಇದೂ ಒಂದು ಉದಾಹರಣೆಯನ್ನು ನಾವು ಸಾಕಷ್ಟು ಆಧಾರ ಸಹಿತವಾಗಿ ಹೇಳಬಹುದು. ಸಮ್ಮಿಶ್ರ ಸರ್ಕಾರದ ಪ್ರಯೋಗ ಸಫಲವಾಗುತ್ತಿಲ್ಲವೆನ್ನುವಂಥದ್ದು ಈಗ ಮತದಾರರ ಭಾವನೆಯೂ ಆಗಿದೆ.

ಮುಂಬರುವಂಥ ದಿನಗಳಲ್ಲಿ ಅದು ಅನೇಕ ರೂಪದಲ್ಲಿ ವ್ಯಕ್ತವಾಗುವಂಥದ್ದಿದೆ. ಈಗಾಗಲೇ ಅದು ವ್ಯಕ್ತವಾಗಲು ಪ್ರಾರಂಭವಾಗಿದೆ. ಮೊನ್ನೆ ಗ್ರಾಮಪಂಚಾಯಿತಿ ಚುನಾವಣೆಯ ಫಲಿತಾಂಶವೇ ಅದಕ್ಕೊಂದು ಸಾಕ್ಷಿ ಇದೆ. ನಾನು ಅದರ ವಿವರದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಈ ಸಮ್ಮಿಶ್ರ ಸರ್ಕಾರ ಹೇಗೆ ಕಾನೂನು ಸುವ್ಯವಸ್ಥೆಯಂಥ ಸಂವಿಧಾನಬದ್ಧವಾಗಿ ಈ ರಾಜ್ಯದ ನಾಗರೀಕರಿಗೆ ಕೂಡಲೇ ಬೇಕಾಗಿರುವಂಥ ತನ್ನ ಒಂದು ಅಧಿಕಾರದ ಆ ಸದ್ಬಳಕೆಯನ್ನು ಮಾಡಿಕೊಳ್ಳಲು ವಿಫಲವಾಗಿದೆ ಎನ್ನುವುದಕ್ಕೆ ಇದು ಒಂದು ಉದಾಹರಣೆ. ಸಂವಿಧಾನವನ್ನು ಪ್ರತಿಜ್ಞೆ ಮಾಡಿ ಅಧಿಕಾರ ಸ್ವೀಕಾರ ಮಾಡುವುದು ನಮ್ಮೆಲ್ಲರ ರೂಢಿಯಾಗಿದೆ. ಸಂವಿಧಾನದಲ್ಲಿ ಇರುವಂಥ ಅಂಶಗಳನ್ನು ನಾವು ಪಾಲಿಸಿದಾಗ, ನಾನು ಈ ಮೊದಲು ಒಂದು ಸಲ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಅದರ ಪ್ರತ್ಯಕ್ಷವಾದ ನೋವನ್ನು ಉಂಡಂತವರು ನಾವು. ಡಾ: ಚಿತ್ತರಂಜನ್, ಎಂ.ಎಲ್.ಎ. ಯವರನ್ನು ನಾವು ಕಳೆದುಕೊಂಡಂತವರು. ವಸಂತ್ ಅಸ್ನೋಟಿಕರ್, ಎಂ.ಎಲ್.ಎ. ರವರನ್ನು ಕಳೆದುಕೊಂಡಿದ್ದೇವೆ. ತಿಮ್ಮಪ್ಪ ನಾಯಕರು, ನಮ್ಮ ಪಕ್ಷದ ಅಧ್ಯಕ್ಷರನ್ನು ನಾವು ಕಳೆದುಕೊಂಡಿದ್ದೇವೆ. ಜವಾಬ್ದಾರಿಯುತವಾದಂಥ ಪ್ರಜಾಪ್ರಭುತ್ವದ ರೀತಿಯಲ್ಲಿ ಆಯ್ಕೆಯಾಗಿರುವಂಥ ಸರ್ಕಾರದ ಪ್ರಥಮ ಕರ್ತವ್ಯ ಅಂದರೆ ಈ ರಾಜ್ಯದ ಪ್ರತಿಯೊಬ್ಬ ನಾಗರೀಕರ ಜೀವನವನ್ನು, ಆಸ್ತಿಪಾಸ್ತಿಯ ರಕ್ಷಣೆ ಮಾಡುವಂಥದ್ದು. ಅದರಲ್ಲಿ ಈ ಸಮ್ಮಿಶ್ರ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಅಂಕಿಸಂಖ್ಯೆಗಳನ್ನು ನಮ್ಮ ಅನೇಕ ಹಿರಿಯರು ಉದಾಹರಣೆ ಮಾಡಿದ್ದಾರೆ. ಎಷ್ಟು ಕೊಲೆ ಸುಲಿಗೆಯಾಯಿತು, ಎಷ್ಟು ದರೋಡೆಗಳಾಯಿತು, ಯಾವ್ಯಾವ ರೀತಿ ಅಪರಾಧಗಳು ರಾಜ್ಯದಲ್ಲಿ ನಡೆಯುತ್ತಿದೆ, ಎಲ್ಲಾ ಅಪರಾಧಿ ಕೃತ್ಯಗಳಿಗೆ ತಾಣ ಇವತ್ತು ಕರ್ನಾಟಕ ಆಗುತ್ತಿದೆ ಎಂಬ ರೀತಿಯಲ್ಲಿ ಇವತ್ತು ವರದಿಗಳು ಬರುತ್ತಿರುವುದನ್ನು ನೋಡುತ್ತಿದ್ದೇವೆ, ಪ್ರತ್ಯಕ್ಷವಾದ ಘಟನೆಗಳನ್ನು ನಾವು ಕಾಣುತ್ತಿದ್ದೇವೆ, ಆದ್ದರಿಂದ ಇವತ್ತು ಸರ್ಕಾರ ಜನರ ಜೀವನವನ್ನು ಆಸ್ತಿಪಾಸ್ತಿಯನ್ನು ರಕ್ಷಣೆ ಮಾಡುವುದಕ್ಕೆ ಸಂಪೂರ್ಣವಾಗಿ ವಿಫಲವಾಗುತ್ತಿರುವ ಸಂದರ್ಭದಲ್ಲಿ ಈ ಸರ್ಕಾರ ನಿಜವಾಗಿ ಸಂವಿಧಾನಬದ್ಧವಾಗಿ ನಡೆದುಕೊಳ್ಳಲು ಆಗದೇ ಇರುವಂಥ ಗಂಭೀರವಾದ ಸ್ಥಿತಿಯನ್ನು ಈಗ ಅನುಭವಿಸುತ್ತಿದ್ದೇವೆ, ಎಲ್ಲಿ ಶಾಂತಿ ಇದೆ? ಎಲ್ಲಿ ಜನ ನೆಮ್ಮದಿಯಿಂದ ಬದುಕುವಂಥ ಸ್ಥಿತಿ ಇದೆ? ಇವತ್ತು ಶಾಲೆಗೆ ಹೋದ ಮಕ್ಕಳು ವಾಪಸ್ ಬರುತ್ತಾರೋ ಇಲ್ಲವೋ ಎಂಬ ಚಿಂತೆ ಇದೆ. ಅದು ಟ್ರಾಫಿಕ್ ಸಮಸ್ಯೆಯಿಂದಲ್ಲ, ಯಾರಾದರೂ ಹಾರಿಸಿಕೊಂಡು ಹೋಗಿಬಿಡುತ್ತಾರೋ ಎಂಬ ಭಯದಿಂದ, ಈ ಸರ್ಕಾರ ಇವತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ವಿಫಲ ವಾಗಿರುವುದಕ್ಕೆ ಅನೇಕ ಉದಾಹರಣೆಗಳು ಇದೆ. ಇವತ್ತು ಬೆಳಿಗ್ಗೆಯಿಂದ ಪೋಲೀಸ್ ಇಲಾಖೆಯ ವೈಫಲ್ಯದ ಬಗ್ಗೆ ಚರ್ಚೆಯಾಯಿತು. ಮಾನ್ಯ ವಾಜಪೇಯಿಯವರು ಇದ್ದಾಗ ಎನ್.ಡಿ.ಎ. ಸರ್ಕಾರದವರು ಸಾವಿರಾರು ಕೋಟಿ ರೂಪಾಯಿಗಳನ್ನು ಪೋಲೀಸ್ ವ್ಯವಸ್ಥೆ ಸುಧಾರಣೆ ಮಾಡಲು ಕೊಟ್ಟರು, ಅದಕ್ಕಾಗಿ ಅವರಿಗೆ ನಾವು ಅಭಿನಂದನೆಯನ್ನು ಸಲ್ಲಿಸಬೇಕು. ಆದರೆ ಪೋಲೀಸ್ ವ್ಯವಸ್ಥೆಯಲ್ಲಿ ಸುಧಾರಣೆ ಏನಾಗಿದೆ? ಇದು ಬಹಳ ಗಂಭೀರವಾದ ಪ್ರಶ್ನೆ. ಇಡೀ ವ್ಯವಸ್ಥೆಯನ್ನು ಸುಧಾರಣೆ ಮಾಡುವುದಕ್ಕೆ ಸಾಕಷ್ಟು ರೀತಿಯ ಸಹಾಯವನ್ನು ಕೇಂದ್ರ ಸರ್ಕಾರದಿಂದ ನಾವು ತೆಗೆದುಕೊಂಡರೂ ಸಹ ಇವತ್ತು ಭಯೋತ್ಪಾದಕರು ಅಥವಾ ಕಾನೂನು ಬಾಹಿರವಾದ ಚಟುವಟಿಕೆಗಳನ್ನು ನಡೆಸುತ್ತಿರುವಂಥ ಶಕ್ತಿಗಳು, ಗುಂಪುಗಳು ಯಾವ ವೇಗಕ್ಕೆ ಅವರು

ಆಧುನೀಕರಣಗೊಳ್ಳುತ್ತಿದ್ದಾರೋ ಆ ವೇಗಕ್ಕೆ ನಮ್ಮ ಇಲಾಖೆಯನ್ನು ಆಧುನೀಕರಣಗೊಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.- ಇವತ್ತು ಸರ್ಕಾರಕ್ಕೆ ರಾಜಕೀಯ ಅಧಿಕಾರವನ್ನು ಇಟ್ಟುಕೊಳ್ಳುವುದು ಮುಖ್ಯವೇ ಹೊರತು ರಾಜಕೀಯ ಅಧಿಕಾರದ ಮೂಲಕ ಜನರನ್ನು ರಕ್ಷಣೆ ಮಾಡಿ ರಾಜ್ಯದಲ್ಲಿ ಶಾಂತಿ ನೆಲೆಸುವಂತೆ ಮಾಡುವಂಥದ್ದು ಮುಖ್ಯವಾಗಿಲ್ಲವೆನ್ನುವಂಥದ್ದು ಗೋಚರವಾಗುತ್ತಿದೆ, ಈ ಸಂದರ್ಭದಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇನೆ, ಪೊಲೀಸ್ ಇಲಾಖೆಯನ್ನು ಅಥವಾ ಗುಪ್ತಾಚಾರ ಇಲಾಖೆಯನ್ನು ಅಪ್‌ಡೇಟ್, ಅಪ್‌ಗ್ರೇಡ್ ಮಾಡಬೇಕಾದ ಸಂಗತಿ ಬಹಳ ಮುಖ್ಯವಾಗಿದೆ. ಅದಕ್ಕೆ ಬೇಕಾದ ಗಮನವನ್ನು ಕೊಡುತ್ತಾರೆಂದು ಭಾವಿಸುತ್ತೇನೆ. ಅನೇಕ ಸಂದರ್ಭದಲ್ಲಿ ಇಂಥ ಘಟನೆಗಳು ನಡೆದಂಥ ಸಂದರ್ಭದಲ್ಲಿ ನ್ಯಾಯಾಂಗ ತನಿಖೆ ಎಂದು ಹೇಳುತ್ತಾರೆ ಅಥವಾ ಸಿ.ಓ.ಡಿ., ಸಿ.ಬಿ.ಐ. ತನಿಖೆಯೆಂದು ಹೇಳುತ್ತಾರೆ. ಎಲ್ಲಾ ತನಿಖೆಗಳ ರಚನೆ ಬಗ್ಗೆ ಸದನದಲ್ಲಿ ಘೋಷಣೆಯಾಗುತ್ತದೆ ಅಥವಾ ಹೊರಗಡೆ ಘೋಷಣೆಯಾಗುತ್ತದೆ. ಆದರೆ ಅದರ ವರದಿಗಳೆಲ್ಲಾ ಎಲ್ಲಿ ಹೋಗುತ್ತವೆ? ಇವತ್ತಿನ ತನಕ ಜಗನ್ನಾಥಶೆಟ್ಟಿಯ ಆಯೋಗದ ವರದಿ ಬಂದಿಲ್ಲ. ರಾಮಚಂದ್ರಯ್ಯ ಆಯೋಗದ ವರದಿ ಬರಲಿಲ್ಲ, ಏಕೆ ಭಟ್ಕಳದ ಕೋಮುಗಲಭೆಯಾಯಿತು ಅಥವಾ ಕಾನೂನು ಬಾಹಿರ ಚಟುವಟಿಕೆ ನಡೆಯಿತು ಅಥವಾ ಏಕೆ ಭಯೋತ್ಪಾದಕ ಚಟುವಟಿಕೆ ನಡೆಯಿತು ಎಂಬುದು ಗೊತ್ತಾಗಲಿಲ್ಲ. ಇವತ್ತು ರಾಮಚಂದ್ರಯ್ಯ ಆಯೋಗ ಡಾ: ಚಿತ್ತರಂಜನ್‌ರವರ ಹತ್ಯೆ ಏಕಾಯಿತು ಎಂಬುದು ಗೊತ್ತಾಗಲಿಲ್ಲ. ಹೀಗೆ ಅನೇಕ ಸಂಗತಿಗಳ ಬಗ್ಗೆ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ರಚನೆಯಾಗಿರುವಂಥ ಆಯೋಗಗಳು, ಸಮಿತಿಗಳು ಅದು ಕೊಟ್ಟಿರುವ ವರದಿಗಳೆಲ್ಲವೂ ಕೋಲ್ಡ್‌ಸ್ಟೋರೇಜ್‌ನಲ್ಲಿದೆಯೇ ಹೊರತು ಆ ವರದಿಯ ಪಾಯಿಂಟ್ಸ್ ಏನಿದೆ ಅದರ ಆಧಾರದ ಮೇಲೆ ನಮ್ಮ ಆಡಳಿತ ವ್ಯವಸ್ಥೆಯನ್ನು ಹೇಗೆ ಸುಧಾರಿಸಿಕೊಳ್ಳಬೇಕು ಎಂಬ ಬಗ್ಗೆ ಚಿಂತನೆಯೇ ಸರ್ಕಾರದಲ್ಲಿ ನಡೆಯುತ್ತಿಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗಿದೆ. ನಾನು ಇನ್ನು ಹೆಚ್ಚು ಸಮಯವನ್ನು ತೆಗೆದುಕೊಳ್ಳಲು ಬಯಸುವುದಿಲ್ಲ, ನಮ್ಮ ರಾಜ್ಯದ ಜನರು ಸರ್ಕಾರಕ್ಕೆ ಬಹಳ ಗಂಭೀರವಾಗಿ ಹೇಳಬೇಕಾದ ಸನ್ನಿವೇಶ ಹೊಂದಿದೆ ಎಂದರೆ, ನಮ್ಮ ರಾಜ್ಯವನ್ನು ನಕ್ಸಲೀಯರ ಚಟುವಟಿಕೆಯ ಕೇಂದ್ರ ಸ್ಥಾನವನ್ನಾಗಿ ಮಾಡುವುದಕ್ಕೆ ಅವಕಾಶ ಮಾಡಬೇಡಿ, ಐ.ಎಸ್.ಐ. ಚಟುವಟಿಕೆ ಮಾಡಲು ಅವಕಾಶ ಮಾಡಿಕೊಡಬೇಡಿ, ಮಾವೋವಾದಿಗಳು ಇತ್ಯಾದಿಗಳ ಹೆಸರಿನಲ್ಲಿ ಚಟುವಟಿಕೆ ಕೇಂದ್ರವಾಗಲು ಕರ್ನಾಟಕವನ್ನು ಬಿಡಬೇಡಿ, ಬೆಂಗಳೂರಿನಲ್ಲಿ ಆ ರೀತಿ ಚಟುವಟಿಕೆ ಮಾಡಲು ಬಿಡಬೇಡಿ, ಅದಕ್ಕೆ ಬೇಕಾಗಿರುವಂಥ ಬಲವಾದ ಆಡಳಿತ ಯಂತ್ರವನ್ನು ಚುರುಕುಗೊಳಿಸಿ ರಾಜಕೀಯ ಇಚ್ಛಾಶಕ್ತಿಯಿಂದ ಈ ರೀತಿ ಕಾನೂನು ಬಾಹಿರವಾದ ಚಟುವಟಿಕೆಯನ್ನು ಹತ್ತಿಕ್ಕುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹ ಮಾಡುತ್ತೇನೆ. ನನಗೆ ಸರ್ಕಾರ ಏನು ಮಾಡಲು ಆಗುತ್ತದೆ ಎನ್ನುವುದು ಈ ಮಾತನ್ನು ಹೇಳುವಾಗಲೇ ಅವರಿಗೆ ತೀರಾ ಅನುಮಾನ ಇದೆ. ಕಾಲಬುಡದಲ್ಲಿ 144ನೇ ಸೆಕ್ಷನ್ ಜಾರಿಯಲ್ಲಿದೆ, ಮೊನ್ನೆ ಬಜೆಟ್ ಮಂಡಿಸುವಾಗ ವಿಧಾನಸೌಧದ ಸುತ್ತಮುತ್ತ 144ನೇ ಸೆಕ್ಷನ್ ಜಾರಿಯಲ್ಲಿದೆ. ಮಾನ್ಯ ಹಣಕಾಸಿನ ಸಚಿವರು ಬಜೆಟ್ ಮಂಡಿಸಲು ಒಳಗೆ ಬಂದರೆ, ಮಾನ್ಯ ಮುಖ್ಯಮಂತ್ರಿಗಳು ಒಳಕ್ಕೆ ಬಂದರೆ 144ನೇ ಸೆಕ್ಷನ್ ಜಾರಿಯಲ್ಲಿರುವ ಸಂದರ್ಭದಲ್ಲಿ ಅವರದ್ದೇ ಪಕ್ಷದ, ತುಮಕೂರು ಜಿಲ್ಲೆಯ ಕಾಂಗ್ರೆಸ್ ಪಕ್ಷದ ಮಾಜಿ ಎಂ.ಪಿ.ಯವರು, ಡಾ: ಪರಮೇಶ್ವರ್‌ರಂಥ ಶಾಸಕರು, ಎಂ.ಎಲ್.ಸಿ. ಉಗ್ರಪ್ಪನಂಥವರು, ಮಾಜಿ ಎಂ.ಎಲ್.ಎ. ಮುದ್ದಹನುಮೇಗೌಡರು ಇವರೆಲ್ಲರೂ ತಮಗೇ ಪ್ರತಿಭಟನೆ ಮಾಡಿದರು, ಅವರನ್ನು ತಪ್ಪಿಸಿಕೊಂಡು ಬರಲು ಮುಖ್ಯಮಂತ್ರಿಯವರಿಗೆ, ಉಪ

ಮುಖ್ಯಮಂತ್ರಿಯವರಿಗೆ ಸಾಕಾಯಿತು. 144ನೇ ಸೆಕ್ಷನ್ ಜಾರಿಯಲ್ಲಿದೆ, ಬರೇ ಇಷ್ಟೇ ಜನರಲ್ಲ, ಅಂದರೆ 144ನೇ ಸೆಕ್ಷನ್ ಎಲ್ಲವೂ ಇದ್ದೂ ನೀವು ಒಳಕ್ಕೆ ಬರಲು ಇಷ್ಟು ಕಷ್ಟ ಪಡಬೇಕಾದ ಸಂದರ್ಭ ನಮ್ಮ ವಿಧಾನಸೌಧದ ಕಾಲುಬುಡದಲ್ಲಿ, ಇಂಥ ಪರಿಸ್ಥಿತಿ ನಮ್ಮ ಕಾಲಬುಡದಲ್ಲಿದೆ, ಹಾಗಾಗಿ ನಾವು ರಾಜ್ಯದಲ್ಲಿ ಎಂತೆಂಥ ಪರಿಸ್ಥಿತಿ ಇದೆ ಎಂಬುದನ್ನು ಊಹೆ ಮಾಡಿಕೊಳ್ಳಬಹುದು. ಆದ್ದರಿಂದ ಸರ್ಕಾರ ಬಹಳ ಗಂಭೀರವಾಗಿ ಈ ವಿಷಯವನ್ನು ತೆಗೆದುಕೊಳ್ಳಬೇಕಾದ ಅಗತ್ಯವಿದೆ. ನಾನು ಇನ್ನೆರಡು ವಿಷಯವನ್ನು ಮಾತ್ರ ಪ್ರಸ್ತಾಪ ಮಾಡಲು ಬಯಸುತ್ತೇನೆ. ಮೊದಲನೆಯದು ಹೈದ್ರಾಬಾದ್ ಕರ್ನಾಟಕದ ಜೊತೆಯಲ್ಲಿ, ಮಾನ್ಯ ಪಾಪರೆಡ್ಡಿಯವರು ಮಾತನಾಡುತ್ತಾ ಹೇಳಿದರು. ಹೈದ್ರಾಬಾದ್ ಕರ್ನಾಟಕದಲ್ಲಿ ನಕ್ಸಲೀಯ ಚಟುವಟಿಕೆ ಪ್ರಾರಂಭವಾಗಿರುವುದು. ಆ ನಕ್ಸಲೀಯ ಚಟುವಟಿಕೆಯ ಬಗ್ಗೆ ಸಾಕಷ್ಟು ವಿಸ್ತಾರವಾಗಿ ಚರ್ಚೆಯಾಗಿದೆ. ಇವತ್ತು ತುಮಕೂರು ಕೋಲಾರ ಜಿಲ್ಲೆಯ ಜೊತೆಯಲ್ಲಿ ಹೈದ್ರಾಬಾದ್ ಕರ್ನಾಟಕದ ಭಾಗ ನಿರ್ಲಕ್ಷ್ಯಕ್ಕೆ ಒಳಪಟ್ಟಿರುವುದರಿಂದ ಇವತ್ತು ಉತ್ತರ ಕರ್ನಾಟಕವೂ ನಿರ್ಲಕ್ಷ್ಯಕ್ಕೆ ಒಳಪಟ್ಟಿರುವುದರಿಂದ ಆ ಭಾಗ ಇವತ್ತು ನಕ್ಸಲೀಯ ಚಟುವಟಿಕೆಯ ಕೇಂದ್ರವಾಗಿರುವುದು ನಮಗೆಲ್ಲಾ ಗೊತ್ತಿದೆ. ಏಕೆಂದರೆ ಅದು ಆಂಧ್ರ ಪ್ರದೇಶದ ಗಡಿ ಭಾಗವೂ ಹೌದು. ಅಲ್ಲಿಯ ಸಮಸ್ಯೆಗಳ ಬಗ್ಗೆ, ಅಭಿವೃದ್ಧಿಯ ಬಗ್ಗೆ, ಡಾ: ನಂಜುಂಡಪ್ಪನವರ ವರದಿಯ ಆಧಾರವಾಗಿ ಇನ್ನೂ ಅನೇಕ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆ, ಅದೇ ರೀತಿಯ ಸಮಸ್ಯೆಗಳು ಇವತ್ತು ಮಲೆನಾಡಿನ ಬೆಲ್ಟ್‌ನಲ್ಲಿದೆ. ಇವತ್ತು ಚಿಕ್ಕಮಗಳೂರು, ಶಿವಮೊಗ್ಗ ಅಥವಾ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ನಕ್ಸಲೀಯ ಚಟುವಟಿಕೆಗಳು ಬೆಳೆದಿರುವುದಕ್ಕೆ ಕಾರಣ ನಮಗೆಲ್ಲಾ ಇದುವರೆಗೆ ಚರ್ಚೆಯಾದಂತೆ ಅಭಿವೃದ್ಧಿಗೆ ಗಮನ ಕೊಡದಿರುವಂಥದ್ದು, ನಾನು ಮಾನ್ಯ ಉಪ ಮುಖ್ಯಮಂತ್ರಿ ಯವರಲ್ಲಿ ವಿನಂತಿಸುತ್ತೇನೆ, ಹೇಗೆ ಸರ್ಕಾರ ಜನರಿಗೆ ಸ್ವತಃ ಭಯೋತ್ಪಾದಕ ಮನೋಭಾವನೆಯನ್ನು ಬೆಳೆಸಲು ಕಾರಣವಾಗುತ್ತದೆಂದರೆ, ನನ್ನ ಕ್ಷೇತ್ರದಲ್ಲಿ ಮೊನ್ನೆ ಸ್ವಜಲಧಾರ ಯೋಜನೆಯಲ್ಲಿ ಒಂದೂವರೆ ಲಕ್ಷ ರೂಪಾಯಿ ಒಂದು ಹಳ್ಳಿಗೆ ಮಂಜೂರಾಗಿದೆ, ನಮ್ಮದು 80 percent forest, ನಮ್ಮ ಸರ್ಕಾರಿ ದಾಖಲೆಗಳ ಪ್ರಕಾರವಾಗಿ. ಆ ಸ್ವಜಲಧಾರ ಒಂದೂವರೆ ಲಕ್ಷ ಯೋಜನೆಯಲ್ಲಿ ಎಷ್ಟು ದೊಡ್ಡ ಕಾಮಗಾರಿಯಾಗಬಹುದು ಎಂಬುದು ನಮಗೆಲ್ಲಾ ಗೊತ್ತಿದೆ. ಒಂದು ಫೌಂಡೇಷನ್ ಹಾಕಿ ಒಂದು ಟ್ಯಾಂಕ್ ಇಡುವುದು, ನಮ್ಮ ....Pipe type ಬರುತ್ತದಲ್ಲಾ ಅದನ್ನು ಇಡುವುದು, ಅದನ್ನು ಇಡಲು 6X6 ಇದ್ದರೆ ಸಾಕು, ಅದು ಬಹಳ ದೊಡ್ಡ ಜಾಗವಾಯಿತು. ಅದಕ್ಕೆ ಫೌಂಡೇಷನ್ ಹಾಕಿದ್ದಾರೆ, ಮೇಲುಗಡೆ ಬೆಟ್ಟ, ಅಲ್ಲಿ ಅರಣ್ಯ ಜಾಗ, ಅರಣ್ಯ ಜಾಗದಲ್ಲಿ ಫೌಂಡೇಷನ್ ಹಾಕಿದ್ದಾರೆ, ಇಲಾಖೆಯವರು ಹೋಗಿ ನಿಲ್ಲಿಸುತ್ತಾರೆ, ಕುಡಿಯುವ ನೀರಿಗೆ ಅಭಾವವಿದೆ, ನಮಗೆ ಆ ಜಾಗ ಬಿಟ್ಟರೆ ಬೇರೆ ಜಾಗ ಇಲ್ಲ, 80 Percent forest ಹಳ್ಳಿಯ ಮೇಲಿದೆ, ನಾವು ಮರ ಕಡಿದಿಲ್ಲ, ಕಾಡನ್ನು ಕಡಿದಿಲ್ಲ, ಏನೂ ಮಾಡಿಲ್ಲ, ಅಲ್ಲಿ ಮಣ್ಣು ತೆಗೆದು ಫೌಂಡೇಷನ್ ಹಾಕಿದ ಮೇಲೆ system ಕೂರಿಸಲು ಹೋದರೆ ತಡೆ ಹಾಕಿ ಇಟ್ಟಿದ್ದಾರೆ. ಇದರಿಂದ ಜನರಿಗೆ ಸಿಟ್ಟು ಬಾರದಿರಲು ಸಾಧ್ಯವೇ? ನನಗೇ ಸಿಟ್ಟು ಬರುತ್ತದೆ, ಆ RFO ಎದುರಿಗೆ ಬರಲಿ ಎಂದು ನಾನೇ ಅನ್ನುವಂತಹ ಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ನನಗೇ ಈ ರೀತಿಯ ಭಾವನೆಗಳು ಸಹಜವಾಗಿ ಬರುವುದಕ್ಕೆ ಸರ್ಕಾರದ ಅನೇಕ ಇಲಾಖೆಗಳು ಕಾರಣವಾಗಿವೆ. ಇವತ್ತು ZP, PWD ಅಥವಾ ಬರಗಾಲ ಪರಿಹಾರ ಕಾಮಗಾರಿ ಇತ್ಯಾದಿ ಯಾವುದೇ ಯೋಜನೆಯ ಅಡಿಯಲ್ಲಿ ಹಳ್ಳಿಯೊಂದರಲ್ಲಿ ಒಂದು ಸಣ್ಣ ರಸ್ತೆಯೊಂದನ್ನು ನಿರ್ಮಿಸಬೇಕೆಂದರೆ, ಅದಕ್ಕೆ forest guards ಅಡ್ಡಿ ಮಾಡುತ್ತಾರೆ. ಸಣ್ಣ ಪುಟ್ಟ ಅಭಿವೃದ್ಧಿ

ಕೆಲಸಕ್ಕೆ ಅವರೇಕೆ ಅಡ್ಡಿ ಪಡಿಸಬೇಕು? ನಾವೇನೂ ದೊಡ್ಡ ಕಾಡನ್ನು ಕಡಿಯುತ್ತಿಲ್ಲ. ಕಾಡುಗಳ್ಳರನ್ನು ಬೇಕಾದರೆ ಇವರು ಹಾಡು ಹಗಲೇ ಬಿಟ್ಟು ಬಿಡುತ್ತಾರೆ. ಸರ್ಕಾರದಲ್ಲಿರುವಂತಹ ಅನೇಕ ಅಧಿಕಾರಿಗಳೂ ಸಹ ಕಾಡುಗಳ್ಳರೊಂದಿಗೆ ಶಾಮೀಲಾಗಿದ್ದಾರೆ. ಆದರೆ ನಾವು ಅಭಿವೃದ್ಧಿ ಕೆಲಸಗಳನ್ನು ಮಾಡಬೇಕೆಂದರೆ, ಇವರಿಂದ ಯಾವುದೇ ರೀತಿಯ ಸಹಕಾರ ನಮಗೆ ಸಿಗುತ್ತಿಲ್ಲ. ಕರೆಂಟ್ ಲೈನ್ ಅನ್ನು ಹಾಕಲಿಕ್ಕೂ ಸಹ ಬಿಡುವುದಿಲ್ಲ. ಮಾನ್ಯ ಅಧ್ಯಕ್ಷರೇ, ಇದು ನಿಮಗೂ ಗೊತ್ತಿದೆ. ನಿಮ್ಮ ಜಿಲ್ಲೆ ಸಹ ಮಲೆನಾಡಿನ ಭಾಗವೇ ಆಗಿದೆ. ನಾವು ರಸ್ತೆ ಬದಿಗೆ ಕರೆಂಟ್ ಲೈನ್ ಹಾಕುತ್ತೇವೆಂದರೆ ....

ಶ್ರೀ ಎಸ್.ರಾಜೇಂದ್ರನ್: ಯಾವ್ಯಾವ ಜಾಗದಲ್ಲಿ ಏನೇನು ಮಾಡಬೇಕೆಂಬುದನ್ನು ಸರ್ಕಾರದವರು ಹೇಳಿದ್ದಾರೆ. ಕಾಡಿನಲ್ಲಿ ಮರಗಳನ್ನು ಕಟ್ ಮಾಡಬೇಕು, ಅದನ್ನು ಬಿಟ್ಟು ನೀವು ಅಲ್ಲಿ ಟ್ಯಾಂಕ್ ಮಾಡಿದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾನು ಕರೆಂಟ್ ಲೈನ್ ಹಾಕುವ ಬಗ್ಗೆ ಮಾತನಾಡುತ್ತಿದ್ದೆ. ಅಕೇಶಿಯಾ ಗಿಡ ಇರಬಹುದು, ಬಾಂಬೂ ಪೋಲ್ಸ್ ಇರಬಹುದು, ಇದನ್ನು ಕಟ್ ಮಾಡಲಿಕ್ಕೂ ಕೂಡ ಅವಕಾಶ ಕೊಡುವುದಿಲ್ಲ. ರಸ್ತೆ ಪಕ್ಕದಲ್ಲಿರುವುದನ್ನು ಕಟ್ ಮಾಡಲಷ್ಟೇ ನಾವು ಕೇಳುತ್ತಿರುವುದು, ನಾವೇನೂ ಅರಣ್ಯ ಮಧ್ಯ ಭಾಗದಲ್ಲಿ ಕರೆಂಟ್ ಲೈನ್ ತೆಗೆದುಕೊಂಡು ಹೋಗಲು ಕೇಳುತ್ತಿಲ್ಲ. ಈ ರೀತಿ ಅಧಿಕಾರಿಗಳು ಕಾನೂನನ್ನು ಮಾನವೀಯ ದೃಷ್ಟಿಕೋನದಲ್ಲಿ ಸ್ಪಂದನೆ ಮಾಡುವಂತಹ ರೀತಿಯಲ್ಲಿ ಅಳವಡಿಸದೇ ಹೋದರೆ ಜನ ಆಕ್ರೋಶಗೊಳ್ಳುತ್ತಾರೆ. ಅವರು ಆಕ್ರೋಶಗೊಂಡಿರುವಂತಹ ಧ್ವನಿ ಬೇರೆ ಬೇರೆ ರೀತಿಯಲ್ಲಿ ಪ್ರಕಟವಾಗುವುದಿದೆ. ಹಾಗಾಗಿ ಸರ್ಕಾರದಲ್ಲಿರುವವರ ಜವಾಬ್ದಾರಿ, ವಿಶೇಷವಾಗಿ ಅಧಿಕಾರಿಗಳ ಜವಾಬ್ದಾರಿ, ಕಾನೂನನ್ನು ಸರಿಯಾಗಿ ಜಾರಿಗೆ ತರಬೇಕು. ಯಾರಿಗೋ ತೊಂದರೆ ಕೊಡಬೇಕೆನ್ನುವ ದೃಷ್ಟಿಯಿಂದ ನಾವ್ಯಾರೂ ಇಲ್ಲಿ ಕಾನೂನುಗಳನ್ನು ಮಾಡಿಲ್ಲ. ನಮಗೆ ಜವಾಬ್ದಾರಿ ಇದೆ. ಆದರೆ ಆ ಕಾನೂನನ್ನು ಅಳವಡಿಕೆ ಮಾಡುವಾಗ ಅದಕ್ಕೆ ಮಾನವೀಯ ಸ್ಪಂದನ ಬೇಕಾಗುತ್ತದೆ. ಮಾನವೀಯ ಸ್ಪಂದನ ಇಲ್ಲದಿರುವಂತಹ ಕಾನೂನಿನ ಅಳವಡಿಕೆ ಏನಿದೆಯೋ, ಅದರಿಂದಾಗಿ ಇವತ್ತು ಜನ ಆಕ್ರೋಶಗೊಳ್ಳುತ್ತಿದ್ದಾರೆ, ರೋಸಿ ಹೋಗುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಬಹಳ ಮುಖ್ಯವಾಗಿ ಯೋಚನೆ ಮಾಡಬೇಕಾಗಿದೆ. ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಐ.ಎ.ಎಸ್. ಅಧಿಕಾರಿಗಳಿಂದ ಹಿಡಿದು ಎಲ್ಲಾ ಅಧಿಕಾರಿಗಳಿಗೆ, ನಿಮ್ಮ ಕಾನೂನುಗಳಲ್ಲಿ ಮಾನವೀಯ ಸ್ಪಂದನ ಇರಬೇಕು ಎನ್ನುವಂತಾದ್ದರ ಬಗ್ಗೆ, ಅವರಿಗೆ ಯಾವ ರೀತಿಯಲ್ಲಿ ಹೇಳಬೇಕೋ, ಆ ರೀತಿಯಲ್ಲಿ ಹೇಳಿ. ಏಕೆಂದರೆ, ಅವರು ಪೇಪರ್ ಅಂದರೆ ಬರೇ ಪೇಪರ್ ಒಂದನ್ನು ಮಾತ್ರ ನೋಡುತ್ತಾರೆ. ಅದರಲ್ಲಿ ಮಾನವೀಯ ಭಾವನೆ ಮತ್ತು ದೃಷ್ಟಿ ಕೋನಗಳು ಎಳ್ಳಷ್ಟೂ ಅವರಿಗೆ ಇರುವುದಿಲ್ಲ. ಬ್ರಿಟಿಷ್ ಕಾಲದ ವ್ಯವಸ್ಥೆಯಲ್ಲಿ ಅವನ್ನೆಲ್ಲಾ ಕಲಿಸಲೇ ಇಲ್ಲವೆಂದು ಕಾಣುತ್ತದೆ. ಅದೇ ವ್ಯವಸ್ಥೆಯಲ್ಲೇ ಅವರು ಇರುವುದರಿಂದ, ಅವರು ಹಾಗೆಯೇ ಮುಂದುವರೆಯುತ್ತಿದ್ದಾರೆ. ಕಾನೂನಿನ ಅಳವಡಿಕೆಗಳಲ್ಲಿ ಮತ್ತು ಕಾನೂನನ್ನು implement ಮಾಡುವಲ್ಲಿ ಮಾನವೀಯ ಸ್ಪಂದನದ ಅಗತ್ಯತೆ ಇದೆ. ಅದಕ್ಕೆ ಬೇಕಾಗಿರುವಂತಹ ಮಹತ್ವವನ್ನು, ಆ ರೀತಿಯ ಒಂದು ವಿಶೇಷವಾದಂತಹ ಗಮನವನ್ನು ಸರ್ಕಾರ ಕೊಡಬೇಕಾಗಿದೆ ಅನ್ನುವಂತಹ ಮಾತನ್ನು ಹೇಳುತ್ತೇನೆ. ನಮ್ಮ ಜಿಲ್ಲೆಗಳಿಗಿಂತಲೂ ಮಲೆನಾಡಿನ ಜಿಲ್ಲೆಗಳಲ್ಲಿ ಅನೇಕ ಈ ರೀತಿಯ ಪ್ರಾಥಮಿಕ ಸೌಲಭ್ಯದ ಕೊರತೆಗಳು ಇವೆ. ಆ ಸೌಲಭ್ಯಗಳನ್ನು ಸರ್ಕಾರ ಮುಂಚೂಣಿಯಲ್ಲಿ ನಿಂತು ಕೊಡುವುದಕ್ಕೆ ಮುಂದಾಗಬೇಕು.

ಹಾಗಾದಾಗ ಈ ರೀತಿಯ ಚಟುವಟಿಕೆಗಳು ನಡೆಯುವುದಕ್ಕೆ ಅವಕಾಶವಾಗುವುದಿಲ್ಲ. ಇನ್ನು ಬುದ್ಧಿಜೀವಿಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾನು ಮತ್ತೆ ಮತ್ತೆ ಅದರ ಬಗ್ಗೆ ಹೇಳುವುದಕ್ಕೆ ಬಯಸುವುದಿಲ್ಲ. ಬುದ್ಧಿಜೀವಿಗಳ ಬುದ್ಧಿ ಯಾವ ಮಟ್ಟದ್ದು ಎಂದು ಅರಿಯುವಂತಹ ಬುದ್ಧಿ ಸರ್ಕಾರಕ್ಕೆ ಇರಬೇಕು. ಅವರನ್ನು ಕರೆದು, ಅವರನ್ನು ಓಲೈಸಿಕೊಂಡು, ಅವರು ಹೇಳಿದಂತೆ ಕೇಳುವಂತಹ ಸರ್ಕಾರಗಳೇ ಆದರೆ, ಆ ಬುದ್ಧಿಜೀವಿಗಳ ವಿಕೃತ ಬುದ್ಧಿಯಂತೆ ಸರ್ಕಾರವೂ ವಿಕೃತವಾದಂತಹ ದಾರಿಯಲ್ಲಿ ಮುನ್ನೆಡೆಯಬೇಕಾದಂತಹ ಸಂದರ್ಭಗಳು ಇರುತ್ತದೆ. ಬುದ್ಧಿಜೀವಿಗಳು ರಚನಾತ್ಮಕವಾಗಿ ಸಲಹೆಗಳನ್ನು ಕೊಟ್ಟರೆ, ಅವರು ಸಮಾಜದ ಹಿತದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ, ಸಮಾಜದಲ್ಲಿ ಸಾಮರಸ್ಯ, ಪ್ರೀತಿ, ವಿಶ್ವಾಸ ಮೂಡಿಸುವುದಕ್ಕೆ ಸಲಹೆ ಕೊಟ್ಟರೆ, ಅದನ್ನು ಸ್ವೀಕಾರ ಮಾಡೋಣ. ಆದರೆ ವಿಕೃತವಾದಂತಹ ಮನೋಭಾವನೆಯನ್ನು ಬೆಳೆಸುವಂತಹ ಬುದ್ಧಿಜೀವಿಗಳು, ತಮ್ಮ ವಿಕೃತಿಯನ್ನು ಸರ್ಕಾರದ ಮೇಲೆ ಹೇರಿ, ಅದನ್ನು ಆಡಳಿತ ವ್ಯವಸ್ಥೆಯಲ್ಲಿ ತರುವುದಕ್ಕೆ ಮುಂದಾದರೆ, ಅದಕ್ಕೆ ಸರ್ಕಾರ ಕಡಿವಾಣ ಹಾಕಬೇಕು. ನಕ್ಸಲೀಯ ಚಟುವಟಿಕೆ ಇರಬಹುದು, ಕಾನೂನು ಬಾಹಿರವಾಗಿ ನಡೆಯುತ್ತಿರುವಂತಹ ಚಟುವಟಿಕೆಗಳು ಇರಬಹುದು, ಇದನ್ನು ನಿಗ್ರಹಿಸುವುದಕ್ಕೆ ತನ್ನ ರಾಜಕೀಯ ಇಚ್ಛಾಶಕ್ತಿಯನ್ನು ಸರ್ಕಾರ ತೋರಿಸಬೇಕು ಎನ್ನುವಂತಹ ಆಗ್ರಹವನ್ನು ಮಾಡುತ್ತೇನೆ. ನಿಜವಾಗಿ ಸರ್ಕಾರ ಸಂಪೂರ್ಣವಾಗಿ ಈ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ವಿಫಲವಾಗಿದೆ. ಆ ವೈಫಲ್ಯತೆಯ ಹಿನ್ನೆಲೆಯಲ್ಲಿ ಸರ್ಕಾರ ಇಂತಹ ಒಂದು ಸಂದರ್ಭದಲ್ಲಾದರೂ ಎಚ್ಚೆತ್ತುಕೊಳ್ಳಬೇಕು. ರಾಜ್ಯದ ಜನತೆಗೆ ಉತ್ತಮವಾದಂತಹ ಆಡಳಿತ ಕೊಡಬೇಕಾದಂತಹ ಸಂದರ್ಭ ಇಲ್ಲಿದೆ. ಆ ದಿಕ್ಕಿನಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಲಿ ಎಂದು ಆಗ್ರಹಿಸುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ : ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 53 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 15ನೇ ಮಾರ್ಚ್ 2005ರಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

ಕರ್ನಾಟಕ ವಿಧಾನಸಭೆ

ಮಂಗಳವಾರ 15ನೇ ಮಾರ್ಚ್ 2005ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ
ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ. ವಿಷಯ : ಉಡುಪಿ ಘಟನೆ ಬಗ್ಗೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಇರಾಕ್‌ನಲ್ಲಿ ಆಗದೇ ಇರತಕ್ಕಂಥ ಅಮಾನುಷ ಕೃತ್ಯ ಉಡುಪಿಯಲ್ಲಿ ಆಗಿದೆ ಎಂದು ಇವತ್ತಿನ ಪತ್ರಿಕೆಗಳಲ್ಲಿ ಬಂದಿದೆ.

ಅಧ್ಯಕ್ಷರು : ಮೊದಲು ಪ್ರಶ್ನೋತ್ತರ ಅನಂತರ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ರೀತಿಯಾಗಿ ಇರಾನ್ ಮತ್ತು ಇರಾಕ್ ದೇಶಗಳಲ್ಲಿಯೂ ಕೂಡ ಆಗುವುದಿಲ್ಲ. ಈ ಕೆಲಸವನ್ನು ಪೋಲಿಸ್‌ನವರು ಕೂಡ ಮಾಡಿಲ್ಲ. ಯಾವುದೋ ಒಂದು ಗ್ಯಾಂಗ್ ಅವರನ್ನು ಹಿಡಿದು ಬಟ್ಟೆ ಬಿಚ್ಚಿ ಎರಡು ರಾತ್ರಿ ಇಟ್ಟುಕೊಂಡು ಹಿಂಸಿಸಿದ್ದಾರೆ.

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಿ. ಪ್ರಶ್ನೋತ್ತರ ಆದಮೇಲೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಈ ದೃಶ್ಯವನ್ನು ನೋಡಿಯಾದರು ತಾವು ಹೇಳಬೇಕು, ಪ್ರಶ್ನೋತ್ತರಕ್ಕಿಂತ ಇದು ಗಂಭೀರವಾದಂಥದ್ದು. ನಾಗರೀಕರು, ಪ್ರಜ್ಞಾವಂತರು ತಲೆ ಎತ್ತಿ ಓಡಾಡುವುದಕ್ಕೆ ಆಗುತ್ತದೆಯೇ? ಈ ರೀತಿ ಮಾಡಿರತಕ್ಕಂಥದ್ದು ಕರ್ನಾಟಕ ರಾಜ್ಯಕ್ಕೆ ಅವಮಾನವಾಗಿದೆ. ಯಾರೋ ಒಬ್ಬರು ದನದ ವ್ಯಾಪಾರ ಮಾಡುತ್ತಿದ್ದಾರೆಂದು ತಿಳಿದು...

ಅಧ್ಯಕ್ಷರು : ಪ್ರಶ್ನೋತ್ತರ ಆದಮೇಲೆ ತಮಗೆ ಅವಕಾಶ ಕೊಡುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಆ. ವಿಷಯ : ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಇನ್ನೊಂದು ಬಹಳ ಗಂಭೀರವಾದ ಪರಿಸ್ಥಿತಿಯನ್ನು ಈ ಸಮಯದಲ್ಲಿ ಹೇಳಬೇಕಾಗಿದೆ. ಅದೇನೆಂದರೆ, ಮಹಾರಾಷ್ಟ್ರದ ಮಾನ್ಯ ರಾಜ್ಯಪಾಲರು ನಮ್ಮ ರಾಜ್ಯದ ಹಿತವನ್ನು ಕಾಪಾಡುವ ಬದಲು ಬೆಳಗಾಂನ್ನು ಬಿಡತಕ್ಕಂಥ ವಿಚಾರವನ್ನು ಜಂಟಿ ಅಧಿವೇಶನದಲ್ಲಿ ಅವರು ಮಾತನಾಡಿದ್ದಾರೆ. ಈ ಸದನದಲ್ಲಿ ಅವರು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ನಮ್ಮ ರಾಜ್ಯದ ಹಿತವನ್ನು ಕಾಪಾಡುವ ಬಗ್ಗೆ ತೀವ್ರವಾಗಿ ಹೋರಾಟ ಮತ್ತು ಮಾತನಾಡಿ ಇದಕ್ಕೆ